



# ಮಾಸ್ಟರ್ ಆಗಿ ಬೆಳೆಯಬೇಕೆಂದರೆ...?

ರಚನೆ: ಬ್ರಹ್ಮರ್ಷಿ ತಟವರ್ತಿ ವೀರ ರಾಘವ ರಾವ್

ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ

ಎಲ್ಲರೂ PMC ಕನ್ನಡ ಚಾನೆಲ್‌ಗೆ ಚಂದಾದಾರರಾಗಿ

ENERGY WISDOM CONSCIOUSNESS

**PMC ಕನ್ನಡ**

ಪ್ರತಿ ಕ್ಷಣ... ಸತ್ಯ ದರ್ಶನ

ನಿಯಮಿತವಾಗಿ PMC ಕನ್ನಡ ನೇರಪ್ರಸಾರದ ನವೀಕರಣಗಳು (Updates) ಮತ್ತು
PSSM ಕರ್ನಾಟಕ ನವೀಕರಣಗಳನ್ನು (Updates) ಪಡೆಯಲು ದಯವಿಟ್ಟು
ನಿಮ್ಮ ಹೆಸರು, ನಗರದ ಹೆಸರು, ಇಮೇಲ್ ಐಡಿಯನ್ನು PMC ಕನ್ನಡ
WhatsApp No : 72047 46836 ಸಂಖ್ಯೆಗೆ ಕಳುಹಿಸಿ.



# ಮಾಸ್ಟರ್ ಆಗಿ ಬೆಳೆಯಬೇಕೆಂದರೆ..?



**ರಚನೆ: ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್**

**ಕನ್ನಡಕ್ಕೆ ಅನುವಾದ: ಕೆ. ಶೋಭಾಲತ ಮಲ್ಲಿಕಾರ್ಜುನ**

**ಪ್ರತಿಗಳು ದೊರೆಯುವ ಸ್ಥಳ**

**ಶ್ರೀರಾಮ ಪಬ್ಲಿಕೇಶನ್ಸ್**
ಶ್ರೀ ರಾಮಧಾಮ ಧ್ಯಾನ ಮಂದಿರ
ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರು– 560 066

---

**ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್**
ಕೆಬ್ಬೆದೊಡ್ಡಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ ರಸ್ತೆ, ಬೆಂಗಳೂರು

**MASTER AAGI BELEYABEKENDARE..?**
Edited & Published by Sriram Publications,
Sri Ramadhama Dhyana Mandira
Narayanappa Garden, Whitefield,
Bangalore - 560066, M.: 9449695503, 8050082689

| | | |
|---|---|---|
| ಮೊದಲನೆಯ ಮುದ್ರಣ | : | 2026 |
| ಹಕ್ಕುಗಳು | : | ಪ್ರಕಾಶಕರು |
| ಪ್ರಕಾಶಕರು | : | ಶ್ರೀರಾಮ ಪಬ್ಲಿಕೇಶನ್ಸ್<br>ಶ್ರೀರಾಮಧಾಮ ಧ್ಯಾನ ಮಂದಿರ<br>ನಾರಾಯಣಪ್ಪ ಗಾರ್ಡನ್ ವೈಟ್ ಫೀಲ್ಡ್<br>ಬೆಂಗಳೂರು 560066<br>ಮೊ: 9449695503 |
| ಪ್ರತಿಗಳು | : | 500 |
| ಬೆಲೆ | : | ರೂ. 50 |
| ಪುಟಗಳು | : | 40 |
| ಅಕ್ಷರ ಜೋಡಣೆ | : | ಸೋಮನಾಥ ರೆಡ್ಡಿ, ಮೊ.: 9739996589 |




**ಒಬ್ಬ ಮನುಷ್ಯನು ದೇವರಾಗಲು ಬಯಸಿದರೆ, ಅವನು ಸಣ್ಣ ತಪ್ಪುಗಳನ್ನು ಅಥವಾ ಪಾಪಗಳನ್ನು ಮಾಡಬಾರದು... ಅದರೊಂದಿಗೆ ಅವನು ಮಹಾನ್ ಪುಣ್ಯಗಳನ್ನು ಮತ್ತು ಶ್ರೇಷ್ಠ ಕಾರ್ಯಗಳನ್ನು ಮಾಡಬೇಕು. ಅದು ಮಾನವ ಜೀವನದ ಪರಾಕಾಷ್ಠೆ...**
**– ಬ್ರಹ್ಮರ್ಷಿ ತಟವರ್ತಿ ವೀರರಾಘವ್ ರಾವ್**

# ಸ್ವ ಪರಿಚಯ

ನನ್ನ ಹೆಸರು ಎಚ್.ಎನ್. ಶ್ರೀನಿವಾಸ ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್. ಪದವಿ ಪಡೆದ ಆರಂಭದಲ್ಲಿ ಮೂರು ವರ್ಷಗಳ ಕಾಲ ಸರ್ಕಾರಿ ಉದ್ಯೋಗದಲ್ಲಿ ಕೆಲಸ ಮಾಡಿದ ನಂತರ ಆ ಉದ್ಯೋಗದಲ್ಲಿ ನಿರಾಸಕ್ತಿ ಹೊಂದಿದ ನಾನು, 1990 ರಲ್ಲಿ ನನ್ನ ಸ್ವಂತ ವ್ಯವಹಾರವನ್ನು ಪ್ರಾರಂಭಿಸಿದೆ. ನನ್ನ ಆಧ್ಯಾತ್ಮಿಕ ಪ್ರಯಾಣವು 1999 ರಲ್ಲಿ ಎಸ್ ಎಸ್ ವೈ ಅಂದರೆ ಸಿದ್ಧ ಸಮಾಧಿ ಯೋಗ ಗುರೂಜಿಯವರಿಂದ ಪ್ರಾರಂಭವಾಯಿತು. 2004 ರಲ್ಲಿ ವೀರಾಂಜನೇಯ ದೇವಾಲಯವನ್ನು ಬೆಂಗಳೂರಿನ ವೈಟ್ ಫೀಲ್ಡ್ ನಲ್ಲಿ ನಿರ್ಮಿಸಲಾಯಿತು. ಎಲ್ಲಾ ಆಚರಣೆಗಳು ದೇವಾಲಯದಲ್ಲಿ ನಿಯಮಿತವಾಗಿ ನಡೆಯುತ್ತಿದ್ದವು. ಆಧ್ಯಾತ್ಮದ ಬಗ್ಗೆ ನನಗೆ ಒಲವು ಹೆಚ್ಚಾದಂತೆ ನಾನು ಮತ್ತು ನನ್ನ ಪತ್ನಿ ಎಸ್.ಎಂ. ವಿಜಯಲಕ್ಷ್ಮಿ ಸೇರಿ 2008 ರಲ್ಲಿ ನಾವು ದೇವಾಲಯದ ಪಕ್ಕದಲ್ಲಿ "ಶ್ರೀರಾಮ ಧಾಮ ಧ್ಯಾನ ಮಂದಿರ" ಎಂಬ ಹೆಸರಿನ ಒಂದು ಧ್ಯಾನ ಮಂದಿರವನ್ನು ನಿರ್ಮಿಸಿದೆವು ಅದನ್ನು ಸಿದ್ಧ ಸಮಾಧಿ ಯೋಗ ಸಂಸ್ಥಾಪಕರಾದ ಡಾ. ಋಷಿ ಪ್ರಭಾಕರ್ ಗುರೂಜಿಯವರು ಉದ್ಘಾಟಿಸಿದರು. ಅಲ್ಲಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರು ಧ್ಯಾನ ಅಧಿವೇಶನಕ್ಕಾಗಿ ಶ್ರೀರಾಮ ಧಾಮ ಕೇಂದ್ರಕ್ಕೆ ಭೇಟಿ ನೀಡಿದಾಗ "ಅನಾಪಾನಸತಿ ಧ್ಯಾನ" ವಿಧಾನವನ್ನು ಪರಿಚಯ ಮಾಡಿಸಿದರು.

ಪತ್ರೀಜಿಯವರನ್ನು ಭೇಟಿಯಾದ ನಂತರ ದಿನನಿತ್ಯದ ನಮ್ಮ ಆಧ್ಯಾತ್ಮಿಕ ಅಭ್ಯಾಸದ ಕಾಲಾವಧಿಯನ್ನು ಹೆಚ್ಚಿಸಿದೆ. ಪಿ.ಎಸ್.ಎಸ್.ಎಂ.ನ ತತ್ವ ಸಿದ್ಧಾಂತದಲ್ಲಿ ಗುರು ಶಿಷ್ಯರ ಕುರಿತಾದ ಒಂದು ಪ್ರಮುಖವಾದ ಅಂಶವು ನನ್ನ ಗಮನ ಸೆಳೆಯಿತು. ಯಾರೂ ಶಾಶ್ವತವಾಗಿ ಗುರುಗಳಲ್ಲ. ಯಾರೂ ಶಾಶ್ವತವಾಗಿ ಶಿಷ್ಯರೂ ಅಲ್ಲ. ಅವರಿಗೆ ಅವರೇ ಗುರುಗಳು. ಮಾಸ್ಟರ್ ಆಗಿ ಬದುಕಲು ಕಲಿಯಿರಿ ಎಂದಿಗೂ ಶಿಷ್ಯರಾಗಿಯೇ ಇರಬೇಡಿ ಎಂಬ ಪತ್ರೀಜಿಯವರ ಮಾತುಗಳು ಆಧ್ಯಾತ್ಮದಲ್ಲಿ ನನ್ನ ಆಸಕ್ತಿಯನ್ನು ಹೆಚ್ಚಿಸಿತು. 2013 ರಲ್ಲಿ ಪತ್ರೀಜಿಯವರು ನನಗೆ ಪಿರಮಿಡ್ ವ್ಯಾಲಿ ಇಂಟರ್‌ನ್ಯಾಷನಲ್ ಟ್ರಸ್ಟ್‌ನಲ್ಲಿ ಒಬ್ಬ ಟ್ರಸ್ಟಿಯಾಗಿ ಸೇವೆ ಮಾಡುವ ಸದಾವಕಾಶವನ್ನು ಒದಗಿಸಿದರು. ಇದರಲ್ಲಿ ನನಗೆ ನಿತ್ಯ ಅನ್ನದಾನ ಸೇವೆಯ ಜವಾಬ್ದಾರಿಯನ್ನು ವಹಿಸಲಾಯಿತು. ಪ್ರತಿಯೊಬ್ಬ ಮಾನವನು ಮಾಧವನಾಗಬೇಕಾದರೆ ಪ್ರತಿನಿತ್ಯವೂ ಶ್ರದ್ಧೆ ಆಸಕ್ತಿಯಿಂದ ಧ್ಯಾನ ಅಭ್ಯಾಸ ಮಾಡಬೇಕು. ಅದರ ಜೊತೆಯಲ್ಲಿ ಸಸ್ಯಾಹಾರ, ಸ್ವಾಧ್ಯಾಯ, ಸಜ್ಜನ ಸಾಂಗತ್ಯ ಅಂದರೆ ಸತ್ಸಂಗ ಹಾಗೂ ಪಿರಮಿಡ್ ಶಕ್ತಿ ಬಳಕೆ ಅವಶ್ಯಕ ಎಂದು ಆಧ್ಯಾತ್ಮ ಶಾಸ್ತ್ರ ತಿಳಿಸುತ್ತದೆ. ನಿರಂತರ ಸಾಧನೆಯಿಂದ ಶಾರೀರಿಕ ಆರೋಗ್ಯ, ಮಾನಸಿಕ ಪ್ರಶಾಂತತೆ, ಬುದ್ಧಿ ವಿಕಾಸ ಆನಂದದ ಜೀವನ, ಆತ್ಮಜ್ಞಾನ ಮುಂತಾದವುಗಳು ಲಭಿಸುವುದು.

ಹೊಸಯುಗದ ಆಧ್ಯಾತ್ಮ ಸಾಹಿತ್ಯವನ್ನು ಸ್ವಾಧ್ಯಾಯಕ್ಕಾಗಿ ಪ್ರಕಟಿಸುವ ಹಿನ್ನೆಲೆಯಲ್ಲಿ "ಶ್ರೀರಾಮ ಪಬ್ಲಿಕೇಷನ್" ಪುಟ್ಟ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಯಿತು. ಪತ್ರೀಜಿಯವರ ಮತ್ತು ತಟವರ್ತಿ ವೀರ ರಾಘವರಾವ್ ಅವರ ಆದೇಶದ ಮೇರೆಗೆ ನಮ್ಮ ಪ್ರಕಾಶನದ ವತಿಯಿಂದ ಕೆಲವು ಆಧ್ಯಾತ್ಮಿಕ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆವು ಕೆಲವು ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಿ ಮುದ್ರಿಸಲಾಯಿತು. ಕೆಲವು ತೆಲುಗು ಪುಸ್ತಕಗಳನ್ನು ಮರು ಮುದ್ರಣ ಮಾಡಲಾಯಿತು. ತೆಲುಗಿನ ಉತ್ತಮ ಪುಸ್ತಕಗಳು ಕನ್ನಡಕ್ಕೆ ಆಧ್ಯಾತ್ಮ ಸಾಧಕರಿಗೂ ದೊರೆಯಬೇಕು ಎಂದು ನಾವು ಇಂತಹ ಪ್ರಯತ್ನ ಮಾಡಿದ್ದೇವೆ.

ತಮ್ಮ ವಿಶ್ವಾಸಿಗಳು...

**– ಎಚ್.ಎನ್. ಶ್ರೀನಿವಾಸ ಮತ್ತು ಎಸ್.ಎನ್. ವಿಜಯಲಕ್ಷ್ಮಿ**

ಸಂಸ್ಥಾಪಕರು ಶ್ರೀರಾಮಧಾಮ ಧ್ಯಾನ ಮಂದಿರ

# ಮಾಸ್ಟರ್ ಆಗಿ ಬೆಳೆಯಬೇಕೆಂದರೆ...?

ಆಧ್ಯಾತ್ಮಿಕ ಮಾರ್ಗದಲ್ಲಿ ಮಾಸ್ಟರ್ ಅಂದರೆ ಸಾಮಾನ್ಯವಾದವನಲ್ಲ. ಮಾಸ್ಟರ್ ಅಂದರೆ ಗುರುವು. ಗುರುವು ಅಂದರೆ ಎಲ್ಲರಲ್ಲಿರುವ ಅಭಿಪ್ರಾಯ ಏನೆಂದರೆ ಪಾದಗಳ ಮೇಲೆ ಬೀಳಬೇಕು, ಪಾದಪೂಜೆ ಮಾಡಬೇಕೆಂಬ ಮೂಢತ್ವದಲ್ಲಿರುವವರು. ಗುರುವು ಎಂದೊಡನೆ ಮೂಢತ್ವದೊಳಗೆ ಹೋಗುತ್ತದೆಂದು **'ಮಾಸ್ಟರ್'** ಎಂದು ಬದಲಾಯಿಸಿದರು.

ಅಂದರೆ ನೀವೆಲ್ಲರೂ ಭಾವಿ ಮಾಸ್ಟರ್. ಅಂದರೆ ಭಾವಿ ಗುರುಗಳು ಎಂದು ಅರ್ಥ. ಗುರುವು ಎನ್ನುವವನು ಎಲ್ಲರಂತೆ ವರ್ತಿಸಬಾರದು ಆದರ್ಶಪ್ರಾಯವಾಗಿರಬೇಕು. ನೀವು ಪರಿಪೂರ್ಣ ಆಧ್ಯಾತ್ಮಿಕ ಮಾಸ್ಟರ್ ಆಗಬೇಕೆಂದರೆ ನಿಜವಾದ ಆಧ್ಯಾತ್ಮಿಕ ಗುರುವಾಗಿ ತಯಾರಾಗಬೇಕೆಂದರೆ, ಮೊಟ್ಟಮೊದಲು ನೀವು ಕಲಿತುಕೊಳ್ಳಬೇಕಾದದ್ದು ಏನೆಂದರೆ ಸಂಪಾದಿಸಿಕೊಂಡ ಶಕ್ತಿಯನ್ನು ಕಳೆದುಕೊಳ್ಳದಂತೆ ಇರುವುದಕ್ಕೆ ಎಚ್ಚರದಿಂದ ಇರಬೇಕು.

ಏಕೆಂದರೆ ಶಕ್ತಿಯು ಎಷ್ಟೋ ಶ್ರೇಷ್ಠವಾದದ್ದು, ಎಷ್ಟೋ ಮಹತ್ವ ಇರುವಂಥದ್ದು. ಅದಕ್ಕೆ ನಾವು ದೇವರುಗಳು ಎನ್ನುವಂಥವರನ್ನೆಲ್ಲ ಶಕ್ತಿವಂತರು ಎನ್ನುತ್ತೇವೆ. ನಿಮ್ಮ ಶಕ್ತಿ ಎಷ್ಟು ಬೆಳೆದರೆ ಅಷ್ಟು ಶ್ರೇಷ್ಠವಾದ ವರ್ತನೆಯುಳ್ಳಂತ ಶ್ರೇಷ್ಠ ಮಾಸ್ಟರ್ ಆಗಿ ಬೆಳೆಯುತ್ತೀರಿ. ಶಕ್ತಿಯು ಇನ್ನೂ ಹೆಚ್ಚಿದರೆ ಸತ್ಯವನ್ನು ಅನುಸರಿಸುತ್ತೀರಿ. ಆಗ ನಿಮಗೆ ಪ್ರಕೃತಿಯ ಸಹಕಾರವೂ ಕೂಡ ಲಭಿಸುತ್ತದೆ. ಶಕ್ತಿ ಇಲ್ಲದಿದ್ದರೆ ಅಸತ್ಯದಲ್ಲಿಯೇ ಜೀವಿಸುತ್ತೀರಿ. ಪ್ರಕೃತಿಯ ಸಹಕಾರವು ಲಭಿಸುವುದಿಲ್ಲ.

ಆದ್ದರಿಂದ ನಿಮಗಿರುವ ಶಕ್ತಿಯೇ ನಿಮ್ಮನ್ನು ಉತ್ತಮ ಗುರುವಾಗಿ ಮಾಡುತ್ತದೆ ಎಂದು ತಿಳಿದುಕೊಳ್ಳಬೇಕು. ಸಹಜವಾಗಿ ನೀವು ವಿಶೇಷವಾಗಿ ಧ್ಯಾನ ಮಾಡುತ್ತಿದ್ದೀರಿ. ನೀವು ಮಾಡುವ ಸಾಧನೆಯೆಲ್ಲ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿಯೇ. ಆದರೆ ಸಂಪಾದಿಸಿದ ಶಕ್ತಿಯು ಎಷ್ಟು ನಿಂತಿದೆ? ಎಷ್ಟು ವ್ಯರ್ಥವಾಗಿದೆ? ಎಂಬುದು ನಿಮಗೆ ತಿಳಿಯದು. ಆದ್ದರಿಂದ ಸಂಪಾದಿಸಿಕೊಂಡ ಶಕ್ತಿಯು ವ್ಯರ್ಥವಾಗದಂತೆ ನೋಡಿಕೊಳ್ಳುವುದು ಕೂಡ ಬಹಳ ಬಹಳ ಮುಖ್ಯವಾಗಿದೆ. ಹಣವನ್ನು ಸಂಪಾದಿಸುವುದು ಮುಖ್ಯವಲ್ಲ, ಸಂಪಾದಿಸಿದ ಹಣವನ್ನು ಖರ್ಚಾಗದಂತೆ ಇಟ್ಟುಕೊಳ್ಳುವುದೇ ಮುಖ್ಯ.

ಉದಾಹರಣೆಗೆ ಎಷ್ಟೋ ಲಕ್ಷ ರೂ.ಗಳನ್ನು ಸಂಪಾದಿಸಿದನು. ಎಲ್ಲವೂ ಖರ್ಚಾಗಿ ಹೋಯಿತು ಉಪಯೋಗವೇನು? ಹಾಗೆಯೇ ರಾತ್ರಿ ಹಗಲು

ಕಷ್ಟಪಟ್ಟು ಧ್ಯಾನ ಮಾಡಿ ಎಷ್ಟೋ ಶಕ್ತಿಯನ್ನು ಸಂಪಾದಿಸಿದ್ದೀರಿ ಶಕ್ತಿಯೆಲ್ಲ ಹೋಯಿತು ಉಪಯೋಗವೇನು? ಆದ್ದರಿಂದ ಶಕ್ತಿಯು ಕಳೆದುಹೋಗಬಾರದು ಅಂದರೆ ಕೆಲವು ವಿಷಯಗಳನ್ನು ತಿಳಿಯೋಣ.

ಶಕ್ತಿಯು ಕಳೆದು ಹೋಗಬಾರದು ಅಂದರೆ...

**1) 'ಇಂದ್ರಿಯಗಳನ್ನು ಅಗತ್ಯಗಳಿಗೇ ಬಳಸಬೇಕು'**

ಇದನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ.

**ಶ್ಲೋಕ: ಯದಾ ಸಂಹರತೇ ಛಾಯಂ ಕೂರ್ಮಾನಂಗೋನೀವ ಸರ್ವಶಃ**

**ಇಂದ್ರಿಯಾಣೀ ಇಂದ್ರಿಯಾರ್ಥೇ ಭ್ಯಸ್ತಸ್ಯ ಪ್ರಜ್ಞಾ ಪ್ರತಿಷ್ಠಿತಾಃ (ಭ.ಗೀ. 2–18)**

**ತಾತ್ಪರ್ಯ:** ಆಮೆಯು ತನ್ನ ಅವಯವಗಳನ್ನು ಎಲ್ಲ ಕಡೆಯಿಂದಲೂ ಯಾವ ವಿಧವಾಗಿ ಒಳಗೆ ಮಡಚಿಕೊಳ್ಳುತ್ತದೋ ಅದೇ ವಿಧವಾಗಿ ಮಾನವನು ಇಂದ್ರಿಯಗಳನ್ನು ಅಂತರ್ಮುಖ ಮಾಡಿಕೊಂಡಾಗ ಅವುಗಳ ಶಕ್ತಿಯು ಸ್ಥಿರವಾಗಿರುತ್ತದೆ.

ಆಮೆಯು ಅಗತ್ಯವಿಲ್ಲದಾಗ ತನ್ನ ಅವಯವಗಳನ್ನು ಒಳಗೆ ಮಡಚಿಕೊಳ್ಳುತ್ತದೆ. ಏಕೆಂದರೆ ಅವುಗಳನ್ನು ಶಕ್ತಿಯುತವಾಗಿಟ್ಟುಕೊಳ್ಳುವುದಕ್ಕೆ ಯಾವಾಗಾದರೆ ಒಳಗೆ ಮಡಚಿಕೊಳ್ಳುತ್ತದೋ ಅವುಗಳಿಗೆ ವಿಶ್ರಾಂತಿ ಕೊಟ್ಟಂತೆ ಲೆಕ್ಕ. ಯಾವಾಗಾದರೆ ಆವಯವಗಳಿಗೆ ವಿಶ್ರಾಂತಿಯನ್ನು ಕೊಡುತ್ತೀರೋ ಅವು ಯಾವಾಗಲೂ ಶಕ್ತಿವಂತವಾಗಿ ಇರುತ್ತವೆ.

ಮತ್ತೆ ಅಗತ್ಯ ಇರುವಾಗ ಹೊರಗೆ ತಂದುಕೊಂಡು ಬಹಳ ವೇಗವಾಗಿ ಅವುಗಳನ್ನು ಉಪಯೋಗಿಸಿಕೊಳ್ಳುತ್ತದೆ. ಅಗತ್ಯವಿಲ್ಲದ ಸಮಯದಲ್ಲಿ ಉಪಯೋಗಿಸಿಕೊಂಡರೆ ಅಗತ್ಯವಾದಾಗ ಅವು ಕೆಲಸಕ್ಕೆ ಬಾರದಂತಾಗುತ್ತವೆ. ಹಾಗೆಯೇ ನೀವು ಕೂಡ ಅಗತ್ಯವಿಲ್ಲದಾಗ ನಿಮ್ಮ ಇಂದ್ರಿಯಗಳಿಗೆ ವಿಶ್ರಾಂತಿ ಕೊಡಬೇಕು ಅಂದರೆ ಉಪಯೋಗಿಸಬಾರದು.

ಯಾವ ಇಂದ್ರಿಯವನ್ನಾದರೂ ಬಳಸಿದರೆ ಅಂದರೆ ಕೆಲಸ ಮಾಡಿತೆಂದರೆ ನಿಮ್ಮ ಬಳಿ ಇರುವ ಶಕ್ತಿ ಸ್ವಲ್ಪ ಖರ್ಚಾಗುತ್ತದೆ. ಮಾತನಾಡಿದರೂ ಶಕ್ತಿಯು ಖರ್ಚಾಗುತ್ತದೆ. ಅದಕ್ಕೆ ಪತ್ರೀಜಿಯವರು ಅನಗತ್ಯ ಮಾತುಗಳನ್ನು ಕೆಲಸಕ್ಕೆ ಬಾರದ ಮಾತುಗಳನ್ನು ಆಡಬೇಡ ಎನ್ನುತ್ತಾರೆ. ತುಂಬಾ ಜನರಿಗೆ ವೃದ್ಧಾಪ್ಯವು ಬರುವುದರೊಳಗೆ ಇಂದ್ರಿಯಗಳು ಕೆಲಸ ಮಾಡಲಾರವು. ಮಾತಿನ ಸ್ಪಷ್ಟತೆಯನ್ನು ಕಳೆದುಕೊಳ್ಳುತ್ತಾರೆ. ಅವರ ಕೆಲಸವನ್ನು ಸಹ ಅವರು ಸರಿಯಾಗಿ ಮಾಡಿಕೊಳ್ಳಲಾರರು. ಕಣ್ಣುಗಳು ಸರಿಯಾಗಿ ಕೆಲಸ ಮಾಡುವುದಿಲ್ಲ, ಆಲೋಚಿಸಲಾರರು. ಸರಿಯಾಗಿ ನೆನಪಿರುವುದಿಲ್ಲ. ಅದಕ್ಕೆ ಮುಖ್ಯ ಕಾರಣ ಅತಿಯಾಗಿ ಇಂದ್ರಿಯಗಳನ್ನು ಉಪಯೋಗಿಸುವುದೇ.

ಆದ್ದರಿಂದ ಅಗತ್ಯವಾದಾಗ ಇಂದ್ರಿಯಗಳನ್ನು ಉಪಯೋಗಿಸಿಕೊಳ್ಳಬೇಕು ಅಗತ್ಯವಿಲ್ಲದಾಗ ಉಪಯೋಗಿಸಬಾರದು. ನೀವು ಜೀವಿಸಿರುವಷ್ಟು ಕಾಲವು ನಿಮ್ಮ ಇಂದ್ರಿಯಗಳೆಲ್ಲವೂ ಸಕ್ರಮವಾಗಿ ಕೆಲಸ ಮಾಡಬೇಕೆಂದರೆ ಯೌವ್ವನದಲ್ಲಿ ಇರುವಾಗ ಎಲ್ಲವೂ ಹೇಗೆ ಕೆಲಸ ಮಾಡಿದವೋ ವೃದ್ಧಾಪ್ಯದಲ್ಲಿಯೂ ಕೂಡ ಹಾಗೆಯೇ ಕೆಲಸ ಮಾಡಬೇಕು. ಅದಕ್ಕೆ ಇಂದ್ರಿಯಗಳನ್ನು ಅಗತ್ಯಕ್ಕೇ ಉಪಯೋಗಿಸಬೇಕು.

**2) "ಮಾನಸಿಕ ಅಶಾಂತಿ, ಅತಿಯಾಗಿ ಆಲೋಚಿಸುವುದು, ಚಿತ್ತವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುವುದು":** ಮಾನವನು ಯಾವಾಗಲೂ ಏನೋ ತಗಾದೆ ಏನೋ ಸಮಸ್ಯೆಯಿಂದ ಯಾವಾಗಲೂ ಅಶಾಂತಿಯಿಂದಲೇ ಇರುತ್ತಾನೆ. ನೀವು ಒಂದೇ ನೆನಪು ಇಟ್ಟುಕೊಳ್ಳಬೇಕು. ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳಿಗಿಂತ ಮನಸ್ಸು ಕೆಲಸ ಮಾಡಿದರೆ ಇನ್ನೂ ಹೆಚ್ಚು ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಈ ಇಂದ್ರಿಯಗಳು ಎಲ್ಲ ಕೆಲಸಗಳನ್ನು ಮಾಡಿದರೂ ಕೂಡ ಕಳೆದುಕೊಳ್ಳುವ ಶಕ್ತಿ-ಗಿಂತ ಮನಸ್ಸು ಕೆಲಸ ಮಾಡಿದರೆ ಇನ್ನೂ ಹೆಚ್ಚಾಗಿ ಶಕ್ತಿಯನ್ನು ಕಳೆದುಕೊಳ್ಳುತ್ತೀರಿ. ಆದ್ದರಿಂದ ಚಿತ್ತಕ್ಕೆ ವಿಶ್ರಾಂತಿಯನ್ನು ಕೊಡಬೇಕು.

ಚಿತ್ತವು ಅಂದರೆ ಮನಸ್ಸಿನಲ್ಲಿ ಒಂದು ಭಾಗ. ಮನಸ್ಸಿನಲ್ಲಿ ನಾಲ್ಕು ಭಾಗಗಳಿರುತ್ತವೆ ಅವು ಮನಸ್ಸು, ಬುದ್ಧಿ, ಚಿತ್ತ ಮತ್ತು ಅಹಂಕಾರವೆಂದು. ನಿರಂತರ ಚಿಂತನೆಯನ್ನು ಮಾಡುವುದೇ ಚಿತ್ತವು. ಯಾವಾಗಲೂ ಆಲೋಚಿಸುತ್ತಾ ಇರುವುದು ಚಿತ್ತವು. ಅದಕ್ಕೆ ಪತಂಜಲಿ ಮಹರ್ಷಿಗಳು ನೀನು ಯೋಗಿಯಾಗಬೇಕು ಅಂದರೆ ಚಿತ್ತವೃತ್ತಿಗಳನ್ನು ನಿರೋಧಿಸು ಎಂದಿದ್ದಾರೆ. ಚಿತ್ತವೊಂದರ ವೃತ್ತಿಗಳನ್ನು ನಿರೋಧಿಸು ಎಂದಿದ್ದಾರೆ. ಆ ಮಾರ್ಗವೇ ಪತ್ರೀಜಿಯವರು ಕೊಟ್ಟಿರುವ ಶ್ವಾಸದ ಮೇಲೆ ಗಮನ ಧ್ಯಾನ.

**3) ದ್ವೇಷ, ಅಸಂತೃಪ್ತಿ, ಕೋಪ, ನಿರಾಸೆ, ನಿಸ್ಪೃಹೆ ಮತ್ತು ಅಹಂಕಾರಗಳಂತವುಗಳಿಂದಲೂ ಕೂಡ ನಿಮ್ಮ ಶಕ್ತಿಯನ್ನು ಅಂದರೆ ಪ್ರಾಣಶಕ್ತಿಯನ್ನು ಕಳೆದುಕೊಳ್ಳುತ್ತೀರಿ.** ಇದಕ್ಕೆ ಪರಿಷ್ಕಾರ ಏನೆಂದರೆ ಬುದ್ಧಿಯನ್ನು ವಿಕಸನ ಮಾಡಿಕೊಳ್ಳಬೇಕು. ಬುದ್ಧಿಯು ಚೆನ್ನಾಗಿ ವಿಕಸಿಸಿದರೆ ಅದರಲ್ಲಿ ಇಂತಹ ಲಕ್ಷಣಗಳು ಕಾಣಿಸವು.

**4) ಬಹಳ ಕಡಿಮೆ ಮಾತನಾಡಬೇಕು:** ಮಾತು ಕೂಡ ನಿಮ್ಮ ಶಕ್ತಿಯನ್ನು ಹರಣ ಮಾಡುತ್ತದೆ ಧ್ಯಾನದ ಮೂಲಕ ಯಾವ ಶಕ್ತಿಗಳನ್ನು ಸಂಪಾದಿಸಿಕೊಳ್ಳುತ್ತಿದ್ದರೂ ಆ ಶಕ್ತಿಯು ಹೋಗಿಬಿಡುತ್ತದೆ ಅದಕ್ಕೆ ಪರಿಷ್ಕಾರ, ಆಗಾಗ ಮೌನವನ್ನು ಪಾಲಿಸಿರಿ. ದಿನವೂ ಅಂದರೆ ಸಾಧ್ಯವಾಗದು. ಆದರೆ 15 ದಿನಗಳಿಗೆ ಒಮ್ಮೆ ವಾರಕ್ಕೆ ಒಂದು ಬಾರಿ ಮೌನವನ್ನು ಪಾಲಿಸಿರಿ. ಮೌನವನ್ನು ಪಾಲಿಸಿದರೂ ಒಂದೊಂದು ಬಾರಿ

ಯಾವುದೋ ಒಂದು ಸಂದರ್ಭದಲ್ಲಿ ಬಾಯಿಯನ್ನು ತೆಗೆಯಬೇಕೆಂದರೂ ಒಟ್ಟಾರೆ ಮೌನವನ್ನು ಪಾಟಿಸುವುದನ್ನು ಕಲಿಯಬೇಕು.

**5) ತಮೋಗುಣ ರಜೋಗುಣ ಪ್ರಧಾನವಾದ ಆಹಾರಗಳನ್ನು ತೆಗೆದುಕೊಳ್ಳಬಾರದು:** ಆಹಾರದ ವಿಷಯದಲ್ಲಿ ರಾಜಿಯಾಗಬೇಡ. ಮಾಂಸಹಾರವನ್ನು, ಕೋಳಿ ಮೊಟ್ಟೆ, ಶಾಖಾಹಾರದಲ್ಲಿ ಬೆಳ್ಳುಳ್ಳಿಯನ್ನು ಸೇವಿಸಬಾರದು. ಶಾಖಾಹಾರದಲ್ಲಿ ದೀರ್ಘಕಾಲ ಉಳಿಸಿದ, ಅಳಸಿಹೋದ, ಹುಳಿಯಾದ, ಅಡುಗೆ ಮಾಡಿ ಫ್ರಿಜ್‌ನಲ್ಲಿಟ್ಟ ಆಹಾರಗಳನ್ನು ತೆಗೆದುಕೊಳ್ಳಬಾರದು. ಸಮಾರಂಭ (ಫಂಕ್ಷನ್) ಗಳನ್ನು ಸಾಧ್ಯವಾದಷ್ಟು ಕಡಿಮೆ ಮಾಡಿದರೆ ಒಳ್ಳೆಯದು. ಯಾವಾಗಾದರೂ ಹೋದರೂ ಆಹಾರವನ್ನು ಸೇವಿಸಬಾರದು. ಇಲ್ಲವಾದರೆ ಹಣ್ಣುಗಳನ್ನು, ಐಸ್ ಕ್ರೀಮ್‌ಗಳನ್ನು ತೆಗೆದುಕೊಳ್ಳಬಹುದು. ಬಹಳ ಹತ್ತಿರದವರ ಸಮಾರಂಭಗಳನ್ನು ತಪ್ಪಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ನಾನು ಇದರಲ್ಲಿ ಪ್ರವೇಶಿಸಿದ ನಂತರ 2002ರಿಂದ ತರಗತಿಗಳನ್ನು ಹೇಳುವುದು ಪ್ರಾರಂಭಿಸಿದೆನು. ಎಂದಿಗೂ ತರಗತಿಯನ್ನು ತಪ್ಪಿಸಿಲ್ಲ. ಒಪ್ಪಿಕೊಂಡರೆ ಖಚಿತವಾಗಿ ಹೋಗುತ್ತಿದ್ದೆನು. ಎಂತಹ ಪರಿಸ್ಥಿತಿಗಳಲ್ಲಿಯೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಅಗತ್ಯವಾದರೆ ಮನೆಯಲ್ಲಿಯ ಸಮಾರಂಭಗಳನ್ನು ಕೂಡ ತಪ್ಪಿಸಿಕೊಳ್ಳುತ್ತಿದ್ದೇನೆ.

ಒಂದು ಬಾರಿ ಪತ್ರೀಜಿಯವರು ನಮ್ಮ ಮನೆಗೆ ಬಂದರು. ಆಗ ಪತ್ರೀಜಿಯವರು ನಮ್ಮ ಮನೆಯಲ್ಲಿದ್ದರೂ ಅಮ್ಮ (ಮೇಡಂ) ನೋಡಿಕೊಳ್ಳುತ್ತಾರೆ ಎಂದು ಬೇರೆ ಕ್ಲಾಸ್‌ಗಳಲ್ಲಿದ್ದ ನಾನು ಮನೆಗೆ ಬರಲಿಲ್ಲ. ನಂತರ ಭೇಟಿಯಾಗಿ ಕ್ಲಾಸ್‌ಗಳಿದ್ದ ಕಾರಣ ಬರಲಾರದೆ ಹೋದೆನು ಎಂದು ಹೇಳುತ್ತಿದ್ದೆನು. ಒಂದು ಬಾರಿ ಪತ್ರೀಜಿಯವರು ಏನೆಂದು ಹೇಳಿದರೆ ಎಂದರೆ, 'ಕ್ಲಾಸ್‌ಗಳನ್ನು ತಪ್ಪಿಸಿಕೊಳ್ಳುವುದನ್ನು ಕೂಡ ಅಭ್ಯಾಸ ಮಾಡಿಕೊಳ್ಳಯ್ಯ' ಎಂದರು.

ಆದ್ದರಿಂದ ಇದನ್ನು ನೆನಪಿಟ್ಟುಕೊಳ್ಳಿ ಇವೆಲ್ಲವೂ ನಮಗೆ ಶಕ್ತಿಯನ್ನು ಕಳೆದುಕೊಳ್ಳುವಂತಹ ವ್ಯವಹಾರಗಳು. ನಾವೆಲ್ಲ ಆತ್ಮಗಳು ಆತ್ಮಗಳಾದ ನಮಗೆ ಸಾಧನೆ ಮಾಡಿ ಸ್ವಾಧ್ಯಾಯ ಮಾಡಿ ಇಂತಹ ಸಂದೇಶಗಳನ್ನು ಕೇಳುತ್ತಾ, ಜ್ಞಾನವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಈ ದೇಹವು ಕೊಡಲ್ಪಟ್ಟಿದೆ. ನಾವು ದೇಹವನ್ನು ಯಾವುದೋ ಒಂದು ದಿನ ಬಿಡುತ್ತೇವೆ. ಬಿಟ್ಟ ಮೇಲೆ ಇಲ್ಲಿ ಸಂಪಾದಿಸಿಕೊಂಡ ಜ್ಞಾನವನ್ನು ಆಧರಿಸಿ ಉನ್ನತ ಲೋಕಗಳಿಗೆ ಸೇರಿಕೊಳ್ಳುತ್ತೇವೆ.

ಆದರೆ ನೀವು ಈ ಶರೀರವನ್ನು ಊಟ, ಕುಡಿಯುವುದು, ಮಲಗುವುದು ಇದಕ್ಕೆ ಉಪಯೋಗಿಸಿದಿರಿ ಅಂದುಕೊಳ್ಳಿ, ಶರೀರವನ್ನು ಬಿಟ್ಟ ನಂತರ ಮೇಲೆ

ಹೋದರೆ ಅಧೋಲೋಕಗಳೇ... ಅದೇ ಈ ಶರೀರವನ್ನು ಉಪಯೋಗಿಸಿಕೊಂಡು ಎಷ್ಟೋ ಉನ್ನತ ಸ್ಥಿತಿಗೆ ಹೋಗುತ್ತೀರಿ ಇಂಗ್ಲಿಷ್‌ನಲ್ಲಿ ಒಂದು ಗಾದೆ ಇದೆ. **TAKE CARE OF THE PENNIES AND THE POUNDS WILL TAKE CARE OF THEMSELVES**

ಅಂದರೆ ಪೈಸೆಗಳನ್ನು ಎಚ್ಚರದಿಂದ ಉಳಿತಾಯ ಮಾಡಿರಿ, ರೂಪಾಯಿಗಳು ತನ್ನಷ್ಟಕ್ಕೆ ತಾನೇ ಬೆಳೆಯುತ್ತಿರುತ್ತವೆ. ಜೀವನವನ್ನು ಏಕೆ ವ್ಯರ್ಥ ಮಾಡಬೇಕು? ಆಹಾರದ ವಿಷಯದಲ್ಲಿ ಪಾಕಶುದ್ಧಿ, ಪದಾರ್ಥ ಶುದ್ಧಿ, ಪಾತ್ರೆ ಶುದ್ಧಿಯನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸಬೇಕು.

6) **ಸಂಕಲ್ಪಗಳನ್ನು ಇಡಬಾರದು:** ನಮ್ಮ ಸೊಸೈಟಿಯಲ್ಲಿ ಪ್ರತಿಯೊಬ್ಬರೂ ಸಂಕಲ್ಪಗಳನ್ನು ಇಟ್ಟು ಧ್ಯಾನವನ್ನು ಮಾಡುವವರೇ. ಸಂಕಲ್ಪವನ್ನಿಟ್ಟು ಧ್ಯಾನವನ್ನು ಮಾಡಿದಿರಾ ನೀವು ಸಂಪಾದಿಸಿದ ಶಕ್ತಿ ಯಾವುದಾದರೂ ಇದ್ದರೆ ಎಲ್ಲ ಕಳೆದುಕೊಳ್ಳುತ್ತೀರಿ. ಸೊನ್ನೆ ಸ್ಥಿತಿಗೆ ಬಂದು ಬಿಡುತ್ತೀರಿ. ನಾನು ಬರೆದ 'ಸಂಕಲ್ಪವೆಂದರೆ' ಎಂಬ ಪುಸ್ತಕವನ್ನು ಓದಿದರೆ ಸಂಕಲ್ಪ ಎಂದರೆ ಏನೆಂದು ತಿಳಿಯುತ್ತದೆ. ಎಂತಹ ಪರಿಸ್ಥಿತಿಯಲ್ಲಾದರೂ ಸಂಕಲ್ಪಗಳನ್ನು ಇಡಬಾರದು. ಬಹಳ ನಷ್ಟ ಹೊಂದುತ್ತೀರಿ. ಸಂಕಲ್ಪವಿಟ್ಟು ಧ್ಯಾನವನ್ನು ಮಾಡಿದರೆ ನಿಮಗಿರುವ ಶಕ್ತಿಯನ್ನೆಲ್ಲ ಕಳೆದುಕೊಳ್ಳುತ್ತೀರಿ.

7) **ನೀವು ಎಲ್ಲ ನಿಯಮಗಳನ್ನು ಪಾಲಿಸಿ: ತೀವ್ರವಾಗಿ ಧ್ಯಾನ ಸಾಧನೆ ಮಾಡಿದರೆ ಶಕ್ತಿಯು ಚೆನ್ನಾಗಿ ಬರುತ್ತದೆ. ಬಂದಾಗ ಏನು ನಡೆಯುತ್ತದೆ ಎಂದರೆ ನಿಮಗೆ ತಿಳಿಯದೆಯೇ ಕೆಲವು ಶಕ್ತಿಗಳು ಬರಬಹುದು. ಬಂದರೂ ಪ್ರದರ್ಶಿಸಬಾರದು. ಬಂದರೂ ಬಾರದಂತೆ ಇರಬೇಕು.**
ಆಂಜನೇಯ ಸ್ವಾಮಿಯ ಬಳಿ ಅಷ್ಟ ಸಿದ್ಧಿಗಳಿವೆ. ಲಂಕೆಯನ್ನು ಹಾರುವುದಕ್ಕೆ ವಾನರರೆಲ್ಲರೂ ಕೆಳಗೆ ಮೇಲೆ ಬೀಳುತ್ತಿದ್ದರು. ಆಗ ಜಾಂಬವಂತನು ದೂರದಲ್ಲಿ ಕುಳಿತಿದ್ದ ಆಂಜನೇಯ ಸ್ವಾಮಿಯ ಬಳಿಗೆ ಹೋಗಿ, 'ಏನು, ಏನೂ ತಿಳಿಯದಂತೆ ಕುಳಿತಿರುವೆ. ಅದು ಯಾರಿಂದಲೂ ಸಾಧ್ಯವಿಲ್ಲ ನಿನ್ನಿಂದಲೇ ಆಗುತ್ತದೆ ನೀನು ಎದ್ದು ಬಾ. ಈ ಕೆಲಸವನ್ನು ಮಾಡು' ಎಂದು ಹೇಳಿ ಕರೆತಂದನು. ಅಂದರೆ ಆಂಜನೇಯ ಸ್ವಾಮಿ ಆತನಿಗೆ ಶಕ್ತಿಗಳಿದ್ದರೂ ಇಲ್ಲದಂತೆಯೇ ಇರುತ್ತಾನೆ. ಆತನ ಶಕ್ತಿಗಳನ್ನು ಇನ್ನೊಬ್ಬನು ಗುರುತು ಮಾಡಬೇಕು. ಇವೆಲ್ಲವನ್ನು ಪುರಾಣಗಳಲ್ಲಿ ಏಕೆ ಹೇಳುತ್ತಾರೆಂದರೆ ನಾವು ತಿಳಿದುಕೊಳ್ಳುವುದಕ್ಕೆ. ಆದರೆ ಬಹಳ ಜನರು ಇಲ್ಲದಿದ್ದರೂ ಹೇಳುತ್ತಾರೆ.

8) **ಯಾರನ್ನೂ ಪ್ರಲೋಭನೆಗಳಿಗೆ ಗುರಿ ಮಾಡಬಾರದು:** ಆಸೆಗಳನ್ನು ಹುಟ್ಟಿಸಿ ಇತರರನ್ನು ಮೋಸಗೊಳಿಸಬಾರದು. ಇದು ನಮ್ಮ ಸೊಸೈಟಿಯಲ್ಲಿ ಇದೆ. ಕೆಲವರು 'ಮನಿ ಮೆಡಿಟೇಶನ್ ಮಾಡಿದರೆ ನಿಮ್ಮ ಹಣವು ವಿಪರೀತವಾಗಿ ಬೆಳೆದುಬಿಡುತ್ತದೆ'

ಎಂದು ಹೇಳಿ ಮನಿ ಮೆಡಿಟೇಶನ್ ಮಾಡಿಸುತ್ತಾರೆ. ಕೆಲವರು ಅವರು ಕಾಣಿಸುತ್ತಿದ್ದಾರೆ, ಇವರು ಕಾಣಿಸುತ್ತಾರೆ ಎಂದು ಹೇಳಿ ಮಾಡಿಸುವವರು ಇದ್ದಾರೆ. 'ನಿಮ್ಮ ಬಯಕೆಗಳು ಈಡೇರುತ್ತವೆ, ನಿಮ್ಮ ಸಮಸ್ಯೆ ತೀರಿ ಹೋಗುತ್ತದೆ' ಎಂದು ಹೇಳಿ ಎಷ್ಟೋ ರೀತಿಯಲ್ಲಿ ಪ್ರಲೋಭನೆಗಳಿಗೆ ಗುರಿ ಮಾಡುವವರು ಇದ್ದಾರೆ.

ನನಗೆ ತಿಳಿದಂತೆ ಒಬ್ಬ ವ್ಯಕ್ತಿ ಕೆಲವು ಗ್ರಾಮಗಳಿಗೆ ಅಧಿಪತಿ. 'ನಮ್ಮ ಮಗನಿಗೆ ಆಂಜನೇಯ ಸ್ವಾಮಿ ಒಲಿದಿದ್ದಾನೆ' ಎಂದು ಹೇಳಿ ನೀನು ಆ ಕೆಲಸವನ್ನು ಮಾಡದಿದ್ದರೆ ನಿನಗೆ ನಷ್ಟವಾಗುತ್ತದೆಂದು ಅವರ ಮಗನಿಂದ ಹೇಳಿಸುತ್ತಾನೆ. ಯಾವುದೋ ರೀತಿಯಲ್ಲಿ ಭಯಪಡಿಸುತ್ತಾನೆ. ಆ ಹಳ್ಳಿಯ ಜನರು ನಿಜವಾಗಿಯೂ ಆಂಜನೇಯ ಸ್ವಾಮಿಯು ಒಲಿದಿದ್ದಾನೆ ಎಂದು ನಂಬುತ್ತಾರೆ. ಆಶ್ಚರ್ಯವೇನೆಂದರೆ ಹಳ್ಳಿಯವರೇ ಅಲ್ಲ ಪಟ್ಟಣದವರು, ಓದಿಕೊಂಡವರು ಕೂಡ ಆ ಮಾತುಗಳಿಗೆ ಬಿದ್ದು ಹೋಗುತ್ತಿದ್ದರು.

ಅದು ಸ್ವಲ್ಪ ಕಾಲ ನಡೆಯಿತು. ಅವನು ಮಾಡಿದ ಕೆಲಸಕ್ಕೆ ಶಕ್ತಿಯನ್ನು ಕಳೆದುಕೊಳ್ಳಬೇಕಾಗಿ ಬಂತು. ಆದ್ದರಿಂದ ನೆನಪಿಟ್ಟುಕೊಳ್ಳಿ ಆಧ್ಯಾತ್ಮಿಕವಾಗಿ ಬೆಳೆಯಬೇಕೆಂದುಕೊಂಡಿರುವಾಗ, ಉತ್ತಮ ಮಾಸ್ಟರ್ ಆಗಬೇಕೆಂದುಕೊಂಡಿರುವಾಗ ಇಂತಹ ಕೆಲಸಗಳನ್ನು ಮಾಡಬಾರದು. ನೀವೇನು ಹೇಳಿದರೂ ಕೇಳುತ್ತಾರೆ ಎಂದು ಅವರನ್ನು ಬಹಳ ಕಡಿಮೆ ಅಂದಾಜು ಹಾಕಿ ಏನೋ ಮಾಡೋಣವೆಂದರೆ ನಷ್ಟ ಹೋಗುವವರು ನೀವೇ ಆಗುತ್ತೀರಿ.

ಇನ್ನೂ ಕೆಲವರು ಪತ್ರೀಜಿಯವರು ಶ್ವಾಸದ ಮೇಲೆ ಗಮನ ಇಡಿರಿ ಎಂದರೆ ಮಾತಿನ ಮೇಲೆ ಗಮನವಿಡಿಸುತ್ತಿದ್ದಾರೆ. ಆ ಸಂಕಲ್ಪ ಇಟ್ಟುಕೋ ನೀವು ಅಂದುಕೊಂಡದ್ದು ನೆರವೇರುತ್ತದೆ. ಈ ಸಂಕಲ್ಪ ಇಟ್ಟುಕೋ, ಇದು ನೆರವೇರುತ್ತದೆ ಎಂದು ತಪ್ಪು ಸಲಹೆಗಳನ್ನು ಕೊಡುತ್ತಿದ್ದಾರೆ. ಪತ್ರೀಜಿಯವರು ಸ್ಪಷ್ಟವಾಗಿ ಹೇಳುತ್ತಾರೆ, 'ಯಾರೂ ಏನೂ ಮಾಡಲಾರರು. ಯಾರೂ ಯಾರಿಗೆ ಏನೂ ಕೊಡಲಾರರು. ಯಾರು ಯಾರನ್ನು ಉದ್ಧರಿಸಲಾರರು. ನಾನು ಕೂಡ ನಿಮಗೇನೂ ಕೊಡಲಾರೆನು' ಎಂದು ಸ್ಪಷ್ಟವಾಗಿ ಹೇಳುತ್ತಿದ್ದರೆ, ನೀನು ಅದು ಮಾಡು ಅದು ಆಗುತ್ತದೆ, ಇದು ಮಾಡು ಇದು ಆಗುತ್ತದೆ ಎಂದು ಹೇಳಿ, ಎಷ್ಟೋ ರೀತಿಗಳಲ್ಲಿ ಮೋಸಗಳನ್ನು ಮಾಡುತ್ತಿದ್ದಾರೆ.

ಆದ್ದರಿಂದ ಮಾಸ್ಟರ್ ಆಗಬೇಕೆಂದುಕೊಂಡಿರುವಾಗ, ಒಬ್ಬ ಶ್ರೇಷ್ಠ ಗುರು ಆಗಬೇಕೆಂದರೆ ಇಂತಹ ಕೆಲಸಗಳನ್ನು ಮಾಡಬಾರದು. ಗುರುಗಳು ಬಹಳಷ್ಟು ಜನರು ಹುಟ್ಟಿ ಬರುತ್ತಿದ್ದಾರೆ. ಆದರೆ ಎಲ್ಲಿದ್ದವರು ಅಲ್ಲಿಯೇ ಹಾಗೆಯೇ ಇದ್ದು

ಬಿಡುತ್ತಾರೆ. ಕೆಲವು ದಿನಗಳಲ್ಲಿ ಅವರ ಬದುಕು ಕೂಡ ಬಹಳ ದಾರುಣವಾಗಿ ತಯಾರಾಗುತ್ತದೆ. ಅಂತಹ ಕೆಲಸಗಳನ್ನು ಮಾಡಿದರೆ ಎಂದಿಗೂ ಬೆಳೆಯಲಾರರು. ಶ್ರೇಷ್ಠತೆಗಾಗಿ, ಇತರರ ಮೆಚ್ಚುಗೆಗಾಗಿ ಎಂದಿಗೂ ಯಾವ ಕೆಲಸವನ್ನು ಮಾಡಬೇಡಿ.

ಹಾಗೆಯೇ ಇತರರ ರೋಗಗಳನ್ನು ಕಡಿಮೆ ಮಾಡುವುದಕ್ಕೆ, ಕಷ್ಟಗಳನ್ನು ತೊಲಗಿಸುವುದಕ್ಕೆ ಅವರ ಮೇಲೆ ಅನುಕಂಪದಿಂದ ಕೆಲವರು ಚೆನ್ನಾಗಿ ಧ್ಯಾನವನ್ನು ಮಾಡುವವರು, ಸ್ವಲ್ಪ ಶಕ್ತಿ ಇರುವವರು ಅವರ ಶಕ್ತಿಯನ್ನು ಉಪಯೋಗಿಸಿ ಅವರಿಗೆ ವಾಸಿ ಮಾಡುವ ಪ್ರಯತ್ನವನ್ನು ಮಾಡುತ್ತಾರೆ.

ಯಾವುದೋ ಒಂದು ಸಣ್ಣ ಸಮಸ್ಯೆಯನ್ನು ನೀವು ತೊಲಗಿಸಿದ್ದೀರಾಗಲಿ ಲೋಕದಲ್ಲಿರುವವರೆಲ್ಲರ ಸಮಸ್ಯೆಗಳನ್ನು ನೀವು ತೊಲಗಿಸಲಾರಿರಿ. ನೀವು ಆ ಶಕ್ತಿಯನ್ನು ಇಟ್ಟುಕೊಂಡು ಜ್ಞಾನವನ್ನು ಬೆಳೆಸಿಕೊಂಡರೆ ಎಷ್ಟೋ ಜನರನ್ನು ಪ್ರಭಾವಿತಗೊಳಿಸಿ ಸರಿಯಾದ ಮಾರ್ಗದಲ್ಲಿ ನಡೆಸುತ್ತೀರಿ.

ನಿಜವಾದ ಜ್ಞಾನಿಯಾದರೆ ಅವನ ಶಕ್ತಿಯನ್ನು ಉಪಯೋಗಿಸಿ ಇತರರ ಕಷ್ಟಗಳನ್ನು ರೋಗವನ್ನು ಸಮಸ್ಯೆಯನ್ನು ತನ್ನ ಮೇಲೆ ಎಳೆದುಕೊಳ್ಳುವುದಿಲ್ಲ. ಏಕೆಂದರೆ ಅವನು ಮಾಡಿದ ಕರ್ಮವನ್ನಾಧರಿಸಿಯೇ ಅವನಿಗೆ ಅಂತಹ ಕಷ್ಟ ಬಂದಿದೆ. ಅಂತಹ ರೋಗ ಬಂದಿದೆ, ಅಂತಹ ಪರಿಸ್ಥಿತಿ ಬಂದಿದೆ ಅನುಭವಿಸಬೇಕಾದದ್ದೇ ಯಾರೇನೂ ಮಾಡಲಾಗದು ಎಂದು ತಿಳಿದಿದೆಯಾದ್ದರಿಂದ ಕೆಲವರು ನಾನು ನಿನಗೆ ಎನರ್ಜಿಯನ್ನು ಪಾಸ್ ಮಾಡುತ್ತೇನೆ ಎಂದು ಹೇಳುತ್ತಾರೆ. ಇವನ ಬಳಿಯೇ ಎನರ್ಜಿ ಇಲ್ಲ ಇನ್ನು ಅವನಿಗೇನು ಪಾಸ್ ಮಾಡುತ್ತಾನೆ. ಇನ್ನು ನೀನು ಮಾಡಬೇಕಾಗಿರುವುದು ಏನೆಂದರೆ ಯಪ್ಪಾ ! ನೀನು ಇಂತಹ ಕೆಲಸವನ್ನು ಮಾಡುವುದರಿಂದ ನಿನಗೆ ಈ ಪರಿಸ್ಥಿತಿ ಬಂದಿದೆ. ಇನ್ನೆಂದಿಗೂ ಇಂತಹ ತಪ್ಪನ್ನು ಮಾಡಬೇಡಿ. ಸರಿಯಾದ ಧ್ಯಾನವನ್ನು ಮಾಡಿಕೋ ಸ್ವಲ್ಪ ಜ್ಞಾನವನ್ನು ಸಂಪಾದಿಸು ನೀನು ಸಮಸ್ಯೆಗಳಿಂದ ಹೊರಬರುವೆ ಎಂದು ಹೇಳಬೇಕು. ಯಾರನ್ನು ಅವರು ಉದ್ಧರಿಸಿಕೊಳ್ಳಬೇಕು, ಯಾರು ಯಾರನ್ನು ಉದ್ಧರಿಸಲಾರರು ಎಂದು ನೆನಪಿಟ್ಟುಕೊಳ್ಳಿ.

ನಮ್ಮ ಊರಿನ ಪಕ್ಕದಲ್ಲಿಯೇ ಒಂದು ಊರಿನಲ್ಲಿ ಒಬ್ಬಾತನು ಪಿರಮಿಡ್ ಕಟ್ಟಿಸಿದನು. ಆಗ ಬಹಳ ಕಡಿಮೆ ಜನರು ಇರುತ್ತಿದ್ದರು. ಪಿರಮಿಡ್ನಲ್ಲಿ ಧ್ಯಾನ ಮಾಡಿದರೆ ರೋಗಗಳು ವಾಸಿಯಾಗುತ್ತವೆ ಎನ್ನುವಂತಹ ನಂಬಿಕೆಯಿಂದ ಆತನಿಗೂ ಕೂಡ ಸ್ವಲ್ಪ ಆರಾಮ ಎನಿಸಿತು. ರೋಗಗಳು ಇದ್ದವರನ್ನೆಲ್ಲ ಕರೆತಂದು ಊಟವಿಟ್ಟು ಆ ಪಿರಮಿಡ್‌ನಲ್ಲಿ ಕುಳ್ಳಿರಿಸಿ ಧ್ಯಾನವನ್ನು ಮಾಡಿಸುವುದು,

ಗಂಭೀರ ಸ್ಥಿತಿಯಲ್ಲಿ ಇರುವವರನ್ನೂ ಕೂಡ ಕರೆಯಿಸಿ ಧ್ಯಾನ ಮಾಡಿಸುತ್ತಿದ್ದನು.

ಆಗ ನಾನು ಪತ್ರೀಜಿಯವರನ್ನು ಕೇಳಿದೆನು, 'ಏನ್ರೀ ಹೀಗೆ ಮನೆಯ ಮೇಲೆ ಪಿರಮಿಡ್ ಕಟ್ಟಿಸಿ ರೋಗಗಳಿರುವವರನ್ನೆಲ್ಲ ಕರೆದು ಧ್ಯಾನದಲ್ಲಿ ಕುಳ್ಳಿರಿಸಿ ರೋಗಗಳು ವಾಸಿಯಾಗುತ್ತವೆ ಎಂದು ಭರವಸೆಗಳನ್ನು ಕೊಡುತ್ತಿದ್ದಾನೆ. ಏನು ಮಾಡಬೇಕೆನ್ನುತ್ತೀರಿ?' ಎಂದೆನು. ಪತ್ರೀಜಿಯವರು ಸ್ಪಷ್ಟವಾಗಿ ಹೇಳಿದರು. 'ನೀನು ಧ್ಯಾನವನ್ನು ಮಾಡಿಕೋ ಕಡಿಮೆಯಾಗುತ್ತದೆ ಎಂದು ಹೇಳು. ಆದರೆ ಭರವಸೆ (ಗ್ಯಾರಂಟಿ)ಯನ್ನು ಕೊಡಬೇಡ! ಅವನ ಕರ್ಮ ಹೇಗಿದೆಯೋ..? ಅವನ ಸಮಯ ಯಾವಾಗ ಮುಗಿಯುತ್ತದೋ ಯಾರಿಗೆ ಗೊತ್ತು. ಅವನಿಗೆ ನೀನು ಭರವಸೆ ಕೊಡುವುದೇನು? ಅವರ ಕರ್ಮ ಸುಟ್ಟು ಸತ್ತನೆಂದುಕೋ ಕೆಟ್ಟ ಹೆಸರು ಯಾರಿಗೆ ಬರುತ್ತದೆ? ಆದ್ದರಿಂದ ಅಂತಹ ಕೆಲಸಗಳನ್ನು ಮಾಡಬೇಡ' ಎಂದರು ಅವರು.

ನಮ್ಮ ಮನೆಯ ಬಳಿಯೇ ನಾನು ಯಾರನ್ನು ಉಳಿಸಿಕೊಳ್ಳುವುದಿಲ್ಲ ಎಂದರು. ಅವರು ಎಲ್ಲರನ್ನೂ ಇಟ್ಟುಕೊಂಡರೆ ಪತ್ರೀಜಿಯವರ ಮನೆಯು ತುಂಬಿ ಹೋಗುತ್ತಿತ್ತು. ಆದ್ದರಿಂದ ನೆನಪಿಟ್ಟುಕೊಳ್ಳಿ ಯಾರ ರೋಗಗಳನ್ನು ಕಡಿಮೆ ಮಾಡುವುದಕ್ಕಾಗಲಿ, ಸಮಸ್ಯೆಗಳ ಕುರಿತಾಗಲಿ ನಿಮ್ಮ ಶಕ್ತಿಯನ್ನು ಖರ್ಚು ಮಾಡಬಾರದು.

ಪತ್ರೀಜಿಯವರು ಮತ್ತೊಂದು ಉದಾಹರಣೆ ಹೇಳಿದರು. ಪತ್ರೀಜಿಯವರ ಎರಡನೆಯ ಮಗಳು ಪರಿಪತ್ರಿ. ಆಕೆಯು ಹಿಂದಿನ ಜನ್ಮದಲ್ಲಿ ಹೀಗೆಯೇ ಶ್ರೇಷ್ಠ ಸಾಧಕಳು. ಬಹಳ ಉನ್ನತ ಮಟ್ಟಕ್ಕೆ ಬೆಳೆದಿರುವಳಂತೆ, ಆಕೆಯ ಗೆಳತಿಗೆ ಏನೋ ರೋಗವು ಬಂದಿದೆ, ಬಹಳ ದಾರುಣವಾದ ಪರಿಸ್ಥಿತಿಯಲ್ಲಿದ್ದಾಳೆ. ಆ ಸ್ನೇಹಿತೆಯ ಮೇಲಿನ ಅನುಕಂಪದಿಂದ ಆಕೆಯು ತನ್ನ ಶಕ್ತಿಯನ್ನೆಲ್ಲ ಖರ್ಚು ಮಾಡಿ ಆಕೆಯ ರೋಗವನ್ನು ಕಡಿಮೆ ಮಾಡಿದಳು. ಈಕೆಯು ಸಾಮಾನ್ಯ ಮನುಷ್ಯಳಾಗಿ ಬಿಟ್ಟಳು. ಆದರೆ ಆಕೆಯು ಗುಣಮುಖವಾಗಿ ಮತ್ತೇ ಇದಕ್ಕೂ ಮೊದಲು ಯಾವ ತಪ್ಪುಗಳನ್ನು ಮಾಡುತ್ತಿದ್ದಳೋ ಅವೇ ತಪ್ಪುಗಳನ್ನು ಮಾಡಲು ಪ್ರಾರಂಭಿಸಿದಳು.

ಆಕೆಯಲ್ಲಿ ಯಾವ ಬದಲಾವಣೆಗಳು ಬರಲಿಲ್ಲ. ಹಿಂದೆ ಯಾವುವೋ ತಪ್ಪುಗಳನ್ನು ಮಾಡಿದ್ದರಿಂದ ಪ್ರಕೃತಿ ಹಾಕಿದ ಶಿಕ್ಷೆ ಇದು. ಆ ಶಿಕ್ಷೆಯು ಅನುಭವಿಸದೇ ಆಕೆಯಲ್ಲಿ ಬದಲಾವಣೆ ಬರದೇ ಈಕೆಯು ತನ್ನ ಶಕ್ತಿಯನ್ನೆಲ್ಲ ಖರ್ಚು ಮಾಡಿ ಆಕೆಯನ್ನು ಗುಣಮುಖ ಮಾಡಿದಳು. ಅದರ ಪರಿಣಾಮವಾಗಿ ಶಕ್ತಿಯನ್ನೆಲ್ಲ ಕಳೆದುಕೊಂಡು ಮತ್ತೆ ಜನ್ಮವನ್ನು ತೆಗೆದುಕೊಳ್ಳಬೇಕಾಗಿ ಬಂತು ಎಂದರು. ಅಂತಹ ಕೆಲಸಗಳನ್ನು ಏನೂ ಮಾಡಬೇಡ ಎಂದರು.

ನೀವು ಮಾಸ್ಟರ್ ಆಗಬೇಕೆಂದರೆ ನಿಮ್ಮ ಬೆಳವಣಿಗೆಯನ್ನು ನೀವು

ನೋಡಿಕೊಳ್ಳಿ. ನಿಮ್ಮ ಉನ್ನತಿಯನ್ನು ನೀವು ನೋಡಿಕೊಳ್ಳಿ! ಪಕ್ಕದವನ ಕರ್ಮವನ್ನು ಅವನು ಅನುಭವಿಸಲು ಬಿಡಿ! ಪ್ರಕೃತಿಯು ಹಾಕಿದ ಶಿಕ್ಷೆಯನ್ನು ನೀನು ಯಾರು ತೆಗೆಯಲು? ಪ್ರಕೃತಿಗಿಂತಲೂ ದೊಡ್ಡವನೇ ನೀನು? ಭಗವಂತನಿಗಿಂತ ನೀನು ದೊಡ್ಡವನೇ? ಭಗವಂತನು ಹಾಕಿದ ಶಿಕ್ಷೆಯನ್ನು ನೀನು ಬೀಳದಂತೆ ಮಾಡಬಲ್ಲೆಯಾ? ಭಗವಂತನನ್ನೇ ಧಿಕ್ಕರಿಸಿದವನಾಗುವೆ ಎಂದು ನೆನಪಿಟ್ಟುಕೊಳ್ಳಿ.

ಪ್ರಕೃತಿ ಹಾಕಿದ ಶಿಕ್ಷೆಯನ್ನು ಅನುಭವಿಸಲಾಗದಂತೆ ಮಾಡಬೇಕೆಂದು ನೋಡಿದರೆ ಆ ಪ್ರಕೃತಿಯನ್ನು ನೀವು ವಿಭೇಧಿಸಿದಂತೆಯೇ. ಹಾಗೆ ಮಾಡಿದ್ದಕ್ಕೆ ಪ್ರಕೃತಿ ಹಾಕಿದ ಶಿಕ್ಷೆಯನ್ನು ಮತ್ತೆ ನೀವು ಅನುಭವಿಸಬೇಕಾಗಿ ಬರುತ್ತದೆ. ಮಾರ್ಗವನ್ನು ಹೇಳಿರಿ, ಪರಿವರ್ತನೆಯನ್ನು ತನ್ನಿರಿ, ಧ್ಯಾನವನ್ನು ಚೆನ್ನಾಗಿ ಮಾಡಿಕೋ ಜ್ಞಾನವು ಚೆನ್ನಾಗಿ ಬರುತ್ತದೆ. ಆಗ ಇವೆಲ್ಲವೂ ಅರ್ಥವಾಗುತ್ತದೆ. ಇನ್ನು ಇಂತಹ ತಪ್ಪುಗಳನ್ನು ಮಾಡಬೇಡ ಎಂದು ಹೇಳಬೇಕು.

ಬಹಳ ಜನರು ರೇಕಿಗಳು ಎಂದೆನ್ನುತ್ತಿರುತ್ತಾರೆ. ನಿಜವಾಗಿ ಈ ರೇಕಿ ಮಾಡುವವರ ಬಳಿ ಅಷ್ಟು ಶಕ್ತಿ ಇದ್ದರೆ ಬಂದವರೆಲ್ಲರ ರೋಗಗಳನ್ನು ತೆಗೆದು ಹಾಕಿದರೆ ಲೋಕದಲ್ಲಿ ರೋಗವಿರುವವನು ಏಕೆ ಇರುತ್ತಾನೆ ಹೇಳಿ? ಒಂದು ಬಾರಿ ಆಲೋಚಿಸಿ. ರೋಗಗಳಿರುವವರು ಹೆಚ್ಚುತ್ತಿದ್ದಾರಾ? ಕಡಿಮೆಯಾಗುತ್ತಿದ್ದಾರಾ? ಮತ್ತೆ ಇಂಥವರೆಲ್ಲರೂ ಇದ್ದರೆ ಈ ಹೊತ್ತಿಗೆ ಕಡಿಮೆಯಾಗಬೇಕಲ್ಲವೇ? ಆಸ್ಪತ್ರೆಗಳೆಲ್ಲವೂ ಮುಚ್ಚಿ ಹೋಗಬೇಕಲ್ಲವೇ? ವೈದ್ಯರುಗಳು ನೊಣ ಹೊಡೆಯುತ್ತಾ ಇರಬೇಕಾಗಿತ್ತಲ್ಲವೇ?

ಎಲ್ಲಿಯಾದರೂ ವೈದ್ಯರು ನೊಣ ಹೊಡೆಯುತ್ತಿದ್ದಾರಾ? ಜನಗಳನ್ನು ಹೊಡೆಯುತ್ತಿದ್ದಾರೆ ಹೊರಗೆ! ಓ ಯಪ್ಪಾ! ಮೇಲೆ ಬೀಳಬೇಡಿರೋ ತಂದೆ! ಎಂದು ನೀವು ಹೇಳಿರುವುದೆಲ್ಲ ಸರಿಯೇ. ಆದರೆ ಮತ್ತೆ ಸಂಕಲ್ಪಗಳನ್ನಿಟ್ಟು ಪತ್ರೀಜಿಯವರಿಗೆ ಏಕೆ ವಾಸಿ ಮಾಡಲಿಲ್ಲ? ಮತ್ತೆ ಅವರು ಸಂಕಲ್ಪಗಳನ್ನು ಇಟ್ಟು ಏಕೆ ಮಾಡಲಿಲ್ಲ?

ನಮ್ಮ ಆಸ್ಟ್ರಲ್ ಸರ್ಜರಿಯಲ್ಲಿ ಪಾಲ್ಗೊಳ್ಳಿ, ನೀವು ಆಸ್ಪತ್ರೆಗೆ ಹೋಗದಂತೆ ನಿಮಗೆ ಸರ್ಜರಿಗಳು ಆಗಿಬಿಡುತ್ತವೆ ಎನ್ನುತ್ತಾರೆ. ಮತ್ತೆ ಹಾಗಿರುವಾಗ ಇವರು ಪತ್ರೀಜಿಯವರಿಗೂ ಕೂಡ ಸರ್ಜರಿ ಮಾಡಿಸಬಹುದಲ್ಲವೇ? ನಮ್ಮ ಸೀನಿಯರ್ ಮಾಸ್ಟರ್‌ಗಳೆಲ್ಲ ಏಕೆ ಮಾಡಲಿಲ್ಲ? ಆತನಿಗಿಂತಲೂ ಯಾರು ಮುಖ್ಯ ನಮಗೆ? ಯಾರೂ ಏನು ಮಾತಾಡಲಿಲ್ಲ. ಸುಮ್ಮನೆ ಕುಳಿತಿದ್ದಾರೆ. ಯಾರಿಗೆ ಅವರು ಮುಗ್ಧ ಜನರ ಬಳಿ ಅತಿಯಾಗಿ ವರ್ತಿಸುತ್ತಾರೆ ಅದೇ ಸಮಸ್ಯೆ ಪತ್ರೀಜಿಯವರಿಗೆ ಬಂದರೆ ಮಾತ್ರ ಯಾರೂ ಮಾತನಾಡಲಿಲ್ಲ.

ಈ ಸೃಷ್ಟಿಯಲ್ಲಿ ಒಳ್ಳೆಯದನ್ನು ಮಾಡುತ್ತಾ ಇದ್ದರೆ ಪ್ರಕೃತಿ ನಿಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸುತ್ತದೆ. ನೀವು ಒಳ್ಳೆಯ ಉದ್ದೇಶದಿಂದ ಕೆಲಸವನ್ನು ಮಾಡುತ್ತಿದ್ದರೆ

ಪ್ರಕೃತಿಯು ನಿಮಗೆ ಇನ್ನೂ ಒಳ್ಳೆಯ ಅವಕಾಶಗಳನ್ನು ಕಲ್ಪಿಸುತ್ತಾ ಇರುತ್ತದೆ.

ಈ ಪುರಾಣಗಳು, ಮಹಾಭಾರತ, ರಾಮಾಯಣ, ಭಾಗವತ ಇವೆಲ್ಲವನ್ನು ಅರ್ಥ ಮಾಡಿಕೊಳ್ಳಿ. ನಿಮ್ಮ ಜೀವನ ನಿಮ್ಮ ಕೈಯಲ್ಲಿಯೇ ಇರುತ್ತದೆ ಯಾರ ಕೈಯಲ್ಲೂ ಇಲ್ಲ. ನೀವು ಮಾಡುವ ಕೆಲಸಗಳನ್ನಾಧರಿಸಿ ಇರುತ್ತದೆ. ಇದೆಲ್ಲವನ್ನು ಬಹಳ ಎಚ್ಚರದಿಂದ ಪಾಲಿಸಬೇಕು. ಒಳ್ಳೆಯ ಮಾಸ್ಟರ್ ಆಗುವುದೇ ಅಲ್ಲ. ಒಳ್ಳೆಯ ಸ್ಥಿತಿಗೆ ಸೇರಿಕೊಳ್ಳುತ್ತೀರಿ.

**9) ಇತರರ ಮೇಲೆ ಕಕ್ಷೆಯನ್ನು ಸಾಧಿಸುವ ಕೆಲಸಗಳಿಗೆ ಸಹಕರಿಸಬಾರದು:** ಶತ್ರುವಾದರೂ ಆಗಿರಬಹುದು, ನಿನಗೆ ಎಷ್ಟೋ ನಷ್ಟವನ್ನುಂಟು ಮಾಡಿರಬಹುದು, ನೋವು ಕೊಟ್ಟಿರಬಹುದು, ಗಂಡನಾಗಬಹುದು, ಸ್ನೇಹಿತರಾಗಬಹುದು, ಬಂಧುಗಳಾಗಬಹುದು, ಪರಿಚಯದವನಾಗಿರಬಹುದು, ಯಾರಾಗಲಿ ಸರಿ ನಿನಗಾಗಲಿ ನಿನ್ನ ಕಡೆಯವರಿಗಾಗಲಿ ಏನು ನಡೆದರೆ ಕಕ್ಷೆ ಸಾಧಿಸುವ ಕೆಲಸಗಳಿಗೆ ಹೋಗಬೇಡ.

ಈ ಕಕ್ಷೆ ಸಾಧಿಸುವ ಕಾರ್ಯಗಳು ಎಂದರೆ ಗಂಡನ ಮೇಲೆ ಕೋಪ ಬಂದರೆ ಹೆಂಡತಿ ಸಾಧಿಸುತ್ತಾಳೆ. ಹೆಂಡತಿಯ ಮೇಲೆ ಕೋಪ ಬಂದರೆ ಗಂಡನು ಸಾಧಿಸುತ್ತಾನೆ. ಇಂಥವರು ಕೂಡ ಇದ್ದಾರೆ. ಆದರೆ ನೆನಪಿಟ್ಟುಕೊಳ್ಳಿ ಕಷ್ಟಪಡಿಸಿದವನು ಶಿಕ್ಷೆ ಅನುಭವಿಸದೆ ತಪ್ಪದು. ಆದ್ದರಿಂದ ಕಷ್ಟವಿಟ್ಟವನ ಮೇಲೆ ಕಕ್ಷೆ ಸಾಧಿಸುವುದು ಬೇಡ.

**10) ಶಾಪಗಳನ್ನು ಹಾಕಬಾರದು:** ನೀವು ಒಳ್ಳೆಯ ಮಾಸ್ಟರ್ ಆಗಬೇಕೆಂದರೆ ಶಾಪಗಳನ್ನು ಹಾಕಬಾರದು. ಇವು ನಿಮ್ಮ ಶಕ್ತಿಯನ್ನು ಹರಣ ಮಾಡುತ್ತದೆ. ಅವರು ನಾಶವಾಗಿ ಹೋಗಲಿ ಎಂದು ಅಂದುಕೊಳ್ಳಬಾರದು. ಮೇಲೆ ಏನೂ ಕಾಣಿಸರು ಆದರೆ ಒಳಗೆ ಮಾತ್ರ ಎಷ್ಟೋ ಶಾಪಗಳನ್ನು ಶಾಪನಾರ್ಥಗಳನ್ನು ಹಾಕುತ್ತಾರೆ. ನಮ್ಮ ಝೂಮ್‌ನೊಳಗೆ ನಮ್ಮ ಕ್ಲಾಸುಗಳಿಗೆ ಬರುವವರೇ ಬಹಳ ಜನ ಅವರ ಸಂಸಾರಗಳನ್ನು ಸರಿ ಮಾಡಿಕೊಂಡಿದ್ದಾರೆ. ಅವರ ಸಂಸಾರಗಳು ಎಷ್ಟೋ ಉತ್ತಮವಾಗಿ ಬದಲಾಗಿವೆ. ಸಾಧನೆಯನ್ನು ಮಾಡುತ್ತಾ ಮಾಡುತ್ತಾ ಇದ್ದರೆ ಒಳಗಿರುವ ಕಸ ಕಡ್ಡಿ ಎಲ್ಲಾ ಹೊರಗೆ ಬರುತ್ತದೆ. ಬದಲಾವಣೆ ಬರುತ್ತದೆ.

**11) ಅಧೋರೇತಸ್ಕರು:** ಅಂದರೆ ಅತಿಯಾಗಿ ಕಾಮವಾಂಛೆ ಉಳ್ಳವರು. ಸಂಸಾರ ವ್ಯಾಮೋಹವಿರುವವರು, ಅವರ ಶಕ್ತಿಯನ್ನು ಕಳೆದುಕೊಳ್ಳುವುದು ನಡೆಯುತ್ತದೆ. ಅದಕ್ಕೆ ಬಹಳಷ್ಟು ಜನರು ಸಾಧಕರು ಬ್ರಹ್ಮಚಾರಿಗಳಾಗಿ ಇದ್ದುಬಿಡುತ್ತಾರೆ. ಈ ಸಾಧನೆಯನ್ನು ಮಾಡುವವರು ಕೂಡ ಎಲ್ಲರೂ ತಡೆದುಕೊಳ್ಳಲಾರರು. ಆವೇಶದಿಂದ ಎಲ್ಲಾ ಬಿಟ್ಟು ಹೋಗಿ ಬಿಡುತ್ತಾರೆ. ಆದರೆ ಮತ್ತೆ ಇರಲಾರದೆ ಮತ್ತೆ ತಿರುಗಿ ಬಂದು ಬಿಡುತ್ತಿರುತ್ತಾರೆ.

ಅಧೋರೇತಸ್ಕರು ಅಂದರೆ ಯಾರು? ಊರ್ಧ್ವರೇತಸ್ಕರು ಅಂದರೆ ಯಾರು? ತಿಳಿದುಕೊಳ್ಳೋಣ...

ರೇತಸ್ಸು ಅಂದರೆ ವೀರ್ಯ. ವೀರ್ಯ ಅಂದರೆ ಶಕ್ತಿ. ಈ ವೀರ್ಯವು ರಕ್ತದೊಳಗಿನಿಂದ ರಕ್ತ ಕಣಗಳೊಂದಿಗೆ ತಯಾರಾಗುತ್ತದೆ. ಸಹಜವಾಗಿ ಮಾನವರು ಸಂಭೋಗ ಸಮಯದಲ್ಲಿ ವೀರ್ಯವನ್ನು ಸ್ಖಲಿಸುತ್ತಾರೆ. ಅಂದರೆ ಅಧೋಮುಖವಾಗಿ ಸ್ಖಲಿಸುತ್ತಾರೆ. ಅದಕ್ಕೆ ಅಧೋರೇತಸ್ಕರು ಎನ್ನುತ್ತಾರೆ.

ಅಂದರೆ ಶಕ್ತಿಯನ್ನು ವ್ಯರ್ಥ ಮಾಡಿಕೊಳ್ಳುತ್ತಾರೆ, ಅವರೇ ಸಂಸಾರಿಗಳು, ಸಂಭೋಗಿಗಳು, ಮತ್ತೆ ಪತ್ರೀಜಿಯವರು ಸಂಸಾರದಲ್ಲಿ ನಿರ್ವಾಣ ಎಂದಿದ್ದಾರೆ ಅಲ್ಲವೇ? ಎಂದು ಹೇಳುತ್ತಾರೆ. ಸಂಸಾರವನ್ನು ಮಾಡಬೇಡ ಎಂದು ಯಾರೂ ಹೇಳುವುದಿಲ್ಲ. ಸಂಸಾರ ಸುಖಗಳನ್ನು ಬಿಟ್ಟುಬಿಡು ಎಂದು ಕೂಡ ಯಾರೂ ಹೇಳರು. ಆದರೆ ಈ ಶಕ್ತಿ ಕಳೆದುಕೊಳ್ಳುವುದಕ್ಕೆ ಇದು ಕೂಡ ಒಂದು ಕಾರಣವೇ.

ನೆನಪಿಟ್ಟುಕೊಳ್ಳಿ ಬಹಳ ಜನ ಬ್ರಹ್ಮಚರ್ಯವನ್ನು ಪಾಲಿಸುವವರು ಇದ್ದಾರೆ. ಅದು ಇನ್ನೂ ಪರಾಕಾಷ್ಠೆಯ ಸ್ಥಿತಿಯನ್ನು ತಲುಪಿದಾಗ. ಆದರೆ, ಶಂಕರಾಚಾರ್ಯರು ಸಾಧನಾ ಚತುಷ್ಟಯದಲ್ಲಿ ಏನನ್ನು ಹೇಳಿದ್ದಾರೆ ಎಂದರೆ. 1 ವಿವೇಕ, 2 ವೈರಾಗ್ಯ, 3 ಶಟ್ ಸಂಪತ್ತು, 4 ಮುಮುಕ್ಷತ್ವ. ಅದರಲ್ಲಿ ಶಟ್ ಸಂಪತ್ತಿನಲ್ಲಿ ಆರು ಅಂಶಗಳಿವೆ. ಅವು 1) ಶಮ, 2) ಧಮ, 3) ತಿತೀಕ್ಷ, 4) ಉಪರತಿ 5) ಶ್ರದ್ಧ 6) ಸಮಾಧಾನ. ಈ ಅಂಶಗಳಲ್ಲಿ ನಾಲ್ಕನೇಯದು ಉಪರತಿ. ಅಂದರೆ ಕಾಮದಿಂದ ಸಂದರ್ಭಾನುಸಾರವಾಗಿ ಸ್ವಲ್ಪಮಟ್ಟಿಗೆ ಬಿಟ್ಟಿರುವುದು. ಅಂದರೆ ಪರಿಮಿತ ಸಂಭೋಗ ನಿಜವಾಗಿಯೂ ಬೇಡ ಎಂದು ಎಲ್ಲಿಯೂ ಹೇಳಲಿಲ್ಲ. ಅತಿಯಾಗಿ ಬೇಡ ಎಂದಿದ್ದಾರೆ. ಆದರೆ ಅಸಲು ಬೇಡವೆಂದು ಯಾರೂ ಹೇಳಿಲ್ಲ. ಬುದ್ಧನೂ ಕೂಡ ಮಧ್ಯೆ ಮಾರ್ಗವನ್ನು ಹೇಳಿದ್ದಾರೆ.

ಶ್ರೀಕೃಷ್ಣ ಭಗವಾನನು ಕೂಡ ಎಲ್ಲದರಲ್ಲೂ ಯುಕ್ತವಾಗಿ ಇರಬೇಕು ಎಂದಿದ್ದಾರೆ. ಅತಿಯಾಗಿ ಇರಬಾರದು, ಅಸಲು ಇಲ್ಲದಿದ್ದರೂ ಆಧ್ಯಾತ್ಮಿಕದಲ್ಲಿ ಬೆಳೆಯಲಾರರು ಸಂಸಾರ ಅಗತ್ಯವೇ ಅಲ್ಲವೆಂದು ಯಾರೂ ಹೇಳುವುದಿಲ್ಲ. ಆದರೆ ಅತಿಯಾಗಿ ಇರಬಾರದು. ಇದು ಕೂಡ ಶಕ್ತಿಯನ್ನು ನಷ್ಟ ಪಡಿಸುತ್ತದೆ. ಆದ್ದರಿಂದ ಪರಿಮಿತ ಸಂಭೋಗವೇ ಉತ್ತಮ.

ಎಷ್ಟು ಹೊತ್ತು ಏನೆಂದುಕೊಳ್ಳುತ್ತೇವೆ ಎಂದರೆ ಶಕ್ತಿಯನ್ನು ಕಳೆದುಕೊಳ್ಳುವುದು ಅಂದರೆ ಆಹಾರ ನಿಯಮಗಳು ಎಂದುಕೊಳ್ಳುತ್ತೇವೆ. ಆದರೆ ಎಷ್ಟೋ ರೀತಿಗಳಿವೆ ಇವುಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ನಾವು ಕಡಿಮೆ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಿಕೊಳ್ಳಬೇಕು. ಎಷ್ಟು ಕಡಿಮೆ ಮಾಡಿಕೊಂಡರೆ ನಿಮಗೆ ತಿಳಿಯದಂತೆಯೇ ನಿಮ್ಮ ಶಕ್ತಿ ಅಪಾರವಾಗಿ ಹೆಚ್ಚುತ್ತಾ ಇರುತ್ತದೆ. ನಿಮ್ಮ ಶಕ್ತಿ ಬೆಳೆದಂತೆಲ್ಲ ನಿಮ್ಮಲ್ಲಿ

ಎಷ್ಟೋ ಬದಲಾವಣೆಗಳು ಬರುತ್ತವೆ. ನಿಮ್ಮ ಬುದ್ಧಿ ಚೆನ್ನಾಗಿ ವಿಕಸಿಸುತ್ತದೆ ಉತ್ತಮವಾದ ನೈಪುಣ್ಯವು ಹೆಚ್ಚುತ್ತದೆ. ತಿಳಿದುಕೊಳ್ಳುವ ಶಕ್ತಿಯು ಹೆಚ್ಚುತ್ತದೆ. ಆಲೋಚಿಸುವ ಧೋರಣೆಯು ಬದಲಾಗುತ್ತದೆ. ನಿಮ್ಮಲ್ಲಿ ಜ್ಞಾನವು ಕೂಡ ಉದಯಿಸುತ್ತದೆ. ಆಗ ಉತ್ತಮವಾದ ಮಾಸ್ಟರ್ ನೀವಾಗಬಲ್ಲಿರಿ ಪ್ರತಿಯೊಬ್ಬರನ್ನು ಪ್ರಭಾವಿತಗೊಳಿಸುತ್ತೀರಿ. ಸರಿಯಾದ ಮಾರ್ಗದಲ್ಲಿ ನಡೆಸುತ್ತೀರಿ. ಎಷ್ಟೋ ಜನರು ನಿಮ್ಮಿಂದ ಬದಲಾವಣೆಯನ್ನು ತಂದುಕೊಳ್ಳುತ್ತಾರೆ ಪರಿವರ್ತನೆ ಹೊಂದುತ್ತಾರೆ. ನೀವೂ ಲಾಭವನ್ನು ಹೊಂದುತ್ತೀರಿ, ಲೋಕಕ್ಕೆ ಲಾಭವನ್ನು ತಂದು ಕೊಡುತ್ತೀರಿ.

ಆದ್ದರಿಂದ ನೆನಪಿಟ್ಟುಕೊಳ್ಳಿ, ಸಂಸಾರವು ಬೇಡವೆಂದು ಅಂದುಕೊಳ್ಳಬೇಕಾಗಿಲ್ಲ. ಸಂಸಾರವನ್ನು ಮಾಡಿಕೊಳ್ಳಬಹುದು ಅತಿ ಎಂಬುದು ಎಲ್ಲೆಡೆಯಲ್ಲೂ ಅನರ್ಥವೆಂದು ತಿಳಿದುಕೊಳ್ಳಬೇಕು. ನೀವು ಗಮನಿಸಿ ಹಿಂದೂ ಆಚಾರಗಳಲ್ಲಿ ಹೊಸದಾಗಿ ಮದುವೆಯಾದವರಿಗೆ ಆಷಾಢ ಮಾಸದಲ್ಲಿ ನಿಯಮವನ್ನು ಇಟ್ಟಿದ್ದಾರೆ. ಹೆಂಡತಿಯ ತವರು ಮನೆಗೆ ಗಂಡನು ಹೋಗಬಾರದು. ಅತ್ತೆಯ ಮನೆಗೆ ಈಕೆಯೂ ಹೋಗಬಾರದು. ಯಾರ ಮನೆಯಲ್ಲಿ ಅವರೇ ಇರಬೇಕು ಇಲ್ಲದಿದ್ದರೆ ಅದೊಂದು ದೊಡ್ಡ ದೋಷವೆನ್ನುವಂತೆ ಹೇಳುತ್ತಾರೆ.

ನಮ್ಮವರು ಬಹಳ ಬುದ್ಧಿವಂತರಾದ್ದರಿಂದ ಆ ಎರಡು ಮನೆಗೆ ಹೋಗದಂತೆ ಹನಿಮೂನ್‌ಗೆ ಹೋಗುತ್ತಾರೆ. ಏಕೆ ಈ ನಿಯಮವನ್ನು ಇಟ್ಟಿದ್ದಾರೆ ಎಂದರೆ ಹೊಸ ಮದು ಮಗನು ಹೊತ್ತು ಅರಿಯನಂತೆ, ಅವನಿಗೆ ರಾತ್ರಿ, ಹಗಲು ತಿಳಿಯದು. ಅವನಿಗೆ ಇರುವ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಾನೆ ಎಂದು, ಶಕ್ತಿಯನ್ನೆಲ್ಲ ಕಳೆದುಕೊಳ್ಳುತ್ತಾರೆಂದು, ಕನಿಷ್ಠ ಎರಡನೆಯ ವರ್ಷಕ್ಕೆ ಒಂದು ಹೆಣ್ಣು ಮಗುವೋ ಗಂಡು ಮಗುವೋ ಜನಿಸಿದರೆ ಇನ್ನೇನಿದೆ ಎಲ್ಲಾ ಮುಗಿಯುತ್ತದೆಯಾದ್ದರಿಂದ ಸ್ವಲ್ಪ ಕಡಿಮೆಯಾಗುತ್ತಾರೆಂದು ಅದು ಆಚಾರವೊಂದರ ಅರ್ಥ. ಅವರ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ, ನಷ್ಟ ಹೋಗುತ್ತಾರೆ ಎಂದು ಉದ್ದೇಶಿಸಿ ಇಟ್ಟಿದ್ದಾರಾಗಲಿ ಅದಕ್ಕಿಂತ ಇನ್ನೇನೂ ಇಲ್ಲ. ಅತಿಯಾಗಿ ಪಾಲ್ಗೊಂಡರೆ ಅವರಿಗೆ ಇಲ್ಲಸಲ್ಲದ ಅನರ್ಥಗಳು ಇರುತ್ತವೆ ಎಂದು ಪರಿಮಿತವಾಗಿ ಹೇಳುವುದಕ್ಕೆ ಈ ನಿಯಮಗಳೆಲ್ಲವೂ ಕೂಡ, ಅದಕ್ಕಿಂತ ಏನೂ ಇಲ್ಲ.

**12) ಪ್ರಕೃತಿಯು ನಿಮ್ಮನ್ನು ಗಮನಿಸುತ್ತದೆ ಎಂದು ತಿಳಿದುಕೊಳ್ಳಬೇಕು:** ಮಾಸ್ಟರ್ ಆಗಿ ಬೆಳೆಯಬೇಕೆಂದರೆ ಪ್ರಕೃತಿಯು ನಿಮ್ಮನ್ನು ಗಮನಿಸುತ್ತಿದೆ ಎಂದು ತಿಳಿದುಕೊಳ್ಳಬೇಕು. ನಮ್ಮ ಸೊಸೈಟಿಯಲ್ಲಿ ಯಾರಿಗೂ ಇದರ ಮೇಲೆ ತಿಳಿವಳಿಕೆ ಇಲ್ಲ. ಯಾರ ಬುದ್ಧಿವಂತಿಕೆಗಳನ್ನು ಅವರು ಪ್ರದರ್ಶಿಸುತ್ತಿದ್ದಾರೆ. ಆದರೆ ನಾವು

ಮಾಡುವ ಪ್ರತಿ ಕೆಲಸ,ನಾವು ಮಾತನಾಡುವ ಪ್ರತಿ ಮಾತು, ಪ್ರಕೃತಿ ಗಮನಿಸುವುದೇ ಅಲ್ಲ, ದಾಖಲಿಸುತ್ತ (ರೆಕಾರ್ಡ್ ಮಾಡುತ್ತಾ) ಇರುತ್ತದೆ. ದಾಖಲಿಸುವುದೇ ಅಲ್ಲ, ಸಮಯ ಸಂದರ್ಭನುಸಾರವಾಗಿ ಅದಕ್ಕೆ ತಕ್ಕ ಆ ಫಲಿತವು ಕೊಡಲ್ಪಡುತ್ತದೆ.

ನೀನು ಮಾಡುವ ಪ್ರಚಾರವಾಗಲಿ, ನೀನು ಹೇಳುವಂತಹ ಅನುಭವಗಳಾಗಲಿ, ನೀನು ಎಲ್ಲರಿಗೂ ಬೋಧಿಸುವ ವಿಷಯಗಳಾಗಲಿ ಸೃಷ್ಟಿ ವಿರುದ್ಧವಾಗಿದ್ದರೆ ಸೃಷ್ಟಿ ನಿಯಮಗಳನ್ನು ಅನುಸರಿಸಿ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅಲ್ಲಿ ನಿನ್ನ ಬುದ್ಧಿವಂತಿಕೆಗಳು ಕೆಲಸ ಮಾಡುವುದಿಲ್ಲ. ನೀನು ಏನೂ ಮಾಡಲಾರೆ.

ಪತ್ರೀಜಿಯವರು ಸಮಯ ಸಂದರ್ಭಾನುಸಾರವಾಗಿ ಹೇಳಿದರು. ಅಂದರೆ ನಿನ್ನ ಪಾಪವು ಹಣ್ಣಾದರೆ ಈ ಜನ್ಮದಲ್ಲಿಯೇ ಈಗಲೇ ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಇನ್ನು ಹಣ್ಣಾಗದಿದ್ದರೆ ಮರುಜನ್ಮದಲ್ಲಾದರೂ ಅದರ ಪರಿಣಾಮವನ್ನು ನೀವು ಎದುರಿಸಬೇಕಾಗುತ್ತದೆ.

ತಿಳಿಯದವರು, ಮುಗ್ಧರು, ಅಜ್ಞಾನಿಗಳು, ಮೂರ್ಖರು, ತಿಳಿವಳಿಕೆ ಇಲ್ಲದವರು, ಅಲ್ಪ ಮಾತ್ರದ ಜ್ಞಾನವಿಲ್ಲದವರು, ಬುದ್ಧಿ ವಿಕಸನವಾಗದವರು ಎಷ್ಟೋ ಜನರು ಇರುತ್ತಾರೆ. ಅಂಥವರ ಬಳಿ ನಿನ್ನ ಬುದ್ಧಿಯನ್ನು ಉಪಯೋಗಿಸಿದರೆ ಅದರ ಫಲವನ್ನು ನೀನೆ ಅನುಭವಿಸಬೇಕು. ಆದ್ದರಿಂದ ಯಾವಾಗಲೂ ನಾನು ಗಮನಿಸಲ್ಪಡುತ್ತಿದ್ದೇನೆ ಎಂದು ತಿಳಿದುಕೊಳ್ಳಬೇಕು.

ಅದಕ್ಕೆ ನಮ್ಮ ಝೂಮ್ ಕ್ಲಾಸ್‌ಗಳನ್ನು ಹೇಳುವವರಿಗೆ ಇದನ್ನೇ ಹೇಳುತ್ತಾ ಇರುತ್ತೇನೆ ನಾನು. ಕೇಳುತ್ತಿದ್ದಾರಲ್ಲ ಎಂದುಕೊಳ್ಳುತ್ತೀರಿ ಕೇಳುವುದು ಮುಖ್ಯವಲ್ಲ. ಹೇಳಿದ್ದು ಸೃಷ್ಟಿಗೆ ಅನುಗುಣವಾಗಿ ಇದೆಯೇ? ಇಲ್ಲವೇ? ಎನ್ನುವುದು ಮುಖ್ಯ.

ದೊಡ್ಡಸ್ಥಿಕೆಗಾಗಿ ಹೋಗಬೇಡಿ! ಪರಿಣಾಮಗಳು ಬಹಳ ತೀವ್ರವಾಗಿ ಇರುತ್ತವೆ. ನಿರ್ಭಯವಾಗಿ ಹೇಳಿ! ಯಾರಿಗೂ ಭಯಪಡಬೇಕಿಲ್ಲ! ಪ್ರಕೃತಿಗೆ ಭಯಪಡಿರಿ! ನೀವು ಕೇಳಬಹುದು ಇವೆಲ್ಲವೂ ನಮಗೆ ಹೇಗೆ ತಿಳಿಯುತ್ತವೆ? ಎಂದು. ಬುದ್ಧಿಯು ಚೆನ್ನಾಗಿ ವಿಕಸಿಸಿದರೆ ನಿಮಗೇ ಅರ್ಥವಾಗುತ್ತದೆ. ಬುದ್ಧಿ ಎಂದರೆ ಯಾವುದು ಒಳಿತು? ಯಾವುದು ಕೆಡುಕು? ಯಾವುದು ಮಾಡಬೇಕಾಗಿರುವುದು? ಯಾವುದು ಮಾಡಬಾರದು? ಯಾವುದು ಮಾತನಾಡಬೇಕಿರುವುದು? ಯಾವುದು ಮಾತನಾಡಬಾರದು? ಇವುಗಳನ್ನು ತಿಳಿದುಕೊಳ್ಳುವುದೇ ಬುದ್ಧಿ.

ಅದಕ್ಕಾಗಿಯೇ ನಾನು ಧ್ಯಾನವನ್ನು ಉತ್ತಮವಾಗಿ ಮಾಡಿರಿ ಎನ್ನುತ್ತೇನೆ. ಅವಕಾಶ ದೊರಕಿದಾಗಲೆಲ್ಲ ಮಾಡಿರಿ ಎನ್ನುತ್ತೇನೆ. ಒಂದೇ ಹೇಳುತ್ತಿದ್ದೇನೆ ನೀವು ಬುದ್ಧಿಯನ್ನು ವಿಕಸನ ಮಾಡಿಕೊಂಡರೆ ನಿಮ್ಮ ಜೀವನಕ್ಕೆ ಇನ್ನೂ ತಿರುಗೇ ಇಲ್ಲ.

ಆದ್ದರಿಂದ ಪ್ರಕೃತಿಯಿಂದ ಗಮನಿಸಲ್ಪಡುತ್ತಿದ್ದೇನೆ ಎಂಬುದನ್ನು ಮರೆಯಬಾರದು. ತರಗತಿಗಳನ್ನು ಹೇಳಲಾರದೆ ಹೋದರೂ ಸರಿ. ನೀನು ಝೂಮ್‌ಗಳನ್ನು ನಿರ್ವಹಿಸದೆ ಹೋದರೂ ಸರಿ ವಿರುದ್ಧವಾಗಿ ನೀನು ನಿರ್ವಹಿಸಿದರೆ ಮೇಲೆ ಏಳಲಾರದಂತಹ ಪೆಟ್ಟನ್ನು ತಿನ್ನುವೆ. ಹನುಮಂತನ ಬಳಿ ಕುಪ್ಪಳಿಕೆಗಳು, ಪ್ರಕೃತಿಯ ಬಳಿ ನಮ್ಮ ಕುಪ್ಪಳಿಕೆಗಳು. ಹನುಮಂತನ ಬಳಿ ಒಂದು ಕೋತಿ ಹಾಗೆ ಹೀಗೆ ಲಗಾಟ ಹೊಡೆಯಿತಂತೆ. ಆತನ ಬಳಿ ಈ ಕುಪ್ಪಳಿಕೆಗಳೇನು? ಹನುಮಂತನಂತಾದ್ದೇ ಪ್ರಕೃತಿ. ಕೋತಿಯಂತವರೇ ನಾವು ಆತನು ಮುಂದೆ ಕುಪ್ಪಳಿಕೆಗಳು ಹಾಕಿದರೆ ಹೇಗೆ? ನೀವು ಬಹಳ ಎಚ್ಚರದಿಂದ ಇರಬೇಕು.

ಪ್ರಾಪಂಚಿಕದಲ್ಲಿರುವಾಗ ಇಂತಹ ಶ್ರದ್ಧೆಯು ಅಗತ್ಯ ಇರದೇ ಇರಬಹುದು. ಆದರೆ ಆಧ್ಯಾತ್ಮಿಕದೊಳಗೆ ಬಂದಾಗ ಖಚಿತವಾಗಿ ಬಹಳ ಶ್ರದ್ಧೆ ಇರಬೇಕು. ಎಲ್ಲಿಯೂ ಕಕ್ಕುಲಾತಿ ಪಡಬಾರದು. ಯಾರನ್ನೂ ಪ್ರಲೋಭನೆಗೊಳಿಸಬಾರದು. ಯಾರನ್ನೂ ಮೋಸಗೊಳಿಸಬಾರದು. ಯಾರಿಗೂ ಮಾಯಾ, ಮಾಟದ ಮಾತುಗಳನ್ನು ಹೇಳಬಾರದು. ಭ್ರಮೆಯಲ್ಲಿರುವಂತೆ ಮಾಡಬಾರದು. ಆದ್ದರಿಂದ ಬಹಳ ಎಚ್ಚರದಿಂದ ಇರಬೇಕು. ನಾನು ಪುಸ್ತಕಗಳನ್ನು ಬರೆಯುತ್ತಿರುವಾಗ, ಈ ಕ್ಲಾಸ್‌ಗಳನ್ನು ಹೇಳುತ್ತಿರುವಾಗ ಕೆಲವು ಅಂಶಗಳು ಬಂದಾಗ ಬಹಳ ಆಲೋಚಿಸುತ್ತಿದ್ದೆನು. ಭಯಪಡುತ್ತಿದ್ದೆನು. ಇದೇನಾದರು ತಪ್ಪು ಸಂದೇಶವು ಹೋಗುತ್ತಾ ಎಂದು ಭಯಪಡುತ್ತಿದ್ದೆನು. ಬಹಳ ಆಲೋಚಿಸಿ ಬರೆಯುತ್ತಿದ್ದೆನು ಕಾರಣ ಇದೇ.

**13) ಶುದ್ಧ ಮನಸ್ಸೇ ಸಾಧನೆಗೆ ಗುರುವು ಆಗುತ್ತದೆ:** ನಿಮ್ಮ ಮನಸ್ಸು ಶುದ್ಧವಾಗಿದ್ದರೇನೇ ನೀವು ಉತ್ತಮ ಗುರುವಾಗಬಲ್ಲಿರಿ. ಆದ್ದರಿಂದ ಪ್ರತಿದಿನ ಮನಸ್ಸನ್ನು ಶುದ್ಧಿ ಮಾಡಿಕೊಳ್ಳುವ ಪ್ರಯತ್ನವನ್ನು ಮಾಡಬೇಕು. ಅದಕ್ಕೆ ತೀವ್ರವಾಗಿ 'ಶ್ವಾಸದ ಮೇಲೆ ಗಮನ ಧ್ಯಾನ' ಸಾಧನೆಯನ್ನು ಪ್ರತಿದಿನ ಮಾಡುತ್ತಾ ಇರಬೇಕು. ಮನೆಯನ್ನು ದೇಹವನ್ನು ಪ್ರತಿದಿನ ಹೇಗೆ ಶುಭ್ರ ಮಾಡಿಕೊಳ್ಳುತ್ತೇವೆಯೋ ಹಾಗೆಯೇ ಮನಸ್ಸನ್ನು ಧ್ಯಾನದ ಮೂಲಕ ಶುಭ್ರ ಮಾಡಿಕೊಳ್ಳಬೇಕು. ಮನೆಯನ್ನು ಪೊರಕೆಯಿಂದ ಶುಭ್ರ ಮಾಡುತ್ತೇವೆ. ದೇಹವನ್ನು ಸಾಬೂನಿನಿಂದ ಶುಚಿ ಮಾಡಿಕೊಳ್ಳುತ್ತೇವೆ. ಹಾಗೆಯೇ ಮನಸ್ಸನ್ನು 'ಶ್ವಾಸದ ಮೇಲೆ ಗಮನ ಧ್ಯಾನ'ದಿಂದ ಶುದ್ಧಿ ಮಾಡಬೇಕು.

ನೆನಪಿಟ್ಟುಕೊಳ್ಳಿ ನೀವು 'ಶ್ವಾಸದ ಮೇಲೆ ಗಮನ ಧ್ಯಾನ'ವನ್ನು ಎಷ್ಟು ಮಾಡಿದರೆ ನಿಮ್ಮ ಮನಸ್ಸು ಅಷ್ಟು ಶುದ್ಧವಾಗುತ್ತದೆ. ನಿಮ್ಮ ಮನಸ್ಸು ಎಷ್ಟು ಶುದ್ಧವಾದರೆ ನಿಮ್ಮ ಕೆಲಸಗಳು ಪ್ರಕೃತಿಗೆ ಅನುಗುಣವಾಗಿರುತ್ತವೆ. ನಿಮ್ಮ ಕೆಲಸಗಳು ಯಾವಾಗಾದರೆ ಪ್ರಕೃತಿಗೆ ಅನುಗುಣವಾಗಿ ಇರುತ್ತವೆಯೋ ಜೀವನದಲ್ಲಿ ಎಲ್ಲಾ ಸತ್ಫಲಿತಗಳು

ಬರುತ್ತವೆ. ಅಂದರೆ ಒಳ್ಳೆಯ ಫಲಿತಾಂಶಗಳು ಉಂಟಾಗುತ್ತಾ ಇರುತ್ತವೆ. ತೀವ್ರ ಧ್ಯಾನ ಸಾಧನೆಯ ಜೊತೆಗೆ ಸಾತ್ವಿಕವಾದ ಶಾಖಾಹಾರವನ್ನು ತೆಗೆದುಕೊಳ್ಳಬೇಕು. ಆ ರೀತಿಯಾಗಿ ಮಾಡುತ್ತಾ ಬುದ್ಧಿಯನ್ನು ಚೆನ್ನಾಗಿ ವಿಕಸನ ಪಡಿಸಿಕೊಳ್ಳಬೇಕು. ಮನಸ್ಸು ಶುದ್ಧಿಯಾದರೆ ಬುದ್ಧಿಯು ವಿಕಸಿಸುತ್ತದೆ.

**14) ಮಾಸ್ಟರ್ ಅಂದರೆ ಎಲ್ಲರಿಗೂ ಬೋಧಿಸುವವನೇ ಮಾಸ್ಟರ್:** ನೀವು ಉತ್ತಮ ಮಾಸ್ಟರ್ ಆಗಬೇಕೆಂದರೆ ಸರಿಯಾದ ಧ್ಯಾನವನ್ನು 'ಶ್ವಾಸದ ಮೇಲೆ ಗಮನ'ವನ್ನೇ ಬೋಧಿಸಬೇಕು. ಸಂಕಲ್ಪ ಧ್ಯಾನಗಳು, ಓಂಕಾರ ಧ್ಯಾನಗಳು, ಮನಿ ಮೆಡಿಟೇಶನ್‌ಗಳು, ಗೈಡಿಂಗ್ ಮೆಡಿಟೇಷನ್‌ಗಳು ಇವೆಲ್ಲವೂ ನಿಜವಾಗಿಯೂ ಧ್ಯಾನಗಳೇ ಅಲ್ಲ.

"ಧ್ಯಾನವೆಂದರೆ ಶ್ವಾಸದ ಮೇಲೆ ಗಮನ"ವೆಂದೇ ಹೇಳಬೇಕು. ನೀವು ರಾಜಿಯಾಗಿ ಹೇಳಿದರೆ ಎಷ್ಟೋ ಹಿಂದಕ್ಕೆ ಹೋಗಿಬಿಡುತ್ತೀರಿ. ಕೊನೆಗೆ ಅದೃಶ್ಯವಾಗಿಬಿಡುತ್ತೀರಿ.

ಅಷ್ಟೇ ಅಲ್ಲ ಉಳಿದ ಧ್ಯಾನಗಳಿಗೆ ಹಾಗೂ 'ಶ್ವಾಸದ ಮೇಲೆ ಗಮನ'ಕ್ಕೆ ಇರುವ ವ್ಯತ್ಯಾಸವನ್ನು ಹೇಳುವಂತಾಗಬೇಕು. ಈ ವಿಷಯದಲ್ಲಿ ಬಹಳ ಜನರಿಗೆ ಸಂದೇಹಗಳು ಬರುತ್ತವೆ. ಸಹಜವಾಗಿ ಎಲ್ಲಿ ನೋಡಿದರೂ ಗೈಡಿಂಗ್ ಮೆಡಿಟೇಶನ್ಗಳು ಎನ್ನುತ್ತಿದ್ದಾರೆ. ನಾವೇನೋ ಶ್ವಾಸದ ಮೇಲೆ ಗಮನ ಅಂದರೆ ಎಷ್ಟೋ ಸಂದೇಹಗಳು ಬರುತ್ತವೆ. ಅವರಿಗೆ ಅವೆಲ್ಲ ಸಂದೇಹಗಳನ್ನು ನೀವು ಸ್ಪಷ್ಟವಾಗಿ ಬಗೆಹರಿಸುವಂತಾಗಬೇಕು.

ಅದಕ್ಕೆ ಆ ವಿಷಯವನ್ನು ನೀವು ಮೊದಲು ಕಲಿತುಕೊಳ್ಳಬೇಕು. ಅದರ ಮೇಲೆ ಹಿಡಿತವನ್ನು ಸಂಪಾದಿಸಬೇಕು. ಪತ್ರೀಜಿಯವರು ಮ್ಯೂಸಿಕ್ ಇಡುತ್ತಿದ್ದಾರಲ್ಲ! ಎನ್ನುತ್ತಾರೆ. ಅದಕ್ಕೆ ನೀವು ಸರಿಯಾದ ಉತ್ತರವನ್ನು ಹೇಳುವಂತಾಗಬೇಕು. ಬಹಳ ಕಡೆ ನಾನು ಇದರ ಕುರಿತು ವಿವರಣೆ ಕೊಟ್ಟಿದ್ದೇನೆ. ಅವು ನಿಮಗೆ ತಿಳಿದಿದ್ದರೆ ಯಾರು ಏನನ್ನು ಕೇಳಿದರೂ ನೀವು ಹೇಳುತ್ತೀರಿ. ಮಾಸ್ಟರ್ ಆಗಬೇಕೆಂದರೆ ಪ್ರತಿಯೊಂದರ ಮೇಲೆ ಪ್ರಭುತ್ವವಿರಬೇಕು.

**15) ಸತ್ಯವನ್ನು ಆಶ್ರಯಿಸಬೇಕೆಂದರೆ 'ಶ್ವಾಸದ ಮೇಲೆ ಗಮನ' ಒಂದೇ ಮಾರ್ಗವೆಂದು ಹೇಳಬೇಕು:** ನೀವು ಸತ್ಯವೊಂದರ ಶ್ರೇಷ್ಠತೆಯನ್ನು ಕೂಡ ತಿಳಿದುಕೊಳ್ಳಬೇಕು. 18 ಆದರ್ಶಸೂತ್ರಗಳಲ್ಲಿ 14ನೇ ಸೂತ್ರ ವಿಗ್ರಹ ಆರಾಧನೆ ಬೇಡ ಸತ್ಯಾರಾದನೆ ಮಾಡಬೇಕು ಎಂದಿದ್ದಾರೆ ಪತ್ರೀಜಿಯವರು. ಸತ್ಯಾರಾಧನೆಯನ್ನು ಏಕೆ ಮಾಡಬೇಕು? ಸತ್ಯವೆಂದರೆ ಏನು? ಸತ್ಯವೊಂದರ ಶ್ರೇಷ್ಠತೆ ಏನು? ಎಷ್ಟೋ ತಿಳಿದುಕೊಳ್ಳಬೇಕು. ನಿಜವಾಗಿಯೂ ಸೃಷ್ಟಿಯಲ್ಲಿ ಸತ್ಯವನ್ನು ಆಶ್ರಯಿಸಬೇಕೆಂದರೆ

'ಶ್ವಾಸದ ಮೇಲೆ ಗಮನ'ದ ಹೊರತು ಮತ್ತೊಂದಿಲ್ಲ.

ಮುಖ್ಯವಾಗಿ ಅಸತ್ಯವನ್ನು ಬೋಧಿಸಬಾರದು, ಸಮರ್ಥಿಸಬಾರದು, ಮೌನವಾಗಿ ಸುಮ್ಮನಿರಬಾರದು ನೀವು ಹಾಗೆ ಮಾಡಿದರೆ ಅವುಗಳ ಪರಿಣಾಮವಾಗಿ ಎಷ್ಟೋ ನಷ್ಟ ಹೊಂದುತ್ತೀರಿ. ನೀವು ಹೇಳುವಾಗ ಎಷ್ಟೋ ಜನ ಅಜ್ಞಾನಿಗಳಿರುತ್ತಾರೆ. ನೀವು ಏನನ್ನು ಹೇಳಿದರೂ ಹೂಂಗುಡುತ್ತಾರೆ. ನೀವು ದೊಡ್ಡವರಾಗಿ ಬಿಟ್ಟೆವೆಂದುಕೊಂಡರೆ ಕೆಸರಿನಲ್ಲಿ ಜಾರಿದಂತೆಯೇ!

**16) ನೀವು ಹೇಳುವ ಕ್ಲಾಸ್‌ಗಳಲ್ಲಿ ಶಿಸ್ತನ್ನು ಪಾಲಿಸುವಂತೆ ಮಾಡಬೇಕು:** ಇದು ಕೂಡ ಬಹಳ ಮುಖ್ಯ. ನೀವು ಒಳ್ಳೆಯ ಫಲಿತಾಂಶವನ್ನು ಹೊಂದಬೇಕೆಂದರೆ ಶಿಸ್ತನ್ನು ಕೂಡ ಪಾಲಿಸುವಂತೆ ಮಾಡಬೇಕು. ಹೀಗೆ ಮಾಡಿದರೆ ಮಾಸ್ಟರ್‌ಗಳಿಗೂ ಲಾಭವೇ, ಮಾಡುವವರೆಗೂ ಲಾಭವೇ. ನೀವು ನನ್ನನ್ನು ಗಮನಿಸಿದರೆ ನಿಮಗೆ ಅರ್ಥವಾಗುತ್ತದೆ. ಶಿಸ್ತಿನ ವಿಷಯದಲ್ಲಿ ನಾನು ತುಂಬಾ ಗಂಭೀರವಾಗಿರುತ್ತೇನೆ. ಸೃಷ್ಟಿಗೆ ಅನುಗುಣವಾಗಿ ನಾವು ಪ್ರಯತ್ನಿಸಿದಾಗ ಎಲ್ಲಾ ಆ ಸೃಷ್ಟಿಯೇ ನೋಡಿಕೊಳ್ಳುತ್ತದೆ.

**17) ಶಿಸ್ತನ್ನು ಪಾಲಿಸುವಂತೆ ಮಾಡುವುದರಲ್ಲಿ ಮುಲಾಜು ಹಿಡಿಯಬಾರದು**: ಅವನು ದೊಡ್ಡವನಾ? ಸಣ್ಣವನಾ? ನಮಗೆ ಅವೆಲ್ಲ ಅನಗತ್ಯ ಎಲ್ಲರೂ ಒಂದೇ. ಯಾರನ್ನೂ ಒಪ್ಪಿಕೊಳ್ಳಬಾರದು. ಆಗಲೇ ಪ್ರಕೃತಿ ಎಷ್ಟೋ ಸಂತೋಷಿಸುತ್ತದೆ. ಸಹಕರಿಸುತ್ತದೆ ನಿಮಗೆ.

**18) ನೀವು ಮಾಸ್ಟರ್ ಆಗಬೇಕೆಂದರೆ ಎಲ್ಲದಕ್ಕಿಂತಲೂ ಮೊದಲು ನೀವು ಮಾಡಬೇಕಾದಂತ ಮುಖ್ಯವಾದ ಕೆಲಸವೇನೆಂದರೆ ಬುದ್ಧಿಯನ್ನು ವಿಕಾಸನ ಮಾಡಿಕೊಳ್ಳಬೇಕು;** ಯಾರಿಗಾದರೂ ಬುದ್ಧಿಯನ್ನು ವಿಕಸನ ಮಾಡಿಕೊಳ್ಳಿರಿ ಎಂದೇ ಹೇಳಬೇಕು. ಬುದ್ಧಿ ವಿಕಸನವಾಗಬೇಕೆಂದರೆ ತೀವ್ರವಾದ ಧ್ಯಾನ ಸಾಧನೆ ಹಾಗೂ ಸಾತ್ವಿಕವಾದ ಆಹಾರ ಈ ಎರಡು ಮುಖ್ಯ.

**19) ಜ್ಞಾನವನ್ನು ಹೆಚ್ಚಿಸಿಕೊಂಡು ಜ್ಞಾನ ಬೋಧೆ ಮಾಡಬೇಕು**: ಜ್ಞಾನಬೋಧೆ ಏಕೆ ಮಾಡಬೇಕು? ಬೋಧೆಗಳು ಎಷ್ಟೋ ರೀತಿಯಾಗಿವೆ. ಎಲ್ಲಾ ಬೋಧೆಗಳಿಗಿಂತ ಜ್ಞಾನಭೋದೆ ಬಹಳ ಬಹಳ ಶ್ರೇಷ್ಠವಾದದ್ದು. ಅದಕ್ಕೆ ನಾನು ಅದನ್ನೇ ಹಿಡಿದುಕೊಂಡೆನು. ನೀವು ನಿಜವಾಗಿಯೂ ಈ ಮಾರ್ಗದಲ್ಲಿ ಬೆಳೆಯಬೇಕು ಅಂದರೆ ಬೋಧಿಸಬೇಕಾಗಿರುವುದು ರೋಗಗಳ ಕುರಿತು ಅಲ್ಲ. ಸಾಮಾನ್ಯವಾಗಿ ನಮ್ಮವರೇ ಧ್ಯಾನವನ್ನು ಮಾಡಿರಿ ಎಂದರೆ ಅವುಗಳನ್ನೇ ಹೇಳುತ್ತಾರೆ. ಧ್ಯಾನವನ್ನು ಮಾಡು ಈ ರೋಗಗಳೆಲ್ಲ ಹೋಗುತ್ತವೆ ಎನ್ನುತ್ತಾರೆ. ಯಾರಿಗೆ ರೋಗ ಹೋಯಿತು? ಅವನೇ ಆಸ್ಪತ್ರೆಗೆ ಹೋಗಿ ಬರುತ್ತಾನೆ. ಆದ್ದರಿಂದ ನೀನು ಜ್ಞಾನವನ್ನು ಸಂಪಾದಿಸಿಕೊಂಡರೆ ಉಳಿದ ಲಾಭಗಳು ತಾನಾಗಿಯೇ ಬರುತ್ತವೆ. ಆದ್ದ–ರಿಂದ ಜ್ಞಾನಬೋಧೆ ಮಾಡಬೇಕು. ಅದಕ್ಕೆ ನೀನು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು.

**20) ಜ್ಞಾನ ಬೋಧೆಯನ್ನು ಮಾಡುವವರು ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ ಎಲ್ಲಿಯವರೆಗೆ ಸತ್ಯನಿಷ್ಠೆ, ಧರ್ಮನಿಷ್ಠೆಯನ್ನು ಹೊಂದಿರುತ್ತೀರೋ ಅಲ್ಲಿಯವರೆಗೆ ಅವರ ಮಾತುಗಳಿಗೆ ಮೌಲ್ಯವಿರುತ್ತದೆ:** ನೀವು ಮಾತನಾಡುವ ಮಾತುಗಳಿಗೆ ನೀವು ಹೇಳುವ ವಾಕ್ಯಗಳಿಗೆ ಬೆಲೆ ಇರಬೇಕು. ಅಂದರೆ ಸತ್ಯನಿಷ್ಠೆ ಧರ್ಮ ನಿಷ್ಠೆಯನ್ನು ಹೊಂದಿರಬೇಕು. ಸತ್ಯನಿಷ್ಠೆ ಅಂದರೆ ಸತ್ಯವನ್ನು ನುಡಿಯಬೇಕು. ಸತ್ಯವನ್ನು ಬೋಧಿಸಬೇಕು ಸತ್ಯದಲ್ಲಿ ಜೀವಿಸಬೇಕು. ಧರ್ಮನಿಷ್ಠೆ ಅಂದರೆ ಧರ್ಮಕ್ಕೆ ಕಟ್ಟುಬಿದ್ದು ಇರಬೇಕು. ಧರ್ಮಕ್ಕೆ ಅನುಗುಣವಾಗಿ ಹೇಳುವಂತಾದು ಸತ್ಯದ ಪರವಾಗಿರಬೇಕು. ನೀವು ಗೈಡಿಂಗ್ ಮೆಡಿಟೇಶನ್ನನ್ನು ಹೇಳಿದರೆ ಅಸತ್ಯವನ್ನೇ ಬೋಧಿಸುತ್ತಿದ್ದಂತೆಯೇ. 'ಶ್ವಾಸದ ಮೇಲೆ ಗಮನ' ಹೇಳಿದರೆ ಖಚಿತವಾಗಿ ನೀವು ಸತ್ಯವನ್ನು ಬೋಧೆ ಮಾಡುತ್ತಿದ್ದೀರಿ. ಆ ಶ್ವಾಸದ ಮೇಲೆ ಗಮನದಿಂದಲೇ ಪತ್ರೀಜಿಯವರು ಈ ಸಂಸ್ಥೆಯನ್ನು ಈ ಸ್ಥಾಯಿಗೆ ತಂದಿದ್ದಾರೆ ಎಂದು.

ನೆನಪಿಟ್ಟುಕೊಳ್ಳಿ ಮನಸ್ಸು ಶುದ್ಧಿ ಮಾಡಿಕೊಂಡರೆ ಬುದ್ಧಿ ವಿಕಸಿಸುತ್ತದೆ. ಬುದ್ಧಿ ವಿಕಸಿಸಿದರೆ ಇತರರಿಗೆ ಅರ್ಥವಾಗುವಂತೆ ಹೇಳಬಲ್ಲಿರಿ. ಹಾಗೆಯೇ ಮನಸ್ಸು ಶೂನ್ಯ ಮಾಡಿಕೊಂಡರೆ ಜ್ಞಾನವು ಉದಯಿಸುತ್ತದೆ. ಜ್ಞಾನವು ಉದಯಿಸಿದರೆ ಆಚರಿಸುವುದೇ ಅಲ್ಲ ಆಚರಿಸುವಂತೆ ಮಾಡಬಲ್ಲಿರಿ ಇವು ಎರಡೂ ಮುಖ್ಯವಾದ ವಿಷಯಗಳು.

**21) ಮಾಸ್ಟರ್ ಎನ್ನುವಂಥವನು ಆಧ್ಯಾತ್ಮಿಕ ತ್ರಿರತ್ನಗಳನ್ನು ಪಾಲಿಸಬೇಕು:** ನೀವು ಪಾಲಿಸುವುದಲ್ಲ ಇತರರಿಗೆ ಕೂಡ ನೀವು ಬೋಧಿಸಬೇಕಾದದ್ದು ಇದೇ. ಸರಿಯಾದ ಬೋಧೆಯಿಂದ ನಿನ್ನ ಮುಂದಿರುವವನಲ್ಲಿ ಬದಲಾವಣೆ ಬರುತ್ತದೆ. ನೀವೂ ಬೆಳೆಯುತ್ತೀರಿ. ಆಧ್ಯಾತ್ಮಿಕ ತ್ರಿರತ್ನಗಳೆಂದರೆ ಸಾಧನೆ, ಸ್ವಾಧ್ಯಾಯ, ಸೇವೆಯೂ ಕೂಡ ಅಗತ್ಯವೆಂದು ಪತ್ರೀಜಿಯವರು ಹೇಳಿದ್ದಾರೆ.

ಸಾಧನೆ ಎಂದರೆ 'ಶ್ವಾಸದ ಮೇಲೆ ಗಮನ' ಧ್ಯಾನವು, ಸ್ವಾಧ್ಯಾಯ ಅಂದರೆ ಆತ್ಮಜ್ಞಾನಕ್ಕೆ ಸಂಬಂಧಿಸಿದಂತಹ ಪುಸ್ತಕಗಳನ್ನು ಓದುವುದು, ಓದಿಸುವುದು. ಸಾಂಗತ್ಯವೆಂದರೆ ಆತ್ಮ ಜ್ಞಾನದ ಕುರಿತು ಹೇಳುವವರ ಸಂದೇಶಗಳನ್ನು ಕೇಳುವುದು.

ಆಧ್ಯಾತ್ಮಿಕ ತ್ರಿರತ್ನಗಳು ಎಷ್ಟು ಶ್ರೇಷ್ಠವಾದವೋ ಪತ್ರೀಜಿಯವರು, ಶಂಕರಾಚಾರ್ಯರು ಹೇಳಿರುವಂತಹ ಈ ಶ್ಲೋಕದ ಮೂಲಕ ವಿವರಿಸಿದ್ದಾರೆ

**ಭಗವದ್ಗೀತ ಕಿಂಚಿ ದಧೀತಾ**
**ಗಂಗಾಜಲ ಲವ ಕಣಿಕಾ ಪೀತ ।**
**ಸಕೃದಪಿ ಯೇನ ಮುರಾರಿ ಸಮರ್ಚಾ**
**ಕ್ರಿಯತಾ ತಸ್ಯ ಯಮೇನ ಚರ್ಚಾ ॥**

**ತಾತ್ಪರ್ಯ**: ಭಗವದ್ಗೀತೆಯಲ್ಲಿ ಒಂದು ಶ್ಲೋಕವನ್ನಾದರೂ ಯಾರು ಓದುತ್ತಾರೋ, ಗಂಗಾಜಲವೊಂದರ ಒಂದು ಹನಿಯನ್ನಾದರೂ ಯಾರು ಪಾನ ಮಾಡುತ್ತಾರೋ ಅಂತಹವರ ಕುರಿತು ಯಮನು ಹಿಡಿಸಿಕೊಳ್ಳುವುದಿಲ್ಲ ಎಂದು ಹೇಳಲಾಗಿದೆ. ಅಂದರೆ ಇದರ ಅರ್ಥ ಆಧ್ಯಾತ್ಮಿಕ ತ್ರಿರತ್ನಗಳನ್ನು ಪಾಲಿಸಬೇಕು.

**22) ಮಾಸ್ಟರ್ ಆಗಿ ಬೆಳೆಯಬೇಕೆಂದರೆ ಶಿರಡಿ ಬಾಬಾ ಹೇಳಿರುವಂತಹ ಎರಡು ಮುಖ್ಯವಾದ ವಿಷಯಗಳು 'ಶ್ರದ್ಧ' 'ಸಬೂರಿ' ಚಿತ್ತ ಶುದ್ಧಿಯಿಂದ ಪಾಲಿಸಬೇಕು.**

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಭಗವಾನನು ಶ್ರದ್ಧಾವಾನ್ ಲಭತೇ ಜ್ಞಾನಂ ಎಂದಿದ್ದಾರೆ. ಸಬೂರಿ ಎಂದರೆ ಸಹನೆ. ಶಂಕರಾಚಾರ್ಯರು ತಿತೀಕ್ಷ ಎಂದಿದ್ದಾರೆ. ಸಹನೆಯೇ ಪ್ರಗತಿ ಎಂದು ಪತ್ರೀಜಿಯವರು ಹೇಳಿದ್ದಾರೆ. ನಾವು ಧ್ಯಾನದಲ್ಲಿ ಕುಳಿತಾಗ ಬರುವ ನೋವುಗಳನ್ನು ಸಹಿಸಬೇಕು. ಸಹನೆ ಇರುವವರು ಧ್ಯಾನದಲ್ಲಿ ಎಷ್ಟು ಗಂಟೆಗಳಾಗಲಿ ಕುಳಿತುಕೊಳ್ಳಬಲ್ಲರು. ಸಹನೆ ಇಲ್ಲದವರು ಆ ಕಡೆ ಈ ಕಡೆ ತಿರುಗುತ್ತಾ ನೆಪಗಳನ್ನು ಹೇಳುತ್ತಾ ಇರುತ್ತಾರೆ ಧ್ಯಾನವನ್ನು ಮಾಡಲಾರರು.

**23) ನೀವು ಎಲ್ಲಿಯಾದರೂ ಕ್ಲಾಸ್‌ಗಳನ್ನು ಹೇಳಬೇಕು ಎಂದುಕೊಂಡಾಗ ಆಧ್ಯಾತ್ಮಿಕವಾಗಿ ನೀವು ಹೇಳಬೇಕೆಂದುಕೊಂಡಿರುವ ಅಂಶಗಳನ್ನು ಒಂದು ಚೀಟಿಯಲ್ಲಿ ಬರೆದುಕೊಳ್ಳಬೇಕು. ನೀವು ಯಾವ ಯಾವ ಅಂಶಗಳನ್ನು ಹೇಳಬೇಕೆಂದುಕೊಂಡಿರುವಿರೋ ಅವುಗಳನ್ನು ಬರೆದುಕೊಳ್ಳಿ, ಅದರಲ್ಲಿಂದ ಒಂದು ಅಂಶವಾದ ನಂತರ ಮತ್ತೊಂದು ಅಂಶವನ್ನು ವಿವರಿಸಿರಿ.**

ಈಗ ನಾನು ಹೇಳುತ್ತಿರುವ ಎಲ್ಲವೂ ಕೂಡ ಒಂದೊಂದು ಅಂಶವನ್ನು ಒಂದು ಗಂಟೆ ಹೇಳುತ್ತೇನೆ. ಅಂಶ ಒಂದೇ ಆದರೂ ಅಲ್ಲಿ ವಿವರಣೆ ಗಂಟೆ ಇರುತ್ತದೆ. ನಿಮ್ಮ ಜ್ಞಾನ ಪರಿಧಿಯು ಬೆಳೆದಂತೆಲ್ಲ ನೀವು ಅಷ್ಟಾಗಿ ವಿವರಿಸಬಲ್ಲಿರಿ. ಒಂದು ಅಂಶವನ್ನು ನೀವು ಎಷ್ಟು ಹೆಚ್ಚಾಗಿ ಹೇಳಿದರೆ ನೀವು ಜ್ಞಾನವನ್ನು ಹೊಂದಿದಂತೆಯೇ ಲೆಕ್ಕ.

ಹಾಗೆಯೇ ಶ್ರೇಷ್ಠ ಜ್ಞಾನವನ್ನು ನಾಲ್ಕು ಮಾತುಗಳಲ್ಲಿ ಹೇಳುವಂತೆ ಇರಬೇಕು ಅದು ಕೂಡ ನಿಮ್ಮ ಜ್ಞಾನವು ಚೆನ್ನಾಗಿ ಬೆಳೆದಂತೆ ಲೆಕ್ಕ. ಪ್ರತಿ ಪದಕ್ಕೂ ಅರ್ಥವನ್ನು ತಿಳಿದುಕೊಂಡು ಹೇಳಬೇಕು.ಆದ್ದರಿಂದ ನೀವು ಓದಿರುವುದರಲ್ಲಿ ಪ್ರತಿ ಪದಕ್ಕೂ ಅರ್ಥವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರಿ. ಯಾರು ಏನು ಕೇಳಿದರೂ ನೀವು ಹೇಳುವಂತವರು ಆಗಬೇಕು. ಆಗ ನಿಮ್ಮ ಶ್ರೇಷ್ಠತೆಯನ್ನು ಅವನು ಅರ್ಥ ಮಾಡಿಕೊಳ್ಳುತ್ತಾನೆ. ನನಗೆ ತಿಳಿಯದು, ತಿಳಿದುಕೊಂಡು ಹೇಳುತ್ತೇನೆ ಈ ಮಾತುಗಳು ಬಂದರೆ ಉಪಯೋಗವಿಲ್ಲ. ಅವರಿಗೆ ನಿನ್ನ ಮೇಲೆ ವಿಶ್ವಾಸ ಬರಬೇಕೆಂದರೆ ನೀವು

ಹೇಳುವಾಗ ಎಲ್ಲವುದಕ್ಕೂ  ಅರ್ಥವನ್ನು ತಿಳಿದುಕೊಂಡಿರಬೇಕು.

ನೀವು ಹೆಚ್ಚು ವಿಷಯವನ್ನು ಹೇಳಬೇಕಾಗಿಲ್ಲ. ಅಂಶಗಳು ಕಡಿಮೆ ಇದ್ದರೂ ಉದಾಹರಣೆಗಳು ಹೆಚ್ಚಾಗಿ ಇರಬೇಕು ಎಂಬುದನ್ನು ನೆನಪಿಟ್ಟುಕೊಳ್ಳಿ. ಹೆಚ್ಚಾಗಿ ಹೇಳಿದ್ದೇನೆ ಎಂದಲ್ಲ, ನೀವು ಸ್ವಲ್ಪ ಹೇಳಿದರೂ ಸರಿ ಪ್ರತಿ ಪದಕ್ಕೂ ಅರ್ಥವನ್ನು ತಿಳಿದುಕೊಂಡರೆ ಎಷ್ಟು ಚೆನ್ನಾಗಿ ಹೇಳುತ್ತೀರಿ.

ಕ್ಲಾಸ್‌ಗಳನ್ನು ಹೇಳುವಾಗ ಎಷ್ಟು ಹೊತ್ತೋ ನೀವು ಕಂಠಪಾಠ ಮಾಡಿದ್ದನ್ನು ಏನೋ ಅಲ್ಲಿ ಕುಳಿತಾಗ ಬಂದದ್ದನೋ ಹೇಳುವುದಲ್ಲ. ಅಲ್ಲಿ ಯಾರು ಯಾರು ಇದ್ದಾರೆ, ಯಾವ ರೀತಿಯವರಿದ್ದಾರೆ. ಓದಿಕೊಂಡವರು ಇದ್ದಾರಾ? ಇಲ್ಲವೇ ಕೂಲಿಕಾರ್ಮಿಕರೇ? ಶಿಕ್ಷಿತರೇ, ಜ್ಞಾನಿಗಳೇ? ಅಜ್ಞಾನಿಗಳೇ? ಆಸಕ್ತಿ ಇರುವವರಾ? ಆಸಕ್ತಿ ಇಲ್ಲದವರೋ? ಲಾಭಾಕಾಂಕ್ಷೆ ಉಳ್ಳವರೇ? ಜ್ಞಾನಾಕಾಂಕ್ಷೆ ಉಳ್ಳವರೇ? ಇವೆಲ್ಲವನ್ನೂ ಸ್ವಲ್ಪ ಗಮನಿಸಿಕೊಳ್ಳಬೇಕು.

ಏನೂ ಇಲ್ಲದೆ ನೀವು ಕಂಠಪಾಠ ಮಾಡಿಕೊಂಡು ಬಂದು ಅಲ್ಲಿ ಯಾರಿದ್ದರೂ ಅದನ್ನೇ ಹೇಳಿದರೆ ಇವರೇನು ಹೀಗೆ ಹೇಳುತ್ತಿದ್ದಾರೆ. ಇವರಿಗೆ ಇದಕ್ಕಿಂತಲೂ ಏನು ಬಾರದೇನೋ ಎಂದುಕೊಳ್ಳುತ್ತಾರೆ. ಎಲ್ಲಿಗೆ ಹೋದರೂ ಸವೆದು ಹೋದ ರೆಕಾರ್ಡ್‌ನಂತೆ ಇದನ್ನೇ ಹೇಳುತ್ತಾರೆ ಎಂದುಕೊಳ್ಳುತ್ತಾರೆ.

ಅಲ್ಲಿರುವವರನ್ನೆಲ್ಲ ಪರಿಶೀಲಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಇದ್ದಾರೆಯೇ? ಮುದುಕರಿದ್ದಾರಾ? ಸ್ತ್ರೀಯರಿದ್ದಾರಾ? ಯೌವ್ವನದಲ್ಲಿರುವವರು ಇದ್ದಾರಾ? ಆಧ್ಯಾತ್ಮವಾಗಿ ಅನುಭವದಲ್ಲಿದ್ದಾರಾ? ನಿಜವಾಗಿಯೂ ಅವರು ಯಾರ ಅನುಯಾಯಿಗಳು. ಶಿರಡಿ ಬಾಬರವರ ಅನುಯಾಯಿಗಳೇ? ಸತ್ಯಬಾಬಾರವರ ಅನುಯಾಯಿಗಳೇ?, ರಾಮಕೃಷ್ಣ ಮಿಷನ್ನಿನವರೇ? ಹೀಗೆ ಪ್ರತಿಯೊಬ್ಬರೂ ಯಾವುದೋ ಒಂದು ಸಂಸ್ಥೆಯಲ್ಲಿ ಇರುತ್ತಾರೆ. ಅದಕ್ಕೆ ನಾನು ಏನು ಹೇಳುತ್ತೇನೆ ಎಂದರೆ ಸಾವಧಾನವಾಗಿ ಕುಳಿತು ಅವರು ಮಾತನಾಡಿಕೊಳ್ಳುತ್ತಾ ಇರುತ್ತಾರೆ ಅವರು ಮಾತನಾಡಿಕೊಳ್ಳುವುದನ್ನು ಆಧರಿಸಿ ಇವರು ಇಂಥವರು ಎಂದು ಅರ್ಥವಾಗುತ್ತದೆ. ಬುದ್ಧಿ ವಿಕಸಿಸಿದರೆ ನಿಮಗೆ ಅರ್ಥವಾಗುತ್ತದೆ. ಅದಕ್ಕೆ ಪತ್ರೀಜಿಯವರು ಎಲ್ಲರನ್ನು ಏನು ವಿಶೇಷತೆಗಳು ಎಂದು ಮಾತನಾಡಿಸುತ್ತಾರೆ.

ಆದ್ದರಿಂದ ನೆನಪಿಟ್ಟುಕೊಳ್ಳಿ ಅಲ್ಲಿರುವ ಪರಿಸ್ಥಿತಿಗಳನ್ನು ನೋಡಿಕೊಳ್ಳಬೇಕು. ನೀವು ಪ್ರಾರಂಭದಲ್ಲಿ ಕ್ಲಾಸ್‌ಗಳನ್ನು ಹೇಳುವುದಕ್ಕೆ ಯಾರು ಕರೆದರೂ ಅವರ ಮನೆಗೆ ಹೋಗಿ ನೀವು ಕಂಠಪಾಠ ಮಾಡಿದ್ದನ್ನು ಅಲ್ಲಿ ಕಕ್ಕಿಬಿಡುತ್ತೀರಿ.

ನೆನಪಿಟ್ಟುಕೊಳ್ಳಿ ನಾನು ಮಾಡುವ ಕೆಲಸವೇನೆಂದರೆ ಸುತ್ತಲಿನ ಪರಿಸರವನ್ನು

ಗಮನಿಸುತ್ತೇನೆ. ಆ ಮನೆಯಲ್ಲಿ ಆ ಕೋಣೆಯಲ್ಲಿ ಸತ್ಯ ಸಾಯಿಬಾಬಾರವರ ಫೋಟೋ ಇದೆ ಎಂದುಕೊಳ್ಳಿ ಅವರು ಸತ್ಯ ಸಾಯಿಬಾಬಾ ಭಕ್ತರು. ಶಿರಡಿ ಬಾಬಾರವರ ಫೋಟೋ ಇದ್ದರೆ ಶಿರಡಿ ಬಾಬಾ ಭಕ್ತರು. ಕೃಷ್ಣನ ಫೋಟೋ ಇದ್ದರೆ ಕೃಷ್ಣನ ಭಕ್ತರು. ಯಾರಿಗೆ ಯಾವ ದೇವರು ಇಷ್ಟವಾದರೆ ಆ ಫೋಟೋಗಳನ್ನು ಇಡುತ್ತಾರೆ.

ಅಲ್ಲಿ ಜೀಸಸ್ ಫೋಟೋ ಇದ್ದರೆ ನೀನು ಕೃಷ್ಣನ ಕುರಿತು ಹೇಳಿದೆ ಎಂದುಕೋ ಏನು ಮಾಡುತ್ತಾರೆ? ಸಾಕು, ಸಾಕುಬಿಡು ನಮಗೆ ನೀನು ಹೇಳುವುದೇನು? ಎನ್ನುತ್ತಾರೆ. ಜೀಸಸ್ ಫೋಟೋ ಇದ್ದರೆ ಜೀಸಸ್ ಮೇಲೆ ವಿಷಯವನ್ನು ಹೇಳಬೇಕು, ಅದನ್ನು ಧ್ಯಾನಕ್ಕೆ ತಂದುಕೊಳ್ಳಬೇಕು.

ಮಾಂಸಹಾರದ ಕುರಿತು ಹೇಳಬೇಕೆಂದುಕೊಂಡಿರಿ ಜೀಸಸ್ ಏನು ಹೇಳಿದ್ದಾನೆ? ನಿನ್ನನ್ನು ನೀನು ಪ್ರೀತಿಸಿಕೊಂಡಂತೆ ನಿನ್ನ ಪಕ್ಕದವರನ್ನು ಪ್ರೀತಿಸು ಎಂದಿದ್ದಾರೆ. ಪಕ್ಕದವರು ಅಂದರೆ ಯಾರು? ಅವರು ಆ ಪಕ್ಕದವರು ಈ ಪಕ್ಕದವರು ಎಂದುಕೊಳ್ಳುತ್ತಾರೆ. ಪಕ್ಕದಲ್ಲಿರುವ ಮೇಕೆ, ಕೋಳಿ, ಮೀನು, ನಾಯಿ ಪ್ರತಿ ಜೀವಿಯು ಪಕ್ಕದವರೇ ಎಂದು ವಿವರಿಸಬೇಕು. ಕ್ರೈಸ್ತರಾದರೆ ಅಂತಹ ವಿಷಯಗಳನ್ನು ತೆಗೆದುಕೊಳ್ಳಬೇಕು. ಅದಕ್ಕೆ ನೀವು ಪತ್ರೀಜಿಯವರ ಪುಸ್ತಕಗಳು ಇವೆ. ನಾನು ಅವುಗಳನ್ನೇ ಓದಿ ಈಗ ನಿಮಗೆ ಹೇಳಬಲ್ಲವನಾಗಿದ್ದೇನೆ.

ಬೈಬಲ್ ಎಲ್ಲಾ ಓದಬೇಕಾಗಿಲ್ಲ, ಬೈಬಲನ್ನು ಎಲ್ಲಾ ಓದಿದರೂ ಏನೂ ಹೇಳಲಾರಿರಿ. ನಾವು ಪತ್ರೀಜಿಯವರು ಕೊಟ್ಟ ಸಣ್ಣ ಪುಸ್ತಕವನ್ನು ಓದಿದರೆ ಬೈಬಲ್‌ನಲ್ಲಿರುವ ಎಷ್ಟೋ ವಿಷಯಗಳನ್ನು ಹೇಳಬಹುದು. ಕೃಷ್ಣನ ಫೋಟೋ ಇದ್ದರೆ ಭಗವದ್ಗೀತೆಯ ಮೇಲೆ ಹೇಳಬೇಕು. ಶಿರಡಿ ಬಾಬಾ ಫೋಟೋ ಇದ್ದರೆ ಶಿರಡಿ ಬಾಬಾ ಸಂದೇಶಗಳನ್ನು ಹೇಳಬೇಕು. ಸತ್ಯ ಸಾಯಿಬಾಬಾ ಫೋಟೋ ಇದ್ದರೆ ಆತನ ಸಂದೇಶಗಳನ್ನು ಕೆಲವು ತಿಳಿದುಕೊಳ್ಳುವುದೇ ದಿನಗಟ್ಟಲೆ ನಾವೇನೂ ಹೇಳುವುದಿಲ್ಲ. ಅಲ್ಲಿ ಅಷ್ಟು ಸಮಯವೂ ಇರುವುದಿಲ್ಲ. ನಾಲ್ಕು ಪಾಯಿಂಟ್‌ಗಳನ್ನು ಹೇಳಿದರೆ ಸಾಕು. ಅಲ್ಲಿರುವವರು ಶರಣಾಗಿಬಿಡುತ್ತಾರೆ.

ಬಹಳ ಮನೆಗಳಲ್ಲಿ ಪೂಜಾ ಮಂದಿರಗಳಿರುತ್ತವೆ, ಪೂಜಾ ಮಂದಿರಗಳು ಇರುವಾಗ ಆ ಹೂಗಳು ತಾಜಾ ಆಗಿ ಇವೆ ಎಂದುಕೊಳ್ಳಿ ಅದರ ಅರ್ಥ ಅವರು ದಿನವೂ ಪೂಜೆಗಳನ್ನು ಮಾಡುತ್ತಿದ್ದಾರೆ ಎಂದು ಅರ್ಥ. ಎಲ್ಲಾ ಇವೆ ಆದರೆ ಊದುಬತ್ತಿಗಳು, ಆರತಿ, ಕರ್ಪೂರ ಏನೂ ಇಲ್ಲ ಅಂದ್ರೆ ಅವರಲ್ಲಿ ಬದಲಾವಣೆ ಬಂದಿದೆ ಧ್ಯಾನ ಮಾಡುತ್ತಿದ್ದಾರೆ. ಆದ್ದರಿಂದ ಅವುಗಳನ್ನೇನು

ಅವರು ಅನುಸರಿಸುತ್ತಿಲ್ಲ ಎಂದು ನಾವು ಲೆಕ್ಕ ಹಾಕಬಹುದು.

ಹಾಗೆ ಅಲ್ಲಿಯ ವಾತಾವರಣವನ್ನಾಧರಿಸಿ ನೀವು ಅಂದಾಜು ಹಾಕುವಂತಾಗಬೇಕು. ನೋಡಿಕೊಳ್ಳಿ ಇವೆಲ್ಲ ನಿಮಗೆ ಬಹಳ ಅಂಶಗಳಿವೆ. ಅಷ್ಟೇ ಅಲ್ಲ, ಎಲ್ಲಿಗೆ ಹೋದರು ಕೇಳಿಸಿಕೊಳ್ಳುವವರು ವಿವಿಧ ಸ್ಥಾಯಿಯಲ್ಲಿ ಇರುತ್ತಾರೆ. ಈಗ ನೀವೆಲ್ಲ ಒಂದೇ ಸ್ಥಿತಿಯಲ್ಲಿ ಇಲ್ಲ ಒಬ್ಬೊಬ್ಬರು ಒಂದೊಂದು ಸ್ಥಾಯಿಯಲ್ಲಿ ಇದ್ದೀರಿ. ಆದ್ದರಿಂದ ಕೇಳುವವರ ಸ್ಥಾಯಿಗೆ ತಕ್ಕಂತೆ ನೀವು ಹೇಳುತ್ತಿರಬೇಕು. ಮಾಸ್ಟರ್ ಆಗಬೇಕೆಂದರೆ ಇವೆಲ್ಲವನ್ನೂ ಗಮನಿಸಬೇಕು. ನೀನು ಕಡಿಮೆ ಸ್ಥಾಯಿಯಲ್ಲಿ ಇರುವವನ ಕುರಿತು ಹೇಳಿದರೆ ಹೆಚ್ಚಿನ ಸ್ಥಾಯಿಯಲ್ಲಿ ಇರುವವರು ಓಡಿ ಹೋಗುತ್ತಾರೆ. ಹೆಚ್ಚಿನ ಸ್ಥಾಯಿಯಲ್ಲಿ ಇರುವವರ ಕುರಿತು ಹೇಳಿದರೆ ಕಡಿಮೆ ಸ್ಥಾಯಿಯಲ್ಲಿರುವವರು ಓಡಿ ಹೋಗುತ್ತಾರೆ. ಅಲ್ಲಿ ಬಹುವಾಗಿ ಅಂದರೆ ಬಹಳ ಜನರು ಎಂಥವರೆಂದು ನೋಡಬೇಕು. ಅವರನ್ನು ಉದ್ದೇಶಿಸಿ ಹೇಳಬೇಕು. ಉಳಿದವರೂ ಇರುತ್ತಾರೆ ಮಧ್ಯ ಮಧ್ಯದಲ್ಲಿ ಅವರನ್ನು ಒಳಗೊಂಡಂತೆ ಹೇಳುತ್ತಿರಬೇಕು. ಹೇಳುವ ವಿಷಯ ಅರ್ಥವಾಗುವುದಕ್ಕೆ ಕಡ್ಡಾಯವಾಗಿ ಸಾಧ್ಯವಾದಷ್ಟು ಉಪಮಾನವನ್ನು ಹೇಳುತ್ತಿರಬೇಕು. ಪತ್ರೀಜಿಯವರ ಬಳಿ ನಾನು ಕಲಿತುಕೊಂಡಿದ್ದೇನೆ ಉಪಮಾನವನ್ನು ಹೇಳಿದರೆ ಮುಂದಿನವರಿಗೆ ಚೆನ್ನಾಗಿ ಅರ್ಥವಾಗುತ್ತದೆ.

ಮುಖ್ಯವಾಗಿ ನಿಮ್ಮ ನಿಜ ಜೀವನದಲ್ಲಿ ನಡೆಯುವಂತವಾಗಲಿ, ಪ್ರಕೃತಿಯಲ್ಲಿ ನಡೆಯುತ್ತಿರುವಂತವಾಗಲಿ ಪ್ರತಿಯೊಂದನ್ನು ಗಮನಿಸುತ್ತಾ ಇರಬೇಕು. ನಿಜವಾಗಿಯೂ ನಿಮ್ಮ ಜೀವನದಲ್ಲಿ ನಿಮಗೆ ನಿಮ್ಮ ಎದುರಲ್ಲಿ ಏನು ನಡೆಯುತ್ತಿದ್ದರೂ ಆ ದೃಷ್ಟಿಯಿಂದಲೇ ನೋಡಿರಿ. ಹೇಗೆ ನೋಡಬೇಕೆಂದರೆ ನಿಮ್ಮ ಮನೆಯಲ್ಲಿ ಜಗಳವಾಯಿತು. ಏಕೋ ಮಾತಿಗೆ ಮಾತು ಬಂದು ಬೈದುಕೊಳ್ಳುವುದು, ಹೊಡೆದುಕೊಳ್ಳುವುದು ಹಾಗೆಯೇ ಜಗಳಗಳು ನಡೆಯುತ್ತಿರುತ್ತವೆ. ನೀವು ಮಾಡಬೇಕಾದದ್ದು ಏನೆಂದರೆ. ಏಕೆ ಹೀಗೆ ನಡೆಯಿತು? ಎಂದು ಪ್ರಶ್ನೆ ಹಾಕಿಕೊಳ್ಳಿ. ಜಗಳವು ಏಕೆ ಬಂದಿತು? ಈ ಸಮಸ್ಯೆಯು ಏಕೆ ಉದ್ಭವವಾಯಿತು? ಇಲ್ಲಿಯವರೆಗೆ ಚೆನ್ನಾಗಿತ್ತು ಒಂದೇ ಬಾರಿಗೆ ಈ ಸನ್ನಿವೇಶ ಏಕೆ ವಿರುದ್ಧವಾಯಿತು. ಈಗ ನಡೆದ ಘಟನೆಯಿಂದ ಕಲಿತುಕೊಳ್ಳಬೇಕಾದದ್ದು ಏನನ್ನು? ಲೋಪವು ಆಕೆಯದೇ? ನನ್ನದೇ? ಹೀಗೆ ಅಷ್ಟು ಆಳವಾಗಿ ಹೋಗಬೇಕು. ನಿಮ್ಮ ಹೆಂಡತಿಯಾದರೂ ಸರಿ ಗಂಡನಾದರೂ ಸರಿ ಅಂತಹ ದೃಷ್ಟಿಯಿಂದಲೇ ನೀವು ನೋಡುತ್ತಾ ಇರಬೇಕು.

ಹೇಳುವ ವಿಷಯಕ್ಕೆ ಅನುಗುಣವಾಗಿ ಕಥೆಯನ್ನು ಕೂಡ ಹೇಳುತ್ತಿರಬೇಕು ನಾನು ವಿದ್ಯಾ ಪ್ರಕಾಶಾನಂದಗಿರಿ ಸ್ವಾಮೀಜಿ ಅವರನ್ನು, ಪತ್ರೀಜಿಯವರನ್ನು ಇಂತಹವರನ್ನು ನೋಡಿದೆನು. ಏನೋ ಒಂದನ್ನು ಹೇಳುತ್ತಾರೆ. ಪ್ರಾರಂಭದಲ್ಲಿ ನಾನು ಕೂಡ ಅವುಗಳ ಮೇಲೆ ದೃಷ್ಟಿ ಇಡುತ್ತಿದ್ದೆನು. ನಿಮಗೆ 'ಪರಮಾರ್ಥ ಕಥೆಗಳು' ಎನ್ನುವ ಪುಸ್ತಕವಿದೆ. ಅದನ್ನು ತಿಳಿದುಕೊಳ್ಳಿ, ಕಡ್ಡಾಯವಾಗಿ ಓದಿರಿ ತರಗತಿಗಳನ್ನು ಹೇಳುವುದಕ್ಕೆ ಆ ಕಥೆಗಳು ಬಹಳ ಚೆನ್ನಾಗಿರುತ್ತವೆ ಬಹಳ ಆಕರ್ಷಣೀಯವಾಗಿರುತ್ತವೆ.

**24) ನಿಮಗೆ ಜ್ಞಾನವು ಹೆಚ್ಚಿದಷ್ಟು ಅದಕ್ಕೂ ಮೊದಲು ಯಾವುದಾದರೆ ಸರಿ ಎಂದುಕೊಂಡಿದ್ದಿರೋ ಅವು ತಪ್ಪು ಎಂದು ನಿಮ್ಮಷ್ಟಕ್ಕೆ ನೀವೇ ಗ್ರಹಿಸುತ್ತೀರಿ. ಆಶ್ಚರ್ಯಗೊಳ್ಳುವಿರಿ.**

ಯಾವಾಗ ಗ್ರಹಿಸುತ್ತಿರೋ ಅದನ್ನು ಬಿಟ್ಟು ಬಿಡುತ್ತೀರಿ. ನೀವು ಗ್ರಹಿಸಿದ್ದನ್ನು ಹಿಡಿದುಕೊಳ್ಳುವುದಿಲ್ಲ. ನಿಮ್ಮಲ್ಲಿನ ಬದಲಾವಣೆಯನ್ನು ನೋಡಿ ಇತರರು ಆಶ್ಚರ್ಯಗೊಳ್ಳುತ್ತಾರೆ. ನಿಮ್ಮ ಕುಟುಂಬ ಸದಸ್ಯರು, ಇತರರು ನಿಮ್ಮನ್ನು ನೋಡಿ ಆ ಕೆಲಸಗಳನ್ನು ನೋಡಿ ಇತರರು ಎಷ್ಟು ಆಶ್ಚರ್ಯ ಪಡುತ್ತಿದ್ದರೆ ನೀವು ಅಷ್ಟಷ್ಟು ಬೆಳೆದಂತೆ ಲೆಕ್ಕ.

ಒಂದನ್ನು ನೆನಪಿಟ್ಟುಕೊಳ್ಳಿ ನೀವು ಎಷ್ಟು ವರ್ಷಗಳು ಧ್ಯಾನವನ್ನು ಮಾಡಿದರೂ ನಿಮ್ಮ ವರ್ತನೆಯಲ್ಲಿ ಯಾವ ಬದಲಾವಣೆ ಬಾರದಿದ್ದರೆ ಧ್ಯಾನದಲ್ಲಿ ನೀವು ಬೆಳೆದಿಲ್ಲದಂತೆಯೇ. ನಿಮಗೆ ಶಕ್ತಿಯು ಬಂದಿಲ್ಲದಂತೆಯೇ ಎಂದು ಲೆಕ್ಕ. ಇಷ್ಟು ವರ್ಷಗಳು ಮಾಡಿದರೂ ಸ್ವಲ್ಪಮಟ್ಟಿನ ಶಕ್ತಿ ಕೂಡ ಬಂದಿಲ್ಲ ಎಂದರೆ ನೀವು ಎಲ್ಲಿಯೋ ತಪ್ಪು ಮಾಡುತ್ತಿದ್ದೀರಿ ಆದ್ದರಿಂದ ಈ ಮಾರ್ಗದಲ್ಲಿ ಇರುವವರು ಸ್ವಯಂ ಪರೀಕ್ಷೆ ಮಾಡಿಕೊಳ್ಳಬೇಕು. ಇನ್ನೊಬ್ಬರು ಮಾಡುವ ಕೆಲಸವಿಲ್ಲ. ನಿಮ್ಮ ಕೃಷಿ ಫಲಿಸುತ್ತದೆಯೋ ಇಲ್ಲವೋ? ನಿಮ್ಮ ಕಷ್ಟಕ್ಕೆ ಫಲಿತವು ಬರುತ್ತದೆಯೋ ಇಲ್ಲವೋ ಎಂಬುದನ್ನು ಕೂಡ ಪರೀಕ್ಷೆ ಮಾಡಿಕೊಳ್ಳುತ್ತಿರಬೇಕು.

ಏಕೆಂದರೆ ನೀವು ಬೆಳೆಯದೇ ಇನ್ನೊಬ್ಬರಿಗೆ ಹೇಗೆ ಬೋಧಿಸುತ್ತೀರಿ? ಬಾಯಿಗೆ ಬಂದಂತೆ ಹೇಳಿದರೆ ಯಾರೂ ನಿಮ್ಮ ಬಳಿ ಇರುವುದಿಲ್ಲ. ಆದ್ದರಿಂದ ಹೇಳುವುದನ್ನು ಅರ್ಥ ಮಾಡಿಕೊಳ್ಳಬೇಕು. ಆಚರಣೆಯಲ್ಲಿ ಇಟ್ಟುಕೊಳ್ಳಬೇಕು. ಮೊದಲನೇಯದು ಬುದ್ಧಿಯು ವಿಕಸಿಸಬೇಕು ಎರಡನೇಯದು ಜ್ಞಾನವು ಉದಯಿಸಬೇಕು. ಅಂತರಾರ್ಥಗಳು ತಿಳಿಯಬೇಕೆಂದರೆ ಜ್ಞಾನವನ್ನು ಹೊಂದಬೇಕು.

**25) ಮಾಸ್ಟರ್ ಆಗಿ ಬೆಳೆಯಬೇಕೆಂದುಕೊಳ್ಳುವವರಿಗೆ ಯಾರಿಗಾದರೂ ಬೋಧಿಸಬೇಕಾದದ್ದು ಇದೆ. ಯಾವನಾದರೂ ನಾನು ಉದ್ಧರಿಸುತ್ತೇನೆ ಅಂದರೆ ಅವನು ಮಾಸ್ಟರ್ ಅಲ್ಲ. ನೀವೇ ಉದ್ಧರಿಸಿಕೊಳ್ಳಬೇಕು ಎಂದು ಹೇಳುವವನೇ ಸದ್ಗುರು ಎಂದು ನೆನಪಿಟ್ಟುಕೊಳ್ಳಿ. ಶ್ರೀಕೃಷ್ಣ ಭಗವಾನನು ಹೇಳಿಲ್ಲವೇ ಉದ್ದರೇದಾತ್ಮನಾತ್ಮಾನಾಂ ಎಂದು.**

ಯಾರನ್ನು ಯಾರು ಉದ್ಧರಿಸಲಾರರು. ಯಾವ ಲೋಕದಿಂದ ಯಾರೂ ಬರುವುದಿಲ್ಲ. ಆ ಜ್ಞಾನದಲ್ಲಿ ಇರುವವನೇ ಅದನ್ನು ಬೋಧಿಸುತ್ತಾನೆ. ನಾವು ಕಡಿಮೆ ಯಾದವರಲ್ಲ ನೀವು ಅನಂತ ಶಕ್ತಿ ಸ್ವರೂಪದ ಆ ಪರಬ್ರಹ್ಮವು ಎಂದು ಮರೆಯಬೇಡಿರಿ.

ಏಕೆಂದರೆ ಪತ್ರೀಜಿಯವರ ಪರಿಚಯವಾಗುವುದಕ್ಕೆ ಮೊದಲು ಶಿರಡಿ ಬಾಬಾ, ಸತ್ಯ ಸಾಯಿಬಾಬಾ ಈ ರೀತಿಯಾದ ಬೋಧೆಗಳನ್ನು ಮಾಡುತ್ತಿದ್ದರು. ಈ ಸ್ಥಾಯಿಗೆ ಬೆಳೆದವರು 'ನಾನು ದೇವರು' ಅಂದರೆ ನಾನು ಆಗ ಅಂದುಕೊಳ್ಳುತ್ತಿದ್ದೆನು, ಇವರು ಜನರನ್ನು ಭಲೇ ಮೋಸ ಮಾಡುತ್ತಿದ್ದಾರಲ್ಲ, ಇವರು ದೇವರೆಂದರೇನು ದೇವರುಗಳು ಕಾಣಿಸುತ್ತಾರಾ? ಹೀಗೆ ಅಂದುಕೊಳ್ಳುತ್ತಿದ್ದೆನು.

ಪತ್ರೀಜಿಯವರು ಪರಿಚಯವಾದ ಮೇಲೆ ತಿಳಿಯಿತು. ಅವರೇ ಅಲ್ಲ ನಾವೆಲ್ಲರೂ ದೇವರೆಂದು. ಅವರು ನಾನೇ ದೇವರು ಎಂದು ಹೇಳುತ್ತಿದ್ದರು. ನೀವು ಕೂಡ ದೇವರೇ ಎನ್ನುವ ಮಾತನ್ನು ಹೇಳುತ್ತಿರಲಿಲ್ಲ. ಅದನ್ನು ಪತ್ರೀಜಿಯವರು ಹೇಳಿದರು. ಎಲ್ಲಾ ದೇವರುಗಳೇ, ಎಲ್ಲರೂ ದೇವರುಗಳೇ, ನೀವು ಬೋಧೆ ಮಾಡುತ್ತಿರುವಾಗ ಇದನ್ನು ಮರೆಯಬೇಡಿರಿ. ನನ್ನ ಎದುರಿಗೆ ಇರುವವರೆಲ್ಲ, ಕುಳಿತವರೆಲ್ಲ ಸನ್ಯಾಸಿಗಳು ಎಂಬ ಭಾವದಿಂದ ಇರಬೇಡಿ. ಅವರು ಕೂಡ ನನ್ನಂಥವರೇ ನಾನು ಬೆಳೆದಿರುವೆ ಅವರು ಬೆಳೆಯುತ್ತಿದ್ದಾರೆ ಇದನ್ನು ಮರೆಯಬಾರದು.

ಪತ್ರೀಜಿಯವರು ನಾನು ನೀವು ಒಂದೇ. ನಾನು ಸ್ವಲ್ಪ ಮುಂದಿರುವೆ, ನೀವು ಸ್ವಲ್ಪ ಹಿಂದೆ ಇದ್ದೀರಿ ಅಷ್ಟೇ ವ್ಯತ್ಯಾಸ ಎಂದರು. ಆಗ ಅರ್ಥವಾಯಿತು, ಹೀಗೆ ಪತ್ರೀಜಿಯವರ ಬಳಿ ಎಷ್ಟೋ ಕಲಿತೆನು. ಆ ಮಾತಿನಲ್ಲಿಯೂ ಕೂಡ ಬಹಳ ಅರ್ಥವಿದೆ. ನಾನು ಎಷ್ಟೋ ಕಷ್ಟಪಟ್ಟೆನು, ಎಷ್ಟೋ ಕೃಷಿ ಮಾಡಿದೆನು. ಎಷ್ಟೋ ಸಾಧನೆಯನ್ನು ಮಾಡಿದೆನು. ಎಷ್ಟೋ ಪುಸ್ತಕಗಳನ್ನು ಓದಿದೆನು. ನಾನು ಎಷ್ಟೋ ಜ್ಞಾನವನ್ನು ಸಂಪಾದಿಸಿದೆನು ಎಂದು ಅರ್ಥ.

ನೀವು ಹಿಂದೆ ಇದ್ದೀರಿ ಅಂದರೆ ಅದರ ಅರ್ಥ ಹಿಂದೆ ಇರುವ ನೀವು ಆತನಂತೆ ಎಷ್ಟೋ ಕಷ್ಟ ಪಡಬೇಕು. ಎಷ್ಟೋ ಸಾಧನೆಯನ್ನು ಮಾಡಬೇಕು, ಎಷ್ಟೋ ಪುಸ್ತಕಗಳನ್ನು ಓದಬೇಕು, ಎಷ್ಟೋ ಸಾಂಗತ್ಯ ಮಾಡಬೇಕು, ಎಷ್ಟೋ

ಕೃಷಿ ಮಾಡಬೇಕು, ಎಷ್ಟೋ ಬೆಳೆಯಬೇಕು. ಆಗ ಮುಂದಕ್ಕೆ ಸಾಗುತ್ತೀರಿ.

ನೆನಪಿಟ್ಟುಕೊಳ್ಳಿ ನಾಲ್ಕು ಕ್ಲಾಸುಗಳನ್ನು ಕೇಳಿ ನಾಲ್ಕು ವಾಕ್ಯಗಳನ್ನು ಬರೆದುಕೊಂಡರೆ ಸರಿ ಹೋಗದು. ಗುರುಗಳು ಮಾತನಾಡುವ ಪ್ರತಿ ಮಾತೊಂದರ ಅರ್ಥವನ್ನು ತಿಳಿದುಕೊಳ್ಳಬೇಕು ನಾನು ಇದನ್ನು ಕೂಡ ಪತ್ರೀಜಿಯವರ ಬಳಿ ಗ್ರಹಿಸಿದೆನು, ಆತನ ಬಾಯಿಯಿಂದ ಬರುವ ಪ್ರತಿ ಮಾತಿಗೂ ಅಂತರಾರ್ಥವಿರುತ್ತದೆ. ಅದು ಸಹಜವಾಗಿ ತೆಗೆದುಕೊಂಡರೆ ಸಹಜವಾಗಿ ಕಾಣಿಸುತ್ತದೆ. ಆತನ ಮಾತುಗಳಲ್ಲಿ ಖಚಿತವಾಗಿ ಅಂತರಾರ್ಥವಿರುತ್ತದೆ. ಅಂತರಾರ್ಥವೆಂದರೆ ನಮಗೆ ಬೋಧಿಸುವ ವಿಷಯವೇ ಇರುತ್ತದೆ.

ಆತನು ಹೇಳುವ ಮಾತುಗಳಲ್ಲಿ ಸಂದೇಶವಿರದಂತೆ ಇರುವುದಿಲ್ಲ ಯಾರೊಂದಿಗೆ ಮಾತನಾಡಿದರು ಸಂದೇಶವೇ. ಅಜ್ಞಾನಿಗಳಿಗೆ ಸಾಮಾನ್ಯವಾದ ಮಾತುಗಳಂತೆ ಕಾಣಿಸುತ್ತವೆ. ಜ್ಞಾನಿಗಳಿಗೆ ಅವು ಸಂದೇಶಗಳಾಗಿ ಅರ್ಥವಾಗುತ್ತದೆ. ಅದಕ್ಕೆ ಆತನ ಬಳಿ ಇರುವಾಗ ನಾವು ಮಾತನಾಡುವುದಲ್ಲ. ಏನೋ ಬಾಯಿಗೆ ಬಂದದ್ದನ್ನು ಕೇಳುವುದಲ್ಲ, ಆತನು ಹೇಳುವ ವಿಷಯಗಳನ್ನು ಕೇಳಬೇಕು, ಕೇಳಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕು, ಅದಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು ಎಂಬುದು ಅರ್ಥವಾಯಿತು.

ಆದ್ದರಿಂದ ನಂತರ ಆತನು ಬಂದರೆ ಮಾತ್ರ ಹಾಗೆ ಪಕ್ಕದಲ್ಲಿ ಕುಳಿತೋ, ನಿಂತುಕೊಂಡೋ ಎಷ್ಟೋ ಹೊತ್ತು ಕೇಳಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಿದ್ದೆನು. ಮಾತನಾಡುತ್ತಿರಲಿಲ್ಲ. ನೆನಪಿಟ್ಟುಕೊಳ್ಳಿ ಮಹನೀಯರು ಬಂದಾಗ ಮಾತನಾಡಬೇಕು ಎಂದುಕೊಳ್ಳುವವನು ಕಲಿತುಕೊಳ್ಳಲಾರನು. ಕೇಳಿಸಿಕೊಳ್ಳಬೇಕು ಎಂದುಕೊಂಡವನೇ ಕಲಿಯುತ್ತಾನೆ.

ಪತ್ರೀಜಿಯವರೊಂದಿಗೆ ಇರುವಾಗ ನನ್ನ ಜೇಬಲ್ಲಿ ಪೆನ್ನು ಪುಸ್ತಕವು ಯಾವಾಗಲೂ ಇರುತ್ತಿತ್ತು. ಪತ್ರೀಜಿಯವರ ಬಳಿಯಿಂದ ಹೊಸ ಮಾತು, ಸಂದೇಶ ಯಾವುವು ಬಂದರೂ ತಕ್ಷಣವೇ ಬರೆದುಕೊಳ್ಳುತ್ತಿದ್ದೆನು. ಮಾಸ್ಟರ್ ಆಗಬೇಕೆಂದುಕೊಂಡವರು ಪೆನ್ನು ಪುಸ್ತಕವನ್ನು ಯಾವಾಗಲೂ ಹತ್ತಿರ ಇಟ್ಟುಕೊಳ್ಳಬೇಕು. ನೀವು ಕ್ಲಾಸ್‌ಗಳಿಗೆ ಪೆನ್ನು ಪುಸ್ತಕವಿಲ್ಲದೆ ಹೋಗಬೇಡಿರಿ. ಹೆಣ್ಣು ಮಕ್ಕಳಾದರೆ ಕೈ ಚೀಲದಲ್ಲಿಟ್ಟುಕೊಳ್ಳಿ ಗಂಡಸರಾದರೆ ಜೇಬಿನಲ್ಲಿ ಹಿಡಿಸುವ ಪೆನ್ನು ಪುಸ್ತಕವನ್ನು ಇಟ್ಟುಕೊಳ್ಳಿ.

ಈ ರೀತಿಯಾಗಿ ನನಗೆ ಎಷ್ಟೋ ಪುಸ್ತಕಗಳನ್ನು ಬರೆಯುವ ಅವಕಾಶ ಬಂದಿತು. ಈಗ ನಾನು ಯಾವುದಾದರೆ ಹೇಳುತ್ತಿದ್ದೇನೋ ನಿಮಗೆ ಅನುಭವದೊಳಗೆ ಬಂದಾಗ ನಾನು ಹೇಳಿದ್ದು ಸರಿ ಎಂದು ನಂತರ ತಿಳಿಯುತ್ತದೆ.

## ಕಬೀರರ ಸಂದೇಶಗಳು

**ನಮಗೆ ಬರುವ ಕಷ್ಟಗಳಾಗಲಿ, ಬಾಧೆಗಳಾಗಲಿ, ಸಮಸ್ಯೆಗಳಾಗಲಿ ಮತ್ತೊಂದಾಗಲಿ ಎಲ್ಲಾ ನಮ್ಮ ಸ್ವಯಂಕೃತಾಪರಾಧವೇ ಅಂದರೆ ನಮಗೆ ನಾವು ಮಾಡಿಕೊಂಡವೇ ಎಂದು ಕಬೀರರು ಹೇಳಿದ್ದಾರೆ.**

ನಮಗೆ ಪತ್ರೀಜಿಯವರು ಕೂಡ ಅದನ್ನೇ ಹೇಳುತ್ತಿದ್ದಾರೆ. ನಮ್ಮ ವಾಸ್ತವಕ್ಕೆ ನಾವೇ ಸೃಷ್ಟಿಕರ್ತರು ಎಂದಿದ್ದಾರೆ. ಅಂದರೆ ನಮ್ಮ ಜೀವನದಲ್ಲಿ ಒಂದು ಕಷ್ಟ ಬಂದರೂ, ನಷ್ಟ ಬಂದರೂ, ದುಃಖ ಬಂದರೂ, ನೋವಾದರೂ ಇವನು, ಅವನು ಅನ್ನುತ್ತೇವೆ. ಆದರೆ ನಮ್ಮ ಜೀವನದಲ್ಲಿ ನಡೆಯುವ ಎಲ್ಲದಕ್ಕೂ ನಾವೇ ಕಾರಣ ಎಂದು ತಿಳಿದುಕೊಳ್ಳಬೇಕು. 'ಸ್ವಯಂ ಕೃತಾಪರಾಧ' ಸ್ವಯಂ ಆಗಿ ನಮಗೆ ನಾವೇ ಮಾಡಿಕೊಂಡದ್ದಕ್ಕೆ ಅನುಗುಣವಾಗಿಯೇ ನಮ್ಮ ಪರಿಸ್ಥಿತಿಗಳು ಹೀಗಿವೆ.

ಮಾನವನು ಏಕೆ ದುಃಖ ಪಡುತ್ತಿದ್ದಾನೆ? ಏಕೆ ದುಃಖದಲ್ಲಿದ್ದಾನೆ? ದುಃಖವೆಂದರೆ ಅನೇಕ ಸಮಸ್ಯೆಗಳಿಂದ ಉಂಟಾಗುವ ಬಾಧೆಯನ್ನು ದುಃಖವೆಂದು ಹೇಳುತ್ತಾರೆ. ಅಂದರೆ ಆರ್ಥಿಕ ಸಮಸ್ಯೆಗಳಾಗಬಹುದು, ಆರೋಗ್ಯ ಸಮಸ್ಯೆಗಳು ಆಗಬಹುದು, ವೃದ್ಧಾಪ್ಯದ ಸಮಸ್ಯೆಗಳಾಗಬಹುದು, ಸಂಸಾರದ ಸಮಸ್ಯೆಗಳಾಗಬಹುದು, ಕುಟುಂಬದ ಸಮಸ್ಯೆಗಳಾಗಬಹುದು, ಅಕ್ಕಪಕ್ಕದವರ ಸಮಸ್ಯೆಗಳಾಗಬಹುದು ಹಾಗೆ ಯಾವ ಸಮಸ್ಯೆಯಿಂದ ನಮಗೆ ದುಃಖ ಉಂಟಾದರೂ ಅದಕ್ಕೆ ಕಾರಣ ನಾವೇ. ಅಂದರೆ ನಾವು ಮಾಡಿಕೊಂಡ ಅಪರಾಧವೇ 'ಸ್ವಯಂ ಕೃತಾಪರಾಧವೇ'.

ಯಾವ ಅಪರಾಧವನ್ನು ಮಾಡಿದ್ದೇವೋ ಮೊದಲು ಅದನ್ನು ಹೇಳಿಕೊಳ್ಳೋಣ. ಅದಕ್ಕೂ ಮೊದಲು ಕೆಲವು ಉದಾಹರಣೆಗಳನ್ನು ನಾನು ಹೇಳುತ್ತೇನೆ. ಪ್ರತಿ ವಿಷಯವನ್ನು ಎಚ್ಚರದಿಂದ ಮನನ ಮಾಡಿಕೊಂಡು ಗ್ರಹಿಸಿದರೆ ಎಷ್ಟೋ ಸರಿಪಡಿಸಿಕೊಳ್ಳುತ್ತೇವೆ. ನಿಮಗೆ ಬರುವ ಎಷ್ಟೋ ಸಮಸ್ಯೆಗಳನ್ನು ನೀವು ಅಧಿಗಮಿಸಬಲ್ಲಿರಿ.

ಒಂದು ನಾಯಿ ಕನ್ನಡಿ ಇರುವ ಕೋಣೆಯೊಳಗೆ ಹೋಯಿತು. ಆ ಕೋಣೆಯಲ್ಲಿ ಯಾವ ಕಡೆ ತಿರುಗಿದರೂ ಇನ್ನೊಂದು ನಾಯಿ ಕಾಣಿಸುತ್ತದೆ. ನಾಯಿಯ ಸ್ವಭಾವವೇನೆಂದರೆ ಅದಕ್ಕೆ ಏನಾದರೂ ಇನ್ನೊಂದು ನಾಯಿ ಕಾಣಿಸಿದರೆ ಅದು ಸಹಿಸುವುದಿಲ್ಲ. ಆದ್ದರಿಂದ ಇದು ಬೊಗಳಿದರೆ ಅದು ಕೂಡ ಬೊಗಳುತ್ತದೆ. ಅದು ತಕ್ಷಣವೇ ಹೋಗಿ ಅದರ ಮೇಲೆ ಬಿದ್ದಿತ್ತು. ಎಗರಿಬಿದ್ದು

ಕನ್ನಡಿಗೆ ತಗುಲಿ ಬಿದ್ದಿತ್ತು. ಮತ್ತೆ ಎದ್ದರೆ ಇನ್ನೊಂದು ನಾಯಿಯು ಕಾಣಿಸಿತು. ಓಡೋಡಿ ಹೋಗಿ ಮತ್ತೆ ಅದನ್ನು ಗುದ್ದಿತು. ಹೀಗೆ ಗುದ್ದಿ ಗುದ್ದಿ ಕೊನೆಗೆ ರಕ್ತಕಾರುತ್ತಾ ಮರಣಿಸಿತು.

ಅದನ್ನು ಸಾಯಿಸಿತೋ ಇಲ್ಲವೋ ತಿಳಿಯದಾಗಲಿ ಇದು ಸತ್ತಿತು . ಈಗ ಹೇಳಿ ಆ ನಾಯಿಯು ಏಕೆ ಸತ್ತಿತು? ಅದಕ್ಕೆ ಯಾರಾದರೂ ಕಾರಣವೇ? ಅಂದರೆ ಅದಕ್ಕೆ ಕಾರಣ ಅದೇ... ಅದು ಸ್ವಯಂ ಆಗಿ ಮಾಡಿಕೊಂಡ ಅಪರಾಧವೇ. ಅದರ ಪ್ರಾಣವು ಹೋಗುವುದಕ್ಕೆ ಯಾರೂ ಕಾರಣವಲ್ಲ. ಅದು ನಾನೇ ಎಂದು ಅಂದುಕೊಳ್ಳಬಹುದಲ್ಲ ಆ ಜ್ಞಾನವು ಅದಕ್ಕಿಲ್ಲ ಅದು ಬೇರೆ ನಾಯಿ ಎಂದುಕೊಂಡಿತು ಆದ್ದರಿಂದ ಆ ರೀತಿಯಾಗಿ ಅದು ನಾಶವಾಯಿತು.

ಹಾಗೆಯೇ ದೊಡ್ಡವರು ಇನ್ನೊಂದು ಉದಾಹರಣೆ ಹೇಳುತ್ತಾರೆ. ಕಬೀರರೂ ಕೂಡ ಹೇಳಿದ್ದಾರೆ.

ಒಂದು ಸಿಂಹ ಮೊಲದ ಕಥೆ ತಿಳಿದಿದೆಯಲ್ಲವೇ. ಮೊಲವು ಸಿಂಹವನ್ನು ಹಾಳು ಬಿದ್ದ ಬಾವಿ ಬಳಿಗೆ ಕರೆದೊಯ್ಯುತ್ತದೆ. 'ಅಲ್ಲಿ ಇನ್ನೊಂದು ಸಿಂಹವಿದೆ, ನಿನ್ನನ್ನು ಸಾಯಿಸುವುದಕ್ಕೆ ಈ ಅಡವಿಯಲ್ಲಿ ತಿರುಗುತ್ತಿದೆ. ನಿನ್ನ ಕೆಲಸವು ಮುಗೀತು'... ಎಂದೊಡನೆ ಅದಕ್ಕೆ ಪೌರುಷವು ಬಂದಿತು. ಬಹಳ ಕೋಪವೂ ಬಂದಿತ್ತು. ತಕ್ಷಣವೇ ಘರ್ಜಿಸಿತು. ಘರ್ಜಿಸಿದರೆ ಬಾವಿಯಲ್ಲಿರುವ ಸಿಂಹವು ಸುಮ್ಮನಿರುತ್ತದೆಯೇ ಅದೂ ಘರ್ಜಿಸಿತು. ನಿನ್ನ ಸಂಗತಿ ಹೇಳುತ್ತೇನೆ ಎಂದು ಬಾವಿಯೊಳಗೆ ಧುಮುಕಿ ಸತ್ತಿತು. ಈಗ ಇದರ ಸಾವಿಗೆ ಕಾರಣ ಯಾರು? ಅದೇ ತಾನೇ. ಹಾಗೆಯೇ ಒಂದು ಆನೆಯು ಗುಡ್ಡದಲ್ಲಿ ತಿರುಗುತ್ತಾ ಇರುವಾಗ ಒಂದು ಸ್ಪಟಿಕ ಶಿಲೆಯು ಕಾಣಿಸಿತು. ಆ ಸ್ಪಟಿಕ ಶಿಲೆಯಲ್ಲಿ ಅದರ ಪ್ರತಿರೂಪವೇ ಕಾಣಿಸಿತು. ಅದು ಬೇರೆ ಆನೆ ಎಂದುಕೊಂಡಿತು. ಕೋಪ ಆವೇಶಕ್ಕೊಳಗಾಗಿ ದಂತಗಳಿಂದ ಆ ಶಿಲೆಯ ಮೇಲೆ ತಿವಿದು ಬೀಳಿಸಿತು. ಇದರ ದಂತಗಳೇ ಅಲುಗಾಡಿದವು ಹಾಗೆ ರಕ್ತವು ಸೋರಿ ಏನೂ ಮಾಡಲಾಗದೆ ಹಿಂದೆ ಹೋಯಿತು. ರಕ್ತ ಸೋರುವುದಕ್ಕೆ ಕಾರಣ ಯಾರು? ಅದೇ ಅಲ್ಲವೇ... ಅದನ್ನು ಯಾರು ತಿವಿದರು?

ಹಾಗೆಯೇ ಇನ್ನೊಂದು ಉದಾಹರಣೆ: ಸ್ವಯಂಕೃತ ಅಪರಾಧ ಮಾನವರು ತಮ್ಮ ಕಷ್ಟಗಳು ಎಲ್ಲಾ ಕೂಡ ತಮ್ಮ ಸ್ವಯಂ ಕೃತಾಪರಾಧಗಳಿಂದಲೇ ಬರುತ್ತವೆ ಎಂಬುದನ್ನು ಮರೆತುಬಿಡುತ್ತಾರೆ. ನೀವು ಅಜ್ಞಾನದಲ್ಲಿದ್ದರೆ ಆ ನಾಯಿ, ಆ ಸಿಂಹ, ಆನೆಯಂತೆಯೇ ತಯಾರಾಗುತ್ತೀರಿ. ಜ್ಞಾನವನ್ನು ಸಂಪಾದಿಸಿದರೆ,

ಸತ್ಯದ ಅರಿವಾದರೆ ನಿಮಗೆ ಅರ್ಥವಾಗುತ್ತದೆ. ಆದರೆ ನೀವು ಜ್ಞಾನವನ್ನು ಎಲ್ಲಿ ಸಂಪಾದಿಸಿಕೊಳ್ಳುತ್ತಿದ್ದೀರಿ? ಭೀಮವರಂಗೆ ಬನ್ನಿ ಜ್ಞಾನವನ್ನು ಸಂಪಾದಿಸಿಕೊಳ್ಳಿ ಅಂದರೆ ಯಾರಾದರೂ ಕೇಳುತ್ತಿದ್ದಾರೆಯೇ? ಬೆಳಗ್ಗೆ ಝೂಮ್‌ನಲ್ಲಿ ಭಾಗವಹಿಸಿರಿ ಅಂದರೆ ಯಾರು ಬರುತ್ತಿದ್ದಾರೆ? ಏನೋ ಭೀಮವರಂ, ಝೂಮ್‌ನಲ್ಲಿ ಬಂದವರು ಎಲ್ಲರೂ ಜ್ಞಾನವಂತರಾದರು. ಎಷ್ಟೋ ವಿಷಯಗಳನ್ನು ತಿಳಿದುಕೊಂಡರು. ಆದರೆ ಬಾರದೇ ಇರುವವರಿಗೆ ಏನು ತಿಳಿಯುತ್ತದೆ? ಜ್ಞಾನವೊಂದರ ಮೌಲ್ಯ. ಅಳು ಎಂದರೆ ಅಳುತ್ತಾರೆ, ದುಃಖಪಡು ಅಂದರೆ ದುಃಖಪಡುತ್ತಾರೆ. ಎಲ್ಲವುದಕ್ಕೂ ಕಾರಣ ಈ ಅಜ್ಞಾನದಿಂದ ನಾನು ಮಾಡಿಕೊಂಡದ್ದೆ ಎನ್ನುವುದು ಅವರಿಗೆ ಅರ್ಥವಾಗದು.

ಇನ್ನೊಂದು ಕಥೆ ಹೇಳುತ್ತೇನೆ. ಒಂದು ಕೋತಿ ಒಂದು ಕಿರಾಣಿ ಅಂಗಡಿಗೆ ನುಗ್ಗಿತು. ಅಂಗಡಿಯವನು ಊಟಕ್ಕೆ ಹೋಗಿದ್ದಾನೆ. ಕೋತಿಯು ಅಂಗಡಿಯೊಳಗೆ ಹೋದಾಗ ಅಲ್ಲಿ ಎಲ್ಲಾ ಕಿರಾಣಿ ಸಾಮಾನುಗಳೇ... ಎಲ್ಲವೂ ತಿರುವಿಹಾಕಿತು. ಆದರೆ ಏನೂ ಇಷ್ಟವಾಗಲಿಲ್ಲ. ಎಷ್ಟೋ ನೋಡಿದರೂ ಅದಕ್ಕೆ ಏನೂ ಹಿಡಿಸಲಿಲ್ಲ. ಆಗ ಒಂದು ಮೂಲೆಯಲ್ಲಿ ಒಂದು ಸಣ್ಣ ಬಾಯಿ ಇರುವಂತಹ ಒಂದು ಹೂಜಿ ಕಾಣಿಸಿತು. ಅದರ ಕೈಯನ್ನು ಅದರಲ್ಲಿಟ್ಟಿತು ಕೈ ಒಳಗಿಟ್ಟರೆ ಅದಕ್ಕೆ ಗೋಡಂಬಿಯು ತಗುಲಿತು. ಅದಕ್ಕೆ ಇಷ್ಟವಾದ ಗೋಡಂಬಿ ತಗುಲಿತು. ತಕ್ಷಣವೇ ದೊಡ್ಡ ಹಿಡಿತವನ್ನು ಹಿಡಿಯಿತು, ಹಿಡಿಯುವುದೇನೋ ಹಿಡಿಯಿತು ಪಾಪ! ಆದರೆ ಹೊರಗೆ ಎಳೆದರೆ ಕೈ ಬರುತ್ತಿಲ್ಲ. ಕೈ ಹೊರಗೆ ಬರುವುದಕ್ಕೆ ಏನು ಮಾಡಬೇಕು ಗೋಡಂಬಿಯನ್ನು ಬಿಡಬೇಕು. ಮತ್ತೆ ಅದಕ್ಕೆ ಇಷ್ಟವಾದ ಗೋಡಂಬಿ ದೊರೆತಮೇಲೆ ಬಿಡುವುದಿಲ್ಲ, ಬಿಡುತ್ತಿಲ್ಲ. ಆದರೆ ಕೈ ಬರುತ್ತಿಲ್ಲ ಈ ಕಡೆ ಓಡುತ್ತಿದೆ ಆ ಕಡೆ ಓಡುತ್ತಿದೆ... ಹೀಗೆ ತಿರುಗುತ್ತಿದೆ ಹಾಗೆ ತಿರುಗುತ್ತಿದೆ ಎಷ್ಟು ತಿರುಗಿದರೂ ಸರಿ ಕೈ ಹೊರಗೆ ಬರುತ್ತಿಲ್ಲ. ಆದರೂ ಸರಿ ಗೋಡಂಬಿಯನ್ನು ಬಿಡುತ್ತಿಲ್ಲ. ಬಿಡುವುದಕ್ಕೆ ಅದಕ್ಕೆ ಇಷ್ಟವಿಲ್ಲ.

ಇಷ್ಟರೊಳಗೆ ಊಟಕ್ಕೆ ಹೋದವನು ಬಂದನು. ತೀರಾ ಬಂದು ನೋಡಿದರೆ ಶಾಪ್‌ನಲ್ಲಿರುವ ಕೋತಿಯನ್ನು ಹೊಡೆದನು. ಹೊಡೆದರೂ ಸರಿ ಅದು ಬಿಡುತ್ತಿಲ್ಲ, ಬೆದರಿಸಿದನು, ಕೇಕೆ ಹಾಕಿದನು, ಆದರೂ ಸರಿ ಗೋಡಂಬಿಯನ್ನು ಅದು ಬಿಡುತ್ತಿಲ್ಲ. ಹೀಗಿದೆ ಇದರ ಕೆಲಸವೆಂದು ಸಣ್ಣದೊಂದು ಕಟ್ಟಿಗೆಯ ಕೋಲನ್ನು ತಂದು ಅದನ್ನು ಹಿಡಿದು ಹೊಡೆಯುತ್ತಿದ್ದರೆ ಏಟನ್ನು ತಿನ್ನುತ್ತಿದೆಯಾಗಲಿ ಗೋಡಂಬಿಯನ್ನು ಬಿಡುತ್ತಿಲ್ಲ. ಬಹಳ ವಿಚಿತ್ರ! ಬಿಡಬಹುದಲ್ಲ!

ಅಂದರೆ ಏಟನ್ನಾದರೂ ತಿನ್ನುತ್ತದೆಯಾಗಲಿ ಗೋಡಂಬಿಯನ್ನು ಬಿಡುವುದಕ್ಕೆ ಇಷ್ಟಪಡುತ್ತಿಲ್ಲ. ಹಾಗೆ ಹೊಡೆದು ಹೊಡೆದು ರಕ್ತ ಸುರಿಯುತ್ತಿದೆಯಾಗಲಿ ಸರಿ ಗೋಡಂಬಿಯನ್ನು ಬಿಡುತ್ತಿಲ್ಲ. ಇನ್ನು ಲಾಭವಿಲ್ಲವೆಂದು ಸುತ್ತಲಿನ ಜನರನ್ನು ಕರೆದನು. ಒಟ್ಟಾರೆ ಆ ಕೋತಿಯನ್ನು ಓಡಿಸಿದರು. ಸ್ವಲ್ಪ ಆಲೋಚಿಸಿರಿ ಇಷ್ಟು ಏಟುಗಳನ್ನು ತಿನ್ನುವುದಕ್ಕೆ ಕಾರಣ ಯಾರುರೀ? ಆ ಅಂಗಡಿಯವನೇ? ಅಂದರೆ ಆ ಕೋತಿಯೇ... ಹೀಗೆಯೇ ನೀವು ಕೂಡ ಸ್ವಯಂಕೃತ ಅಪರಾಧದಿಂದ ಕಷ್ಟಗಳನ್ನು ನೋವುಗಳನ್ನು ಇವೆಲ್ಲವುಗಳನ್ನು ತಂದುಕೊಳ್ಳುತ್ತೀರಿ. ಈ ನಡುವೆ ನನಗೆ ನಡೆದ ಆ್ಯಸಿಡ್ ಕುಡಿದ ಕಷ್ಟಕ್ಕೆ ಕಾರಣ ಯಾರು ಹೇಳಿ? ನಾನೇ... ನಾನೇ ಆ್ಯಸಿಡ್ ಸುರಿದುಕೊಂಡೆನು.

**ಇನ್ನೊಂದು ಉದಾಹರಣೆ:** ಒಂದು ಗಿಣಿಯು ಒಂದು ಕೊಂಬೆಯ ಮೇಲೆ ಒರಗಿದೆ. ಒರಗಿದಾಗ ಅದನ್ನು ಹಿಡಿದುಕೊಂಡಿದೆ. ಹಾಗೆ ವಾಲಿದಾಗ ಆ ಕೊಂಬೆಯೇ ಇದನ್ನು ಹಿಡಿದುಕೊಂಡಿದೆಯೇನೋ ಎಂದುಕೊಂಡಿತಂತೆ. ಆ ಗಿಣಿಯು ಅದನ್ನು ಹಿಡಿದುಕೊಂಡು ಹಾರಲಾಗುತ್ತಿಲ್ಲ, ನಿಜವಾಗಿಯೂ ಯಾರು ಹಿಡಿದುಕೊಂಡಿದ್ದಾರೆ ಎನ್ನುವಿರಿ? ಗಿಣಿಯೇ ಹಿಡಿದುಕೊಂಡಿದೆ. ಆದರೆ ಅದು ಏನೆಂದುಕೊಳ್ಳುತ್ತದೆ ತನ್ನ ತಪ್ಪನ್ನು ಕೊಂಬೆಯ ಮೇಲೆ ತಳ್ಳಿತು. ಹಾಗೆಯೇ ಮಾನವರು ಕೂಡ ತಮ್ಮಲ್ಲಿರುವ ಲೋಪವನ್ನು ಇತರರ ಮೇಲೆ ಹಾಕುತ್ತಾ ಇಷ್ಟು ದುಃಖವನ್ನು ಅನುಭವಿಸುತ್ತಿದ್ದಾರೆ.

ಕಬೀರರು ಹೇಳಿದ್ದೇನೆಂದರೆ ಮಾನವನು ತನ್ನ ಆತ್ಮ ತತ್ವವನ್ನು ಮರೆತುಹೋಗಿ ಸಂಸಾರವೊಂದರ ಮಾಯಾ ವ್ಯಾಮೋಹದಲ್ಲಿ ಬಿದ್ದು ಇಷ್ಟು ದುಃಖದಲ್ಲಿ ಜೀವಿಸುತ್ತಿದ್ದಾನೆ. ಆದ ಕಾರಣ ಮಾನವನ ದುಃಖಕ್ಕೆ ಅವನ ಸ್ವಯಂಕೃತ ಅಪರಾಧವೇ ಕಾರಣ. ಈ ಸಂಸಾರವೊಂದರ ಮಾಯಾ ವ್ಯಾಮೋಹದಲ್ಲಿ ಇರುವಷ್ಟು ಕಾಲವು ಅವನಿಗೆ ದುಃಖವೇ. ಕೋತಿಯು ಗೋಡಂಬಿಯನ್ನು ಬಿಡದಷ್ಟು ಕಾಲವು ಅದಕ್ಕೆ ಏಟುಗಳೇ... ಮಾನವನ ಪರಿಸ್ಥಿತಿ ಕೂಡ ಅಷ್ಟೇ ಇದೇ ಕಬೀರರು ಹೇಳಿದ ಸಂದೇಶವಾಗಿದೆ.

**ತುಳಸಿ ದಳದಲ್ಲಿ ಮೊದಲನೇ ಎಲೆಯು ಜ್ಞಾನ ಚಕ್ಷುವನ್ನು ಉತ್ತೇಜನಗೊಳಿಸಿ ಪರಿಪೂರ್ಣ ಜ್ಞಾನವನ್ನು ಕೊಡುತ್ತದೆ... ಎರಡನೇ ಎಲೆಯು ದಿವ್ಯಚಕ್ಷುವನ್ನು ಉತ್ತೇಜನಗೊಳಿಸಿ ಬುದ್ಧತ್ವವೆಂಬ ಪರಿಪಕ್ವವಾದ ಯೋಗಸ್ಥಿತಿಯನ್ನು ನಮಗೆ ಒದಗಿಸುತ್ತದೆ.**

**– ಬ್ರಹ್ಮರ್ಷಿ ತಟವರ್ತಿ ವೀರರಾಘವ್ ರಾವ್**

## ಈ ಶರೀರವು ಮಣ್ಣಿನ ಗಡಿಗೆಯಂಥದ್ದು

### ಕಬೀರರ ಮತ್ತೊಂದು ಸಂದೇಶ

**ಈ ಶರೀರವು ಮಣ್ಣಿನ ಗಡಿಗೆಯಂಥದ್ದು ಅದನ್ನು ಹಿಂದಿಟ್ಟುಕೊಂಡು ತಿರುಗುತ್ತಿರುವೆ. ಕಾಲವೊಂದರ ಏಟು ಬಿದ್ದರೆ ಒಡೆದು ಹೋಗುತ್ತದೆ. ಕೊನೆಗೆ ಏನೂ ಉಳಿಯುವುದಿಲ್ಲ.**

ಇಲ್ಲಿ ನೀವು ಒಂದನ್ನು ಅರ್ಥಮಾಡಿಕೊಳ್ಳಬೇಕು. ಹಿಂದಿಟ್ಟುಕೊಂಡು ತಿರುಗುತ್ತಿರುವೆ ಅಂದರೆ ಯಾರು ನೀನು? ಯಾರನ್ನು ಹಿಂದಿಟ್ಟುಕೊಳ್ಳುತ್ತಿರುವೆ? ಅಂದರೆ ನೀನು ಆತ್ಮ. ಹಿಂದಿಟ್ಟುಕೊಂಡು ತಿರುಗುವುದು ದೇಹವು. ಇಲ್ಲಿಯೇ ಆತನು ಹೇಳಿದ ಮಾತುಗಳಲ್ಲಿಯೇ ಅರ್ಥವಾಗುತ್ತದೆ ಆತನು ಆತ್ಮ ನೀನು ಈ ಶರೀರ ಅಲ್ಲವೆಂದು ಹೇಳಿದಂತಲ್ಲವೇ? ನೀನಲ್ಲದ ಈ ಶರೀರವನ್ನು ಈ ಮಣ್ಣಿನ ಗಡಿಗೆಯನ್ನು ಹಿಂದಿಟ್ಟುಕೊಂಡು ತಿರುಗುತ್ತಿರುವೆ ಎಂದಿದ್ದಾರೆ. ಆತ್ಮ ಏನು ಮಾಡಿತು? ಶರೀರವನ್ನು ಹಿಂದಿಟ್ಟು ತಿರುಗುತ್ತಿದೆ. ಕಾಲವೊಂದರ ಏಟು ಬಿದ್ದರೆ ಒಡೆದು ಹೋಗುತ್ತದೆ ಇನ್ನೇನು ಇರದು ಎಂದು ಹೇಳುತ್ತಿದ್ದಾರೆ.

ನಾವು ಹೇಳುತ್ತಿದ್ದೇವಲ್ಲ ಯಾರಾದರೆ ಮರಣಿಸಿದರೆ ಸಮಯ ಆಗಿ ಹೋಯಿತೆಂದು. ಹಾಗೆ ಕಬೀರರು ಒಂದು ಮಾತು ಹೇಳಿದ್ದಾರೆಂದರೆ ಅದರಲ್ಲಿ ಬಹಳ ಅರ್ಥವಿದೆ. ಶರೀರವನ್ನು ಈ ಮಣ್ಣಿನ ಗಡಿಗೆಗೆ ಹೋಲಿಸಿದರು. ಕಾಲವೊಂದರ ಏಟು ತಗುಲಿದರೆ ಎಂದಿದ್ದಾರೆ. ನೀವು ನೋಡಿ ನಿಮ್ಮ ಸಮಯ ಮುಗಿದರೆ ಏನೋ ತಕ್ಷಣ ಅಪಘಾತವಾಗುತ್ತದೆ ಮರಣಿಸಿದನು ಎನ್ನುತ್ತಾರೆ ಅಲ್ಲಿಯವರೆಗೆ ಚೆನ್ನಾಗಿಯೇ ತಿರುಗುತ್ತಿದ್ದಾನೆ ಮುಗಿಯಿತು ಆ ಕಾಲದ ಏಟು ತಗುಲಿತು. ಹಾಗೆಯೇ ಆಕಸ್ಮಿಕವಾಗಿ ಎದೆ ನೋವು ಬರುತ್ತದೆ, ಹೃದಯವು ನಿಂತುಬಿಡುತ್ತದೆ ಅಂದರೆ ಸಮಯವು ಮುಗಿದು ಹೋಯಿತು.

ಸಹಜವಾಗಿ ನೀವು ಶಾಶ್ವತವೆಂದುಕೊಳ್ಳುತ್ತೀರಿ. ಆದರೆ ಯಾರೂ ಶಾಶ್ವತವಲ್ಲ. ಯಾರ ಶರೀರವು ಶಾಶ್ವತವಲ್ಲ, ಯಾವ ಸಮಯದಲ್ಲಿ ಏನು ನಡೆಯುತ್ತದೆ ಯಾರಿಗೂ ತಿಳಿಯದು. ಮಹನೀಯರಾದರೂ ಸರಿ ಶರೀರವನ್ನು ಬಿಟ್ಟುಬಿಡಬೇಕಾದದ್ದೇ... ಕಾಲವು ಯಾರನ್ನು ಬಿಟ್ಟು ಬಿಡುವುದಿಲ್ಲ. ಹಣವಿದೆ, ಮನೆ ಇದೆ, ಸಂಪತ್ತುಗಳಿವೆ, ಕಾರುಗಳಿವೆ, ಬಂಗಲೆಗಳಿವೆ, ಭೂಮಿಗಳಿವೆ, ಹೆಂಡತಿ ಇದ್ದಾರೆ, ಗಂಡ, ಮಕ್ಕಳಿದ್ದಾರೆ, ಬಂಧುಗಳಿದ್ದಾರೆ... ಈ ಮಣ್ಣಿನ ಗಡಿಗೆಯು ಒಡೆದರೆ ಇನ್ನು ಏನಾದರೂ ಇರುತ್ತದೆಯೇ? ಯಾವುದೂ ಇರುವುದಿಲ್ಲ. ಆತನು ಅದನ್ನೇ ಹೇಳುತ್ತಿದ್ದಾರೆ ಕಾಲವೊಂದರ ಏಟು ಬಿದ್ದರೆ ಕೊನೆಗೆ ಏನೂ ಇರದು

ಎನ್ನುತ್ತಿದ್ದಾರೆ. ಆದರೆ ಪ್ರತಿಯೊಬ್ಬರೂ ಇಲ್ಲಿ ಎಲ್ಲಾ ಶಾಶ್ವತ ಎಂದುಕೊಳ್ಳುತ್ತಿದ್ದೀರಿ. ಆದ್ದರಿಂದ ಸಣ್ಣ ಸಂದೇಶದಿಂದ ನಾನು ದೇಹವಲ್ಲ ನಾನು ಆತ್ಮನು ಎಂಬ ಒಂದು ಅಂಶವನ್ನು ತಿಳಿದುಕೊಳ್ಳಬೇಕು.

ಇಲ್ಲಿಯವರೆಗೆ ನೀವು ಈ ದೇಹವು ನಾನು ಎನ್ನುವಂತೆ ಜೀವಿಸುತ್ತಿದ್ದೀರಿಯಾಗಲಿ ಆತನು ಏನನ್ನು ಹೇಳುತ್ತಿದ್ದಾನೆ. ಈ ದೇಹ ನೀನಲ್ಲ ಮತ್ತೆ ನೀವು ಯಾರು? ಆತ್ಮ. ಪತ್ರೀಜಿಯವರ ಪರಿಚಯ ಆದ ಮೇಲೆ ಮೊಟ್ಟಮೊದಲು ನಾನು ಆತನ ಬಳಿಯಿಂದ ತಿಳಿದುಕೊಂಡ ಸತ್ಯ ಇದೇ. ಇದೇ ನನ್ನ ಜೀವನವನ್ನು ಬದಲಾಯಿಸಿತು. ಅದಕ್ಕೂ ಮೊದಲು ನಾನು ಜೀವಿಸುವ ವಿಧಾನವು ಒಂದು ರೀತಿಯಲ್ಲಿ ಇತ್ತು, ಆದರೆ ಬದಲಾಗಿ ಹೋಯಿತು. ಅದಕ್ಕೂ ಮೊದಲು ಈ ದೇಹವು ನಾನು ಎಂದುಕೊಂಡೆನು, ಇದಕ್ಕೆ ಒಂದು ಹೆಸರಿಟ್ಟುಕೊಂಡಿದ್ದೇನೆ, ಇದನ್ನು ನೋಡಿ ಮೆರೆಯುತ್ತಿದ್ದೇನೆ ಇದನ್ನು ಕನ್ನಡಿಯ ಮುಂದೆ ನಿಂತು ಬಹಳ ಶೋ ಮಾಡುತ್ತಿದ್ದೆನು. ಪತ್ರೀಜಿಯವರ ಪರಿಚಯವಾದ ಮೇಲೆ ತಿಳಿಯಿತು ನಾನು ದೇಹ ಅಲ್ಲವೆಂದು. ಮತ್ತೆ ನಾನು ಯಾರು ಎಂದು ಕೇಳಿದನು. ನೀವು ಆತ್ಮನು ಎಂದರು. ಆತನ ಪುಸ್ತಕಗಳನ್ನು ಓದಿ ಆತನ ಸಂದೇಶಗಳನ್ನು ಕೇಳಿಸಿಕೊಂಡು ಉಪನಿಷತ್ತುಗಳನ್ನು ಓದಿ, ಭಗವದ್ಗೀತೆ ಅವುಗಳನ್ನೆಲ್ಲ ಓದಿದರೆ ಆಗ ಅರ್ಥವಾಯಿತು 'ದೇಹ ನಾನಲ್ಲ, ನಾನು ಆತ್ಮನೇ' ಎಂದು.

ಅಲ್ಲಿಂದ ನನ್ನ ಜೀವನವೆಲ್ಲ ಬದಲಾಗಿಬಿಟ್ಟಿತು. ನಾನು ಹಣವನ್ನು ಸಂಪಾದಿಸುವುದಕ್ಕಾಗಿಯೇ ಜೀವಿಸುತ್ತಿದ್ದೆನು, ಅದೇ ಉತ್ತಮವಾದದ್ದು ಎಂದುಕೊಳ್ಳುತ್ತಿದ್ದೆನು. ಆದರೆ 'ನಾನು ದೇಹವಲ್ಲ, ನಾನು ಆತ್ಮನು' ಎಂದು ತಿಳಿದುಕೊಂಡ ಮೇಲೆ ನನಗೆ ಈ ಧನವೂ ಲಾಭಿಸುತ್ತದೆಯೇ ಎಂಬ ಪ್ರಶ್ನೆಯನ್ನು ಹಾಕಿಕೊಂಡರೆ 'ನನಗೆ ಲಾಭಿಸುವುದು ಜ್ಞಾನವೇ ಹೊರತು ಧನವಲ್ಲ' ಎಂಬುದು ಅರ್ಥವಾಯಿತು. ದೇಹಕ್ಕಾದರೆ ಧನವು, ಆತ್ಮಕ್ಕಾದರೆ ಜ್ಞಾನ ಎನ್ನುವುದನ್ನು ತಿಳಿದುಕೊಂಡೆನು ಆಗ ಜೀವನವು ಬದಲಾಗಿ ಹೋಯಿತು. ತಕ್ಷಣವೇ ಧನ ಸಂಪಾದನೆಯನ್ನು ಬಿಟ್ಟೆನು. ಜ್ಞಾನ ಸಂಪಾದನೆಯನ್ನು ಪ್ರಾರಂಭಿಸಿದೆನು. ಅದಕ್ಕೂ ಮೊದಲು ಹಣ ಸಂಪಾದನೆಯೇ ನನ್ನ ಕೆಲಸ.

ಈಗ ಅವುಗಳನ್ನೆಲ್ಲ ಬಿಟ್ಟಿದ್ದೇನೆ ಆ ಸ್ಥಳದಲ್ಲಿ ಇದುವರೆಗೂ ಧನವನ್ನು ಸಂಪಾದನೆ ಮಾಡಿದೆನು. ಆದರೆ, ಅದೇ ಸ್ಥಳದಲ್ಲಿ ಈಗ ಜ್ಞಾನ ಸಂಪಾದನೆಯನ್ನು ಮಾಡುತ್ತಿದ್ದೇನೆ. ನಾನು ಹಣವನ್ನು ಏನು ಮಾಡಲಿ? ಈ ಗಡಿಗೆ ಒಡೆದರೆ ಅದೆಲ್ಲ ಹೋದಂತೆಯೇ! ಯಾವ ಗಡಿಗೆ? ಮಣ್ಣಿನ ಗಡಿಗೆ, ಅಂದರೆ ಶರೀರ.

ಆ ಮಿಲ್ಲು ಬರುವುದಿಲ್ಲ, ಅದರಿಂದ ಸಂಪಾದಿಸಿದ ಹಣವೂ ಬಾರದು, ನನ್ನವರೂ ಬರುವುದಿಲ್ಲ ಮತ್ತೆ ಏನು ಬರುತ್ತದೆ? ಒಂದುವೇಳೆ ಜ್ಞಾನ ಸಂಪಾದಿಸಿದರೆ ಬರುತ್ತದೆ. ಅದಕ್ಕಾಗಿ ಜ್ಞಾನ ಸಂಪಾದಿಸಿದರೆ ಬರುತ್ತದೆಯಾದ್ದರಿಂದ, ಜ್ಞಾನವನ್ನು ಸಂಪಾದಿಸಲು ಮೊದಲಿಟ್ಟೆನು.

ಆಗ ನಾನಂದುಕೊಂಡೆನು, ಅಯ್ಯೋ 50 ವರ್ಷಗಳು ವ್ಯರ್ಥವಾದವೇ? 50 ವರ್ಷಗಳು ಕಷ್ಟಪಟ್ಟು ಸಂಪಾದಿಸಿದ್ದು ನನಗೇನು ಉಪಯೋಗವಿಲ್ಲವೇ? ಅಂದರೆ ಏನೂ ಉಪಯೋಗವಿಲ್ಲವೆಂದು ತಿಳಿಯಿತು. ಅಂದರೆ ಇದೇ ಇನ್ನೊಂದು 10 ವರ್ಷಗಳ ಹಿಂದೆಯೇ ತಿಳಿದಿದ್ದರೆ, ಈ ಹೊತ್ತಿಗೆ ಎಷ್ಟು ಜ್ಞಾನ ಸಂಪಾದಿಸುತ್ತಿದ್ದೆ ಎಂದು ಅಂದು ಕೊಂಡೆನು. ಪತ್ರೀಜಿಯವರನ್ನು ಕೇಳಿದೆನು ಏನ್ರೀ... ನಿಮ್ಮ ಪರಿಚಯ 10 ವರ್ಷಗಳ ಹಿಂದೆಯೇ ಆಗಿದ್ದರೆ ಎಷ್ಟು ಚೆನ್ನಾಗಿತ್ತೆಂದು. ಆಗ ಅವರು ಏನು ಹೇಳಿದರೆ ಎಂದರೆ 'ಆಗಿದ್ದು ಏನೋ ಆಗಿ ಹೋಯಿತು ಅಷ್ಟೇ, ಇನ್ನು ಇಲ್ಲಿಂದಲಾದರೂ ನೀನು ಜಾಗೃತನಾಗು' ಎಂದರು. ಅಂದರೆ ಇನ್ನು ವಿಶ್ರಾಂತಿ ತೆಗೆದುಕೊಳ್ಳುವುದನ್ನು ಬಿಟ್ಟು ಜ್ಞಾನ ಸಂಪಾದನೆಗೆ ಆಗಿನಿಂದ ಇಲ್ಲಿಯವರೆಗೆ ತಿರುಗುತ್ತಲೇ ಇದ್ದೇನೆ ತಡೆಯಿಲ್ಲದೆ, ನಿಲ್ಲದೆ 20 ವರ್ಷಗಳಿಂದ ಭೀಮವರಂನಲ್ಲಿ ತರಗತಿಗಳನ್ನು ಹೇಳುವುದೇ ಅಲ್ಲ ಊರೂರು ತಿರುಗಿ ಈ ಜ್ಞಾನವನ್ನು ಬೋಧಿಸುತ್ತಿದ್ದೇನೆ. ಏಕೆಂದರೆ ನನಗೆ ಪತ್ರೀಜಿಯವರು ಇನ್ನೊಂದು ವಿಷಯವನ್ನು ಹೇಳಿದರು ಹಂಚಿದ್ದು ಹೆಚ್ಚಾಗುತ್ತದೆ ಎಂದು.

ಈಗ ನನಗೆ ಬೆಳೆಯಬೇಕಾಗಿರುವುದು ಜ್ಞಾನ. ಜ್ಞಾನವನ್ನು ಹಂಚಬೇಕೆಂದರೆ ಭೀಮವರಂನಲ್ಲಿ ಕುಳಿತರೆ ಸರಿ ಹೋಗುತ್ತದಾ? ಏನೋ ಇಲ್ಲಿಗೆ ಕೆಲವರು ಬರುತ್ತಿದ್ದಾ-ರೆ ನನಗೆ ಇದು ಸರಿ ಹೋಗದು ಅದಕ್ಕೆಂದೇ ಊರೂರು ತಿರುಗಿ ಹೇಳುತ್ತಿದ್ದೇನೆ. ದಿನವೂ ಬನ್ನಿರಿ ಎಂದರೆ ನೀವು ಬರುತ್ತೀರಾ? ಏನೋ ತಿಂಗಳಿಗೊಮ್ಮೆ ಬರುತ್ತೀರಿ. ಆದ್ದರಿಂದ ಊರೂರು ತಿರುಗುತ್ತಿದ್ದೇನೆ ಜ್ಞಾನ ಸಂಪಾದನೆಗಾಗಿ ಹೀಗೆ ತಿರುಗುವುದೇ ಅಲ್ಲ ಪತ್ರೀಜಿಯವರು ಇನ್ನೂ ಕೆಲವು ಕೆಲಸಗಳನ್ನು ಮಾಡಬೇಕೆಂದು ಹೇಳಿದ್ದಾರೆ.

● ತೀವ್ರವಾಗಿ ಧ್ಯಾನವನ್ನು ಮಾಡಬೇಕೆಂದಿದ್ದಾರೆ
● ಜ್ಞಾನವಂತವಾದ ಪುಸ್ತಕಗಳನ್ನು ಓದಬೇಕೆಂದಿದ್ದಾರೆ.
● ಆತ್ಮಜ್ಞಾನಕ್ಕೆ ಸಂಬಂಧಿಸಿದ ಸಂದೇಶಗಳನ್ನು ಕೇಳಬೇಕೆಂದಿದ್ದಾರೆ.
● ಈ ಮಾರ್ಗದಲ್ಲಿ ನಾವು ಮಾಡುವ ಸೇವೆ ಇವೆಲ್ಲವೂ ಕೂಡ ನಮ್ಮ ಜ್ಞಾನವನ್ನು ಚೆನ್ನಾಗಿ ಹೆಚ್ಚಿಸುತ್ತದೆ ಎಂದಿದ್ದಾರೆ.
● ಎಲ್ಲಕ್ಕಿಂತಲೂ ನೀನು ಹೊಂದಿದ ಜ್ಞಾನವನ್ನು 10 ಜನರಿಗೆ ಹಂಚು ನಿನ್ನ ಜ್ಞಾನ ಹೆಚ್ಚಾಗುತ್ತದೆ ಎಂದಿದ್ದಾರೆ.

ಆಗ ಮೊದಲಿಟ್ಟೆನು 20 ವರ್ಷಗಳಿಂದ ಮಾಡುತ್ತಿದ್ದರೆ ನಿಜವಾಗಿಯೂ ಎಷ್ಟೋ

ಜ್ಞಾನವನ್ನು ಬೆಳೆಸಿಕೊಂಡಿದ್ದೇನೆ. ನೀವಾದರೂ ಹೆಚ್ಚಿಸಿಕೊಳ್ಳುತ್ತಿರಿ. ಯಾರಾಗಲಿ ಹೆಚ್ಚಿಸಿಕೊಳ್ಳುತ್ತಿರಿ. ಪತ್ರೀಜಿಯವರು ಹೇಳಿದ್ದನ್ನು ಮಾಡಿದರೆ ನಿಮಗೂ ಹೆಚ್ಚಾಗುತ್ತದೆ. ಈ ಕೆಲಸವನ್ನು ಮಣ್ಣಿನ ಗಡಿಗೆಯು ಒಡೆಯುವ ಮೊದಲೇ ಮಾಡಬೇಕು. ಕಾಲವೆಂಬ ಏಟು ಬೀಳಬಾರದು. ಆ ಕಾಲವು ಯಾವಾಗ ಬರುತ್ತದೆ ತಿಳಿಯದು ನಾಳೆಯೇ ಬರಬಹುದು, ವರ್ಷಕ್ಕೆ ಬರಬಹುದು, 10 ವರ್ಷಕ್ಕೆ ಬರಬಹುದು, 20 ವರ್ಷಕ್ಕೆ ಬರಬಹುದು. ಆದರೆ ಯಾವಾಗಾದರೂ ಬರಬಹುದು. ಆದ್ದರಿಂದ ನಾವು ಸಂಪಾದಿಸಿಕೊಳ್ಳುತ್ತಾ ಇರಬೇಕು ಯಾವುದು ನಮಗೆ ಲಾಭಿಸುತ್ತದೆಯೋ ಅದನ್ನು ಸಂಪಾದಿಸಿಕೊಂಡವನು ಆರಾಮವಾಗಿ ಸಾಯುತ್ತಾನೆ.

ಹಣವನ್ನು ಚೆನ್ನಾಗಿ ಸಂಪಾದಿಸಿದವನು ಆರಾಮವಾಗಿ ಬದುಕುತ್ತಾನೆ. ಆದರೆ ಹೊರಟು ಹೋಗುವುದಕ್ಕೆ ದುಃಖಿಸುತ್ತಾನೆ. ಆದರೆ ಜ್ಞಾನವನ್ನು ಚೆನ್ನಾಗಿ ಸಂಪಾದಿಸಿಕೊಂಡವನು ಆರಾಮವಾಗಿ ಹೊರಟು ಹೋಗುತ್ತಾನೆ. ಸ್ವಲ್ಪ ಆಲೋಚಿಸಿ ಹೇಳಿರಿ ಹಣವನ್ನು ಸಂಪಾದಿಸಿಕೊಂಡವನು ಆರಾಮವಾಗಿ ಏಕೆ ಬದುಕುತ್ತಿದ್ದಾನೆ? ಅವನಿಗೆ ಯಾವ ಕೊರತೆಯೂ ಬಾರದು. ತಿಂಡಿಗೆ ಬಾರದು, ಬಟ್ಟೆಗೆ ಬಾರದು, ಇರುವುದಕ್ಕೆ ಬಾರದು, ಯಾವುದಕ್ಕೂ ಬಾರದು ಯಾವುದು ಬೇಕೆಂದರೆ ಅದನ್ನು ಹೊಂದಿಸಿಕೊಳ್ಳಬಹುದು ಆದ್ದರಿಂದ ಎಲ್ಲಾ ಸುಖಮಯವೇ.

ಹಾಗೆಯೇ ಜ್ಞಾನವನ್ನು ಸಂಪಾದಿಸಿಕೊಂಡವನು ಆರಾಮವಾಗಿ ಹೊರಟು ಹೋಗುತ್ತಾನೆ ಎಂದೆನು. ಏಕೆ ಹೊರಟು ಹೋಗುತ್ತಾನೆ? ಅವನಿಗೆ ಎಲ್ಲಾ ಲಾಭವೇ ಮರಣಿಸಿದ ನಂತರ ಊರ್ಧ್ವಲೋಕಗಳಿಗೆ ಶ್ರೇಷ್ಠ ಲೋಕಗಳಿಗೆ ಸೇರಿಕೊಳ್ಳುತ್ತಾನೆ. ನೋಡಿ ಯಾರಾದರೂ ತಂದೆ ತಾಯಿ ಹೋದರೆ ಕರ್ಮಕಾಂಡಗಳನ್ನು ಮಾಡುತ್ತಾರಲ್ಲ! ಕರ್ಮಕಾಂಡಗಳನ್ನು ಊರ್ಧ್ವಲೋಕಗಳಿಗೆ ಹೋಗಬೇಕೆಂದು ಮಾಡುತ್ತಾರೆ. ಆದರೆ ಮಕ್ಕಳು ಮಾಡುವ ಕರ್ಮ ಕಾಂಡಗಳಿಂದ ಊರ್ಧಲೋಕಗಳಿಗೆ ಹೋಗುವುದಿಲ್ಲ, ಭೂಮಿಯ ಮೇಲೆ ಇರುವಾಗಲೇ ಅವರು ಸಂಪಾದಿಸುವ ಜ್ಞಾನದಿಂದಲೇ ಊರ್ಧ್ವಲೋಕಗಳಿಗೆ ಹೋಗುತ್ತಾರೆ.

ಈಗ ನೀವು ಆ ಕೆಲಸವನ್ನೇ ಮಾಡುತ್ತಿದ್ದೀರಿ. ನಿಮ್ಮಷ್ಟಕ್ಕೆ ನೀವು ಸಂಪಾದಿಸಿಕೊಂಡ ಜ್ಞಾನದಿಂದಲೇ ನೀವು ಊರ್ಧ್ವಲೋಕಗಳಿಗೆ ಹೋಗಬಲ್ಲಿರಿ. ಬಹಳಷ್ಟು ಜನರು ಜೀವನೋಪಾಯಕ್ಕಾಗಿ ಹಣವನ್ನು ಸಂಪಾದಿಸಿಕೊಳ್ಳುತ್ತಾ ಜ್ಞಾನವನ್ನು ಕೂಡ ಸಂಪಾದಿಸುತ್ತಿದ್ದಾರೆ. ಅದು ಎರಡನೆಯ ಪಕ್ಷವಾಗಲಿ. ಪತ್ರೀಜಿಯವರು ಪರಿಚಯವಾದ ನಂತರ ಜ್ಞಾನವು ಅಗತ್ಯ ಎಂದ ಮೇಲೆ ಇನ್ನೂ ನಾನೇನು ಸಂಪಾದಿಸಲಿ?. ಈಗಲೇ ಸಾಕಷ್ಟು ಇದೆ. ವ್ಯಾಪಾರಗಳನ್ನೆಲ್ಲ ಬಿಟ್ಟು

ಈ ಮಾರ್ಗದಲ್ಲಿಯೇ ಪೂರ್ತಿಯಾಗಿ ನಿಮಗ್ನನಾದೆನು. ನನ್ನೊಂದಿಗೆ ನಮ್ಮ ಮೇಡಂ ಕೂಡ ಸಹಕಾರ ನೀಡಿದರು. ಅದಕ್ಕೆ ಇಬ್ಬರೂ ಎಷ್ಟೋ ಜ್ಞಾನವನ್ನು ಸಂಪಾದಿಸಿಕೊಂಡೆವು, ಶ್ರದ್ಧೆ ತೋರಿಸಿದರೆ ನೀವೂ ಸಂಪಾದಿಸಿಕೊಳ್ಳಬಹುದು.

ಏಕೆಂದರೆ ಮೇಲಿನ ಲೋಕಗಳಿಗೆ ಹೋದರೆ ಅಲ್ಲಿ ಶ್ರೇಷ್ಠ ಮಹನೀಯರ ಪರಿಚಯವಾಗುತ್ತದೆ. ಋಷಿಗಳು, ಮಹರ್ಷಿಗಳು, ಯೋಗಿಗಳು ಅಂಥವರೆಲ್ಲ ಅಲ್ಲಿಗೆ ಹೋಗುತ್ತಾರೆ. ಅವರ ಸಾಂಗತ್ಯ ದೊರೆಯುತ್ತದೆ. ಅವರಿಂದ ಇನ್ನೂ ಎಷ್ಟೋ ಕಲಿತುಕೊಳ್ಳುತ್ತೇವೆ. ದೊಡ್ಡ ದೊಡ್ಡವರ ಪರಿಚಯ ಏರ್ಪಡುತ್ತದೆ. ಇನ್ನು ಎಷ್ಟೋ ತಂತ್ರಗಳು ತಿಳಿಯುತ್ತವೆ. ಸೃಷ್ಟಿಯ ರಹಸ್ಯಗಳು ತಿಳಿಯುತ್ತವೆ.

ಯಾವ ಮೆಡಿಕಲ್ ಕಾಲೇಜ್ ಆಗಲಿ, ಯಾವ ಇಂಜಿನಿಯರಿಂಗ್ ಕಾಲೇಜ್ ಆಗಲಿ, ಅಲ್ಲಿ ಫಸ್ಟ್ ರ್‍ಯಾಂಕ್ ಬಂದರೆ ಆಯ್ಕೆ ಮಾಡಿಕೊಂಡು ಉನ್ನತವಾದ ನಂಬರ್ ಒನ್ ಕಾಲೇಜಿಗೆ ಹೋಗುತ್ತಾರೆ. ಅಲ್ಲಿ ಎಲ್ಲಾ ಬುದ್ಧಿವಂತ ವಿದ್ಯಾರ್ಥಿಗಳೇ ಇರುತ್ತಾರೆ. ಬುದ್ಧಿವಂತ ವಿದ್ಯಾರ್ಥಿಗಳೇ ಅಲ್ಲ, ಬಹಳ ಉನ್ನತ ಮಟ್ಟದ ವರ್ಗದ ಆಫೀಸರ್‌ಗಳು, ಉನ್ನತ ಸ್ಥಾಯಿಯಲ್ಲಿ ಇರುವವರ ಮಕ್ಕಳೆಲ್ಲ ಕೂಡ ಇರುತ್ತಾರೆ. ಅಂಥವರ ಪರಿಚಯ ಏರ್ಪಟ್ಟರೆ ಇವನಿಗೆ ಎಲ್ಲಾ ತಿಳಿಯುತ್ತದೆ. ಭವಿಷ್ಯತ್ತಿನಲ್ಲಿ ಏನು ಮಾಡಬೇಕು ಎಂದು ಅವರ ಮೂಲಕ ಎಷ್ಟೋ ಕಲಿತುಕೊಳ್ಳುತ್ತಾರೆ. ಏಕೆಂದರೆ ಅವರ ತಂದೆ ತಾಯಿಗಳೆಲ್ಲ ಎಷ್ಟೋ ಶ್ರೇಷ್ಠರು, ಐಎಎಸ್ ಐಪಿಎಸ್‌ನಂತಹ ಉನ್ನತ ಸ್ಥಾಯಿಯಲ್ಲಿ ಅವರು ಇರುತ್ತಾರೆ.

ಅದೇ ಅಧೋಲೋಕಗಳಿಗೆ ಹೋದರೆ, ಆ ಕಳ್ಳತನ ಮಾಡುವವರು, ಮೋಸಗಾರರು ಇಂಥವರ ಮಕ್ಕಳೆಲ್ಲ ಇರುತ್ತಾರೆ. ಅವರ ಬಳಿ ಏನಿರುತ್ತದೆ? ಹಾಗೆ ಹೇಳುತ್ತಾ ಇರುತ್ತಾರೆ ನಾನು ಅವರನ್ನು ಹತ್ಯೆ ಮಾಡಿ ಬಂದೆ, ಈ ಕನ್ನ ಹಾಕಿ ಬಂದೆ ಎಂದು ಹೇಳುತ್ತಾರೆ. ಇವುಗಳನ್ನೇ ಕಲಿಯುತ್ತಾ ಇರುತ್ತಾರೆ. ಇಲ್ಲದಿದ್ದರೆ ನಾನು ಭೂಮಿಯ ಮೇಲಿರುವಾಗ ನನ್ನಾಕೆ, ನಾನು ಬಡಿದಾಡಿಕೊಂಡೆವು, ಜಗಳವಾಡಿದೆವು ಎಂದು ಅವುಗಳನ್ನೇ ಹೇಳುತ್ತಾರೆ ಅಂದರೆ ಅವರ ಬಳಿ ಅವುಗಳೇ ಇರುತ್ತವೆ.

ಆದ್ದರಿಂದ ಅಂತಹ ಸಾಂಗತ್ಯ ದೊರಕಬೇಕೆಂದರೆ ಭೂಮಿಯ ಮೇಲೆ ಇರುವಾಗಲೇ ಜ್ಞಾನವನ್ನು ಪಡೆದುಕೊಳ್ಳಬೇಕು. ಉನ್ನತವಾದ ಕಾಲೇಜಿಗೆ ಹೋಗಬೇಕೆಂದರೆ ಭೂಮಿಯ ಮೇಲೆ ಹಣವನ್ನು ಸಂಪಾದಿಸಬೇಕು. ಶ್ರೇಷ್ಠ ಲೋಕಗಳಿಗೆ ಹೋಗಬೇಕೆಂದರೆ ಭೂಮಿಯ ಮೇಲೆ ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಎಂದು ತಿಳಿದುಕೊಳ್ಳಬೇಕು. ಕಬೀರರು ಹೇಳಿದಂತೆ ಈ ಮಣ್ಣಿನ ಗಡಿಗೆ ಒಡೆದುಹೋಗುವ ಮೊದಲೇ ಆತ್ಮನಾದ ನೀವು ಲಾಭಿಸುವ ಕೆಲಸಗಳನ್ನೇ ಮಾಡಿರಿ.

# ನಾಲಿಗೆ ವಶದಲ್ಲಿದ್ದರೆ ಪ್ರಪಂಚ ವಶ

## ಕಬೀರರ ಮತ್ತೊಂದು ಸಂದೇಶ

**ಯಾರ ನಾಲಿಗೆಯಾದರೆ ಅವರ ವಶದಲ್ಲಿ ಇರುತ್ತದೋ, ಅವರಿಗೆ ಪ್ರಪಂಚವು ವಶವಾಗುತ್ತದೆ ಇಲ್ಲದಿದ್ದರೆ ಅವಲಕ್ಷಣಗಳು ಉತ್ಪನ್ನವಾಗುತ್ತವೆ.**

ಇದು ಕೂಡ ಬಹಳ ಮುಖ್ಯವಾದ ಸಂದೇಶ. ಏಕೆಂದರೆ ನಾಲಿಗೆಯು ವಶದಲ್ಲಿರುವುದು ಅಂದರೆ ಎರಡು ರೀತಿಗಳು. ಮೊದಲನೆಯದು ಮಾತುಗಳು, ಎರಡನೇಯದು ರುಚಿಯೊಂದಿಗೆ ಕೂಡಿದ ಆಹಾರ. ಈ ಎರಡನ್ನು ಹಿಡಿತದಲ್ಲಿಡಬೇಕೆಂದರೆ ನಾವು ನಾಲಿಗೆಯನ್ನು ಹಿಡಿತದಲ್ಲಿಡಬೇಕು. ನಮ್ಮ ವಶದಲ್ಲಿರಬೇಕು. ಈ ಎರಡು ಅಂದರೆ 'ನಾಲಿಗೆ' ನಿಯಂತ್ರಣದಲ್ಲಿರದೆ ಲೋಕದಲ್ಲಿ ಮಾನವರು ಎಷ್ಟೋ ಕಷ್ಟಗಳನ್ನು ಎದುರಿಸುತ್ತಿದ್ದಾರೆ.

ಮೊಟ್ಟ ಮೊದಲು 'ನಾಲಿಗೆ'ಯಿಂದ ಬರುವ ಮಾತು, ಪತ್ರೀಜಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. 'ನಿನ್ನ ಬಾಯಿಯಲ್ಲಿನ ಮಾತೇ ನಿನ್ನ ಹಣೆಬರಹ' ಏಕೆಂದರೆ ನಮ್ಮ ಬಾಯಿಯಿಂದ ಹೊರಬಂದ ಪ್ರತಿ ಮಾತು ಒಂದು ಕರ್ಮವಾಗಿ ತಯಾರಾಗಿ ನಮ್ಮ ಖಾತೆಯಲ್ಲಿ ಬರೆಯಲ್ಪಡುತ್ತದೆ. ಅದರ ಫಲವನ್ನು ಮತ್ತೆ ನಾವು ಅನುಭವಿಸಬೇಕಾಗುತ್ತದೆ. ಅದಕ್ಕೆ ಅನ್ನುತ್ತಾರೆ ಕಾಲು ಜಾರಿದರೂ ಹಿಂದಕ್ಕೆ ಎಳೆದುಕೊಳ್ಳಬಹುದಂತೆ, ಬಾಯಿ ಜಾರಿದರೆ ಹಿಂದಕ್ಕೆ ತೆಗೆದುಕೊಳ್ಳಲಾರೆವಂತೆ. ಬಾಯಿ ಜಾರಬಾರದು ಅಂದರೆ ನಮ್ಮ ವಶದಲ್ಲಿ ಇರಬೇಕು ಬಾಯಿ ಇದೆ ಎಂದು ಯಾರೆಂದರೆ ಅವರನ್ನು ವಿಮರ್ಷಿಸಿ, ಯಾರೆಂದರೆ ಅವರನ್ನು ಬೈಯ್ಯುತ್ತಾ ಯಾರು ಬೇಕೆಂದರೆ ಅವರನ್ನು ಅವಮಾನಿಸುತ್ತ ಕೀಳಾಗಿಸುವ ಮಾತುಗಳನ್ನು ಮಾತನಾಡಿದರೆ ಇವೆಲ್ಲ ನಷ್ಟವನ್ನುಂಟು ಮಾಡುತ್ತವೆ. ಇವು ಮಾತನಾಡುವವರಿಗೆ ತಿಳಿಯದು. ನಿಮಗೆ ಇಷ್ಟವಿಲ್ಲದಿರುವವರು ಇರಬಹುದು, ದ್ವೇಷಿಸುವವರು ಇರಬಹುದು, ನಿನಗೆ ಇಷ್ಟವಾಗಿರುವವರೂ ಇರಬಹುದು಼ ಯಾರಾಗಲಿ ಸರಿ ಬಾಯಿ ನಿಯಂತ್ರಣದಲ್ಲಿರಬೇಕು ಎನ್ನುತ್ತಾರೆ.

ಏಕೆಂದರೆ ಕಬೀರರು ಇನ್ನೊಂದು ಮಾತನ್ನು ಕೂಡ ಹೇಳಿದ್ದಾರೆ. ಬಾಯಿಯಿಂದ ಬರುವಾಗ ಬೈಗುಳ ಬೈಯ್ಯುವ ಮಾತು ಒಂದೇ ಇರುತ್ತದೆ. ಮಾತಿಗೆ ಮಾತು ಹೇಳಿದಾಗ ಅದು ಅನೇಕವಾಗಿ ಬದಲಾಗುತ್ತದೆ. ಆದರೆ ಪುನಃ ಹೇಳದೆ ಹೋದರೆ ತಿರುಗಿ ಮಾತನಾಡದಿದ್ದರೆ ಒಂದೇ ಇರುತ್ತದೆ. ಅದು ನಮ್ಮ ಮೇಡಂ ಬಹಳಷ್ಟು ಬಾರಿ ಹೇಳುತ್ತಾರೆ. ಬೈಗುಳಕ್ಕೆ ಒಡಹುಟ್ಟಿರುವುದನ್ನು ಹುಟ್ಟಿಸಬೇಡ ಎಂದು. ಒಡಹುಟ್ಟಿಸುವುದು ಒಡ ಹುಟ್ಟಿದವು ಹುಟ್ಟಬಾರದೆಂದರೆ ಬೈದಾಗ ಅದಕ್ಕೆ 'ಉತ್ತರ'ವನ್ನು ಹೇಳಬಾರದು.

ಮೌನವಾಗಿ ಸುಮ್ಮನಿರುವುದೇ, ಬೈದು ಬೈದು ಅವರೇ ಬಾಯಿ ಮುಚ್ಚಿಕೊಂಡು ಸುಮ್ಮನೆ ಇರುತ್ತಾರೆ. ಎಷ್ಟು ಹೊತ್ತು ಬೈಯುತ್ತಾರೆ. ಪ್ರತಿಯೊಬ್ಬರೂ ನೆನಪಿಟ್ಟುಕೊಳ್ಳಬೇಕಾಗಿರುವುದು ಏನೆಂದರೆ ನಮ್ಮ ಮಾತು ಕೂಡ ಕರ್ಮದ ಕೆಳಗೆ ಲೆಕ್ಕಿಸಲ್ಪಡುತ್ತದೆ ಭಗವಂತನು ಮಾತನಾಡುವ ಶಕ್ತಿಯನ್ನು ಕೊಟ್ಟಿರುವುದು ಎಲ್ಲರನ್ನೂ ಕೆಟ್ಟ ಮಾತುಗಳನ್ನು ಬೈಯ್ಯುವುದಕ್ಕಲ್ಲ. ಬಾಯಿಯನ್ನು ದುರ್ವಿನಿಯೋಗ ಮಾಡುವುದಕ್ಕಲ್ಲ.

ನಾನು ಬಹಳ ಜನ ಮುದುಕರನ್ನು ನೋಡಿದ್ದೇನೆ. ಅವರ ಮಾತುಗಳಲ್ಲಿ ಸ್ಪಷ್ಟತೆ ಇರುವುದಿಲ್ಲ. ಅವರೇನು ಮಾಡುತ್ತಿದ್ದಾರೋ ಅರ್ಥವಾಗದು ಮತ್ತೆ ಅವರು ಇನ್ನೂ ಬದುಕೇ ಇದ್ದಾರೆ. ಮಾತಿನ ಸ್ಪಷ್ಟತೆಯನ್ನು ಕಳೆದುಕೊಂಡಿದ್ದಾರೆ, ಅವರಿಗೆ ಮಾತನಾಡುವ ಶಕ್ತಿ ಕ್ಷೀಣಿಸಿದೆ. ಅದಕ್ಕೆ ಮುಖ್ಯ ಕಾರಣ ಅವರು ಆ ಮಾತುಗಳನ್ನು ಅತಿಯಾಗಿ ಉಪಯೋಗಿಸಿರುವುದೇ. ಕೆಲವರನ್ನು, ಹತ್ತಿರದವರನ್ನು ಕೂಡ ಇನ್ನೂ ಚೆನ್ನಾಗಿ ಗಮನಿಸಿದ್ದೇವೆ ಓ ಮಾತನಾಡುತ್ತಲೇ ಇರುತ್ತಾರೆ, ವಿಮರ್ಷಿಸುತ್ತಲೇ ಇರುತ್ತಾರೆ. ಅನಗತ್ಯವಾದ ಜೋಕುಗಳನ್ನು ಹೇಳುತ್ತಿರುತ್ತಾರೆ. ಅದೇನೋ ದೊಡ್ಡದೆಂದುಕೊಳ್ಳುತ್ತಾರೆ. ಹಾಗೆ ಉಪಯೋಗಿಸಿದವರನ್ನು ನೋಡಿದ್ದೇವೆ. ಭವಿಷ್ಯತ್ತಿನಲ್ಲಿ ರೋಗ ಬಂದು ಮಾತನ್ನೇ ಕಳೆದುಕೊಂಡರು. ಈ ಪರಿಸ್ಥಿತಿಯು ಏಕೆ ಬಂದಿತು? ಅವನು ಮಾತನ್ನು ಏಕೆ ಕಳೆದುಕೊಂಡನು ಮಾತನ್ನು ದುರ್ವಿನಿಯೋಗ ಮಾಡಿದ್ದಾನೆ. ಹೀಗೆ ಬಹಳ ಜನರನ್ನು ನೋಡಿದ್ದೇನೆ.

ಅದಕ್ಕೆ ಕಬೀರರು ಹೇಳುತ್ತಿದ್ದಾರೆ, 'ಯಾರಾದರೂ ಬೈದರೂ ತಿರುಗಿ ಮಾತನಾಡಬೇಕು' ಹೇಗೆರಿ? ಎನ್ನುತ್ತೀರಿ. ನಿಮ್ಮ ಬಳಿ ಆ ಶಕ್ತಿ ಇದ್ದರೆ ಇದು ಸಾಧ್ಯವಾಗುತ್ತದೆ. ಆ ಶಕ್ತಿ ಇಲ್ಲದಿದ್ದರೆ ನೀವೇ ನಷ್ಟ ಹೊಂದುತ್ತೀರಿ. ಶಕ್ತಿಯನ್ನು ಸಂಪಾದಿಸಿಕೊಳ್ಳುವುದಕ್ಕೆ ನಾವು ಧ್ಯಾನವನ್ನು ಮಾಡುತ್ತಿದ್ದೇವೆ. ಸುಮ್ಮನೆ ಏನೂ ಮಾಡುತ್ತಿಲ್ಲ. ಯಾವುದನ್ನಾಗಲಿ ನಿಯಂತ್ರಿಸುವ ಶಕ್ತಿ 'ನಮ್ಮ ಶಕ್ತಿ'ಯು ಹೆಚ್ಚಾದಾಗ ಬರುತ್ತದೆ. ನಿನಗೆ ಯಾವುದೂ ನಿಯಂತ್ರಣವಿಲ್ಲವೆಂದರೆ ನಿಮ್ಮ ಬಳಿ ಅಸಲು ಶಕ್ತಿಯೇ ಇಲ್ಲವೆಂದು ಅರ್ಥ. ನಿನ್ನ ಜೀವನ ಹಾಳಾಗಿ ಹೋಗುತ್ತದೆ. ಪತ್ರೀಜಿಯವರು ಹೇಳಿದ ಮಾತು 'ನಿನ್ನ ಬಾಯಿಯ ಮಾತೇ ನಿನ್ನ ಹಣೆಬರಹ'. ಇದರಲ್ಲಿ ಎಷ್ಟು ಅರ್ಥವಿದೆರೀ! ನಮ್ಮ ಹಣೆಯ ಬರಹವನ್ನು ಆಧರಿಸಿ ನಮ್ಮ ಜೀವನವು ಆಧಾರಪಟ್ಟಿರುತ್ತದೆ ಅಂತಹ ಬರಹವನ್ನು ಏಕೆ ಬರೆದುಕೊಳ್ಳಬೇಕು.

ಈ ರಾಜಕೀಯದಲ್ಲಿ ನಾವು ನೋಡಿದರೆ ಈ ಬಾಯಿಯನ್ನು ಅಧಿಕವಾಗಿ ಉಪಯೋಗಿಸುತ್ತಿದ್ದಾರೆ. ಅವರನ್ನು ಭವಿಷ್ಯತ್ತಿನಲ್ಲಿ ನೀವು ನೋಡಿರಿ ಏನು ಬೇಕಾಗಿಲ್ಲ. ಪ್ರಾತ್ಯಕ್ಷಿಕೆಯಾಗಿ ನಾವು ಎಲ್ಲಿಗೋ ಹೋಗಿ ಯಾರನ್ನಾಗಲಿ ನೋಡಿ ಕೇಳಬೇಕಾದ ಕೆಲಸವಿಲ್ಲ. ನಮ್ಮ ಎದುರಿಗೆ ನಡೆಯುತ್ತಿರುವುದನ್ನು ಗಮನಿಸಿದರೆ ಅರ್ಥವಾಗುತ್ತದೆ.

ಆದ್ದರಿಂದಲೇ ಅದರಿಂದಲೇ ಗ್ರಹಿಸಬೇಕು ಅರ್ಥಮಾಡಿಕೊಳ್ಳಬೇಕು. ನಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕು ಇಲ್ಲದಿದ್ದರೆ ನಷ್ಟ ಹೋಗುವುದು ಯಾರು? ನೀವೇ ನಷ್ಟ ಹೊಂದುತ್ತೀರಿ. ದೊಡ್ಡವರು ಏಕೆ ಹೇಳುತ್ತಿದ್ದಾರೆ? ಕಬೀರರು ಹೇಳಿರುವುದರಲ್ಲಿ ಎಷ್ಟು ಅರ್ಥವಿದೆರೀ! ನಿಮ್ಮ ನಾಲಿಗೆ ನಿಮ್ಮ ಹಿಡಿತದಲ್ಲಿದ್ದರೆ ಎಲ್ಲಾ ನಿಮ್ಮ ಹಿಡಿತದಲ್ಲಿದ್ದಂತೆಯೇ ಪ್ರಪಂಚವೇ ನಿಮ್ಮ ಹಿಡಿತದಲ್ಲಿರುತ್ತದೆ ಎಂದಿದ್ದಾರೆ. ಆತನು ನಮ್ಮ ನಾಲಿಗೆ ನಮ್ಮ ಹಿಡಿತದಲ್ಲಿ ಇರಬೇಕೆಂದರೆ ನಾವು ಹೆಚ್ಚಾಗಿ ಮೌನವನ್ನು ಪಾಲಿಸುವ ಅಭ್ಯಾಸವನ್ನು ಮಾಡಿಕೊಳ್ಳಬೇಕು. ಅನಿವಾರ್ಯವಾದಾಗ ಮಾತ್ರವೇ ಮಾತನಾಡಬೇಕು.

ಹೆಚ್ಚು ಮಾತನಾಡಿದವನು ದೊಡ್ಡವನಲ್ಲ, ಕಡಿಮೆ ಮಾತನಾಡುವವನೇ ಶ್ರೇಷ್ಠನು. ಆದ್ದರಿಂದ ಧ್ಯಾನದ ಮೂಲಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು. ಆ ಶಕ್ತಿಯು ಹೆಚ್ಚಿದಷ್ಟು ಎಲ್ಲವೂ ನಮ್ಮ ನಿಯಂತ್ರಣದಲ್ಲಿಟ್ಟುಕೊಳ್ಳುತ್ತೇವೆ. ಅವೆಲ್ಲವುಗಳು ನಮ್ಮ ಭವಿಷ್ಯತ್ತನ್ನು ರೂಪಿಸುತ್ತವೆ.

ಹಾಗೆಯೇ ನಾಲಿಗೆಯು ಹಿಡಿತದಲ್ಲಿರುವುದು ಅಂದರೆ 'ರುಚಿ'ಯನ್ನು ಕೂಡ ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ರುಚಿಗೆ ದಾಸನಾದರೆ ಜೀವನವೆಲ್ಲ ದುಃಖವೇ. ಲೋಕದಲ್ಲಿ ಬಹಳಷ್ಟು ಜನರು ಮಾಂಸಾಹಾರಕ್ಕೆ ಅಭ್ಯಾಸವಾಗಿದ್ದಾರೆ. ಅವನು ಹೇಳುವ ಮೊದಲನೇ ಮಾತು ಏನೆಂದರೆ ರುಚಿಯಾಗಿದೆ ಎಂದು. ಇವರಿಗೆ ಅದನ್ನು ನೋಡಿದರೇನೇ ಬಾಯಲ್ಲಿ ನೀರೂರುತ್ತದೆ. ಈ ನಡುವೆ ಯೂಟ್ಯೂಬ್‌ನಲ್ಲಿ ನೋಡುತ್ತಿದ್ದೇನೆ ಶಾಖಾಹಾರದ ಅಡುಗೆಗಳು ಎಲ್ಲಿಯೂ ಕಾಣಿಸುತ್ತಿಲ್ಲ. ಎಲ್ಲರೂ ಮಾಂಸಹಾರವನ್ನು ತಯಾರು ಮಾಡುವವರೇ. ಬೇಕೆಂದರೆ ಯಾವ ಊರಿಗಾದರೂ ಹೋಗಿ ಶುದ್ಧ ಸಸ್ಯಹಾರದ ಹೋಟೆಲ್ ದೊರಕುತ್ತದೆಯೋ ನೋಡಿರಿ. ಎಲ್ಲಿಯೂ ದೊರಕದು. ಶಾಖಾಹಾರದ ಹೋಟೆಲ್ ಇಡಬೇಕೆಂದರೆ ತಿಂಗಳು ತಿರುಗುವುದರೊಳಗೆ ಮುಚ್ಚಬೇಕೆನ್ನುತ್ತಾನೆ. ಏನು ಮಾಡುತ್ತಾನೆ? ಇಟ್ಟರೆ ಮಾಂಸಹಾರವನ್ನು ಇಡುತ್ತಾರೆ. ಇಲ್ಲದಿದ್ದರೆ ಮುಚ್ಚುತ್ತಾರೆ ಹಾಗಿದೆ ಪರಿಸ್ಥಿತಿ. ಶಾಖಾಹಾರದ ಹೋಟೆಲ್‌ಗಳು ಬೇಕೆಂದರೆ ಬೆಂಗಳೂರು ಕರ್ನಾಟಕಕ್ಕೆ ಹೋಗಬೇಕಷ್ಟೇ. ಬಹಳ ದಿನಗಳ ಹಿಂದೆ ಶಾಖಾಹಾರದ ಹೋಟೆಲ್‌ಗಾಗಿ ನಾನು ಚೆನ್ನೈನಲ್ಲಿ ತಿರುಗಿದೆನು. ಹೈದರಾಬಾದಿನಲ್ಲಿಯೂ ಕಷ್ಟವೇ ಏನು ಹೀಗೆ ಆಗಿದೆ? 'ರುಚಿ ನಿನಗೇನು ಗೊತ್ತು ಮತ್ತೆ' ಹೀಗೆ ಮಾತನಾಡುತ್ತಾರೆ. ಪಲಾವ್ ತಿನ್ನದೇ ಬೇಳೆ ಅನ್ನ ಉಣ್ಣುವೆಯಾ? ಎಂದು ಆಕ್ಷೇಪಿಸುತ್ತಾರೆ.


ಈಗ ಎಂತಹ ಪರಿಸ್ಥಿತಿ ಬಂದಿದೆ ಎಂದರೆ ಯಾರಿಗಾಗಲಿ ಒಂದು ಹುಣಸೆಕಾಯಿ ಆಗಲಿ, ಮಾವಿನಕಾಯಿಯಾಗಲಿ ನೋಡಿದರೆ ಬಾಯೂರುತ್ತದೆ. ಆದರೆ

ಈಗ ರಸ್ತೆಯ ಮೇಲೆ ಕೋಳಿಯನ್ನು ನೋಡಿದರೆ ಬಾಯೂರಿಬಿಡುತ್ತದೆ. ಅಬ್ಬಾ! ಕೋಳಿಯನ್ನು ನೋಡಿದರೆ ಬಾಯೂರುವುದೇನು! ಹೀಗಾಗಿದೆ ಪರಿಸ್ಥಿತಿ. ಅದಕ್ಕೆ ಕಬೀರರು ಏನೆನ್ನುತ್ತಾರೆ ಎಂದರೆ ನಾಲಿಗೆಯನ್ನು ಹಿಡಿತದಲ್ಲಿಟ್ಟುಕೊಂಡವನು ಪ್ರಪಂಚವನ್ನು ಹಿಡಿತದಲ್ಲಿಟ್ಟುಕೊಂಡವನು. ಯಾವ ಮನೆಗಾದರೂ ಬುದ್ಧನಂತ ಮಹನೀಯ ಬಂದರೆ ಅನೇಕ ತರಹದ ಪದಾರ್ಥಗಳನ್ನು ಸಿಹಿ ತಿಂಡಿಗಳನ್ನು ತಂದಿಡುತ್ತಾರೆ. ಎಷ್ಟು ತಂದಿಟ್ಟರೂ ಆತನು ಅವುಗಳ ಕಡೆಗೆ ನೋಡುತ್ತಿರಲಿಲ್ಲವಂತೆ! ಹೊಟ್ಟೆಯ ಕಡೆಗೆ ನೋಡುತ್ತಾನಂತೆ. ಮತ್ತೆ ನೀವು ಹೊಟ್ಟೆ ಕಡೆಗೆ ನೋಡುತ್ತಿರೋ ಪದಾರ್ಥಗಳ ಕಡೆಗೆ ನೋಡುತ್ತಿರೋ. ಒಂದು ಬಾರಿ ಹೊಟ್ಟೆಯ ಕಡೆಗೆ ನೋಡಿ ಇದು ಪರವಾಗಿಲ್ಲ ಏನೋ ತಿನ್ನೋಣ ಅಂದರೆ ಯಾವುದೋ ಒಂದನ್ನು ತೆಗೆದುಕೊಂಡು ಬಾಯಲ್ಲಿ ಹಾಕುತ್ತಿದ್ದನು. ಇದು ನನಗೇನು ಬೇಡ ಎಂದು ಅಂದುಕೊಂಡರೆ ಅದು ಎಂತಹ ಮಧುರವಾದ ಪದಾರ್ಥವಾದರೂ ಸರಿ ಅಸಲು ಅವುಗಳ ಕಡೆಗೆ ನೋಡುತ್ತಿರಲಿಲ್ಲವಂತೆ.

ನಾಲಿಗೆಯನ್ನು ನಿಯಂತ್ರಿಸದಿದ್ದರೆ, ಮಾಂಸಹಾರವನ್ನು ತಿಂದರೆ ಅದು ಅಡುಗೆ ಮಾಡಲು ಕಾರಣವಾದಂತಹ ಪ್ರಾಣಿಗಳು, ಪಕ್ಷಿಗಳ ಹಿಂಸೆಗೆ ಇವನು ಕಾರಣವಾಗುತ್ತಾನೆ. ಅದರ ಫಲಿತವನ್ನು ಮತ್ತೆ ನೀವು ಅನುಭವಿಸಬೇಕು. ಅದು ಬಹಳ ನರಕವೇ. ಆದ್ದರಿಂದ ಬಹಳ ಅದ್ಭುತವಾದ ಸಂದೇಶವಿದು. ನಮ್ಮ ಮಾತುಗಳನ್ನು, ನಮ್ಮ ಬಾಯಿಯನ್ನು ಎರಡನ್ನು ಹಿಡಿತದಲ್ಲಿ ಇಟ್ಟುಕೊಳ್ಳೋಣ. ಇವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವ ಶಕ್ತಿ ನಮ್ಮ ಬಳಿ ಇರಬೇಕು. ಅದಕ್ಕಾಗಿಯೇ ನಾವೀಗ ಮಾಡುವ ಧ್ಯಾನವು. ಇವೆಲ್ಲವೂ ಧ್ಯಾನದಲ್ಲಿ ಲಾಭಗಳೆರೀ. ರೋಗ ವಾಸಿಯಾಗುವುದು ಒಂದೇ ಅಲ್ಲ ಅನುಭವಗಳು ಒಂದೇ ಅಲ್ಲ ಇವೆಲ್ಲವೂ ಲಾಭಗಳೇ ಶ್ರೇಷ್ಠರು ಏನನ್ನು ಹೇಳಿದರೂ ಲಾಭಗಳಿಗಾಗಿಯೇ ಹೇಳುತ್ತಾರೆ. ಅವರು ಹೇಳುವ ವಿಷಯಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು.

ಕಬೀರರು ಇನ್ನೊಂದು ಉಪಮಾನ ಸಂದೇಶವನ್ನು ಹೇಳಿದ್ದಾರೆ. 'ಎಂತಹ ಭೋಜನವನ್ನು ಮಾಡಿದರೆ ಅಂತಹ ಮನಸ್ಸು ತಯಾರಾಗುತ್ತದೆ' 'ಎಂತಹ ನೀರನ್ನು ಕುಡಿದರೆ ಅಂತಹ ವಾಣಿ ತಯಾರಾಗುತ್ತದೆ'.

ಆದ್ದರಿಂದ ನಾವು ತೆಗೆದುಕೊಳ್ಳುವ ಆಹಾರ, ನೀರನ್ನು ಬಹಳ ಎಚ್ಚರದಿಂದ ತೆಗೆದುಕೊಳ್ಳಬೇಕು, ಆಹಾರ ಅಂದರೆ ಬಾಯಿಯಲ್ಲಿ ಹಾಕುವ ಪ್ರತಿಯೊಂದು ಆಹಾರವಲ್ಲ. ಸಾತ್ವಿಕವಾದ ಶಾಖಾಹಾರ. ಪತ್ರೀಜಿಯವರು ಪದೇಪದೆ ಹೇಳುತ್ತಾರೆ. ನಾವೆಲ್ಲ ಆ ಕೆಲಸವನ್ನೇ ಮಾಡುತ್ತಿದ್ದೇವೆ. ಆತನು ನಿನ್ನ ಬಾಯಿ ನಿನ್ನ ಹಿಡಿತದಲ್ಲಿ ಇರಬೇಕೆಂದರೆ ಶಾಖಾಹಾರದಲ್ಲಿ ಬೆಳ್ಳುಳ್ಳಿಯೂ ಕೂಡ ಬೇಡ ಎಂದಿದ್ದಾರೆ.




**ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ**
**ಆಶೀರ್ವಾದಗಳೊಂದಿಗೆ**

**“ಧ್ಯಾನವೆಂದರೆ ಶ್ವಾಸದ ಮೇಲೆ ಗಮನ”**

ಬ್ರಹ್ಮರ್ಷಿ ತಟವರ್ತಿ ವೀರರಾಘವರಾವ್ ಹಾಗೂ ಬ್ರಹ್ಮವಿದ್ವರಿಷ್ಠ ರಾಜ್ಯಲಕ್ಷ್ಮೀ ಅಮ್ಮನವವರು (ಭೀಮಾವರಂ ಎ.ಪಿ.) ನೇತೃತ್ವದಲ್ಲಿ ಧಾರವಾಡದಲ್ಲಿ ಪ್ರತಿ ತಿಂಗಳು 7, 8, 9 ರಂದು ಮೂರು ದಿನಗಳ ನಿಶ್ಯಬ್ಧ ಧ್ಯಾನ ಹಾಗೂ ಆತ್ಮಜ್ಞಾನ ಯಜ್ಞ ನಡೆಯಲಿದೆ.

ವಿಳಾಸ:

**ಅಕ್ಕಮಹಾದೇವಿ ಆಶ್ರಮ, ಗಣೇಶ ನಗರ, ರೈಲ್ವೇ ಟ್ರ್ಯಾಕ್ ಹತ್ತಿರ**
**ಹಳಿಯಾಳ ರೋಡ್, ಧಾರವಾಡ**
**ಉಚಿತ ವಸತಿ ಹಾಗೂ ಅನ್ನಪ್ರಸಾದದ ವ್ಯವಸ್ಥೆ ಇರುತ್ತದೆ.**
**ರಿಜಿಸ್ಟ್ರೇಷನ್ ಕಡ್ಡಾಯ**
**----- ವಿವರಗಳಿಗಾಗಿ ಸಂಪರ್ಕಿಸಿ -----**
**ಸಾಯಿಲೀಲಾ (ಪಿರಮಿಡ್ ಮಾಸ್ಟರ್) ಮೊ: 63092 47146**



**ಬ್ರಹ್ಮರ್ಷಿ ಪಿತಾಮಹ ಡಾ. ಸುಭಾಷ್ ಪತ್ರೀಜಿಯವರ**
**ಆಶೀರ್ವಾದಗಳೊಂದಿಗೆ**

ಶ್ರೀ ರಾಮಧಾಮ ಧ್ಯಾನ ಮಂದಿರ

ನಾರಾಯಣಪ್ಪ ಗಾರ್ಡನ್, ವೈಟ್‌ಫೀಲ್ಡ್ ಬೆಂಗಳೂರಿನಲ್ಲಿ ಪ್ರತಿ ಸೋಮವಾರ ಸಂಜೆ 5.30 ರಿಂದ 8.30ರ ವರೆಗೆ ಧ್ಯಾನ ಇರುತ್ತದೆ. ಪ್ರತಿ ಹುಣ್ಣಿಮೆ ಹಾಗೂ ಅಮಾವಾಸ್ಯೆ ದಿನದಂದು ವಿಶೇಷ ಧ್ಯಾನ ಶಿಬಿರ ನಡೆಸಲಾಗುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಮೂರು ದಿನ ಧ್ಯಾನ ಮತ್ತು ಆತ್ಮಜ್ಞಾನ ಯಜ್ಞ ಉಚಿತವಾಗಿ ನಡೆಯುತ್ತದೆ. ಈ ಕುರಿತು ಪಿಎಂಸಿ ಕನ್ನಡ ಚಾನಲ್ ಹಾಗೂ ಧ್ಯಾನ ಕಸ್ತೂರಿ ಮಾಸ ಪತ್ರಿಕೆಯಲ್ಲಿ ಮಾಹಿತಿ ಪ್ರಕಟಿಸಲಾಗುತ್ತದೆ.

**--- ವಿವರಗಳಿಗಾಗಿ ಸಂಪರ್ಕಿಸಿ ---**

**ಹೆಚ್. ಎನ್. ಶ್ರೀನಿವಾಸ ಮೊ. 94496 95503**
**ವಿಜಯಲಕ್ಷ್ಮೀ ಎಸ್. ಎನ್. ಮೊ. 80500 82689**



## ಮಾಸ್ಟರ್ ಆಗಿ ಬೆಳೆಯಬೇಕೆಂದರೆ...?

ಆಧ್ಯಾತ್ಮಿಕ ಮಾರ್ಗದಲ್ಲಿ ಮಾಸ್ಟರ್ ಅಂದರೆ ಸಾಮಾನ್ಯವಾದವನಲ್ಲ. ಮಾಸ್ಟರ್ ಅಂದರೆ ಗುರುವು. ಗುರುವು ಅಂದರೆ ಎಲ್ಲರಲ್ಲಿರುವ ಅಭಿಪ್ರಾಯ ಏನೆಂದರೆ ಪಾದಗಳ ಮೇಲೆ ಬೀಳಬೇಕು, ಪಾದಪೂಜೆ ಮಾಡಬೇಕೆಂಬ ಮೂಢತ್ವದಲ್ಲಿರುವವರು. ಗುರುವು ಎಂದೊಡನೆ ಮೂಢತ್ವದೊಳಗೆ ಹೋಗುತ್ತದೆಂದು 'ಮಾಸ್ಟರ್' ಎಂದು ಬದಲಾಯಿಸಿದರು.

ಅಂದರೆ ನೀವೆಲ್ಲರೂ ಭಾವಿ ಮಾಸ್ಟರ್. ಅಂದರೆ ಭಾವಿ ಗುರುಗಳು ಎಂದು ಅರ್ಥ. ಗುರುವು ಎನ್ನುವವನು ಎಲ್ಲರಂತೆ ವರ್ತಿಸಬಾರದು ಆದರ್ಶಪ್ರಾಯವಾಗಿರಬೇಕು. ನೀವು ಪರಿಪೂರ್ಣ ಆಧ್ಯಾತ್ಮಿಕ ಮಾಸ್ಟರ್ ಆಗಬೇಕೆಂದರೆ ನಿಜವಾದ ಆಧ್ಯಾತ್ಮಿಕ ಗುರುವಾಗಿ ತಯಾರಾಗಬೇಕೆಂದರೆ, ಮೊಟ್ಟಮೊದಲು ನೀವು ಕಲಿತುಕೊಳ್ಳ ಬೇಕಾದದ್ದು ಏನೆಂದರೆ ಸಂಪಾದಿಸಿಕೊಂಡ ಶಕ್ತಿಯನ್ನು ಕಳೆದುಕೊಳ್ಳದಂತೆ ಇರುವುದಕ್ಕೆ ಎಚ್ಚರದಿಂದ ಇರಬೇಕು.

**ಬ್ರಹ್ಮರ್ಷಿ ತಟವರ್ತಿ ವೀರ ರಾಘವ ರಾವ್**

**ರೂ. 50/-**

ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್, ಇಂಡಿಯಾ

ಧ್ಯಾನದ ಬಗ್ಗೆ ಮತ್ತಷ್ಟು ಸಮಾಚಾರಕ್ಕಾಗಿ ಈ ಕೆಳಗಿನ ವೆಬ್‌ಸೈಟ್ ಸಂಪರ್ಕಿಸಿ

http: //www.youtube.com/pmckannada

- www.meditationeverywhere.org
- www.pssmovement.org


## ಶ್ರೀರಾಮ ಪಬ್ಲಿಕೇಶನ್ಸ್

ಶ್ರೀ ರಾಮಧಾಮ ಧ್ಯಾನ ಮಂದಿರ, ನಾರಾಯಣಪ್ಪ ಗಾರ್ಡನ್
ವೈಟ್‌ಫೀಲ್ಡ್ ಬೆಂಗಳೂರು–560 066



ಸಂಪರ್ಕಿಸಿ: ಹೆಚ್.ಎನ್. ಶ್ರೀನಿವಾಸ ಮೊ. 9449695503
ವಿಜಯಲಕ್ಷ್ಮೀ ಎಸ್.ಎನ್. ಮೊ. 8050082689


ತಟವರ್ತಿ ವೀರರಾಘವರಾವ್, ರಾಜ್ಯಲಕ್ಷ್ಮೀ ಅವರ ಪುಸ್ತಕಗಳು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಈ QR Codeನ್ನು Google Lensನಲ್ಲಿ ಸ್ಕ್ಯಾನ್ ಮಾಡಿರಿ

Telugu Books | English Books | Hindi Books | Kannada Books | Tamil Books